ಉಳ್ಳಾಲ ವಾಣಿ
ವಾರ್ಷಿಕ ಚಂದಾದಾರಾಗಿರಿ
ಒಂದು ವರ್ಷ ಪೂರ್ತಿ ಪತ್ರಿಕೆ ಮನೆಗೆ ತಲುಪಿಸಲು
₹250 ವಾರ್ಷಿಕ

ಮಂಗಳೂರು ಜನವರಿ 19–ಫೆಬ್ರವರಿ 06: 2026 ಸಂಪುಟ 2, ಸಂಚಿಕೆ 12, ಪುಟಗಳು–8 RNI:KNKAN/26/A0422 www.ullalavani.com ullalavani@gmail.com ₹10

# ಉಳ್ಳಾಲ ವಾಣಿ

ಕನ್ನಡ ಪತ್ರಿಕೆ
ಕಡಲ ಮಗಳ್

ಸುದ್ದಿ, ಪತ್ರಿಕೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿರಿ
ಉಳ್ಳಾಲ ವಾಣಿ
ಅಪ್ಪಟ್ಟ ಕಾಂಪ್ಲೆಕ್ಸ್, ಯೆನೆಪೋಯ ಆಸ್ಪತ್ರೆ ಹತ್ತಿರ, ಕುತ್ತಾರುಪದವು
9972528110

ಪುಟ 2 ಮಂಜನಾಡಿ ಪ್ರಕರಣ, ತಾಂತ್ರಿಕ ತಂಡದಿಂದ ತನಿಖೆ ಆರಂಭ
ಪುಟ 3 ಉಳ್ಳಾಲ ತಾಲೂಕಿನ 10 ಕಡೆಗಳಲ್ಲಿ ಹಿಂದೂ ಸಂಗಮ
ಪುಟ 4 ಬಂಡಿಕೊಟ್ಯ ದೈವಸ್ಥಾನದಲ್ಲಿ ಪೂರ್ವಭಾವಿ ಸಭೆ
ಪುಟ 7 ಮೇಲ್ತೆನೆ ಇ–ಮ್ಯಾಗಜಿನ್ ಬಿಡುಗಡೆ

### ರಾಜ್ಯ ಕಬಡ್ಡಿ ತಂಡಕ್ಕೆ ಇರಾ ಗ್ರಾಮದ ಪ್ರತಿಭೆ

## ಭಾರತ್ ಫ್ರೆಂಡ್ಸ್ ಕ್ಲಬ್‌ನಿಂದ ಬೆಳೆದ ಕ್ರೀಡಾಪಟು ಸಲಾಹುದ್ದೀನ್ ಇರಾ

**ಇರಾ:** ಇಲ್ಲಿನ ಗ್ರಾಮದ ಕುರಿಯಾಡಿ ನಿವಾಸಿ ಸಲಾಹುದ್ದೀನ್ ಇರಾ ಅನ್ನುವ ಯುವ ಕಬಡ್ಡಿ ಪ್ರತಿಭೆ, ಕರ್ನಾಟಕ ರಾಜ್ಯದ ಜ್ಯೂನಿಯರ್ ತಂಡಕ್ಕೆ ಆಯ್ಕೆಗೊಳ್ಳುವ ಮೂಲಕ ಮುಂದಿನ ದಿನಗಳಲ್ಲಿ ರಾಷ್ಟ್ರಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಪ್ರತಿನಿಧಿಸಲಿದ್ದಾರೆ . ಇವರು ಹೆಚ್ಚು ಕಬಡ್ಡಿ ಆಟಗಾರರನ್ನು ಹೊಂದಿರುವ ಪ್ರಸಿದ್ಧ ಭಾರತ್ ಫ್ರೆಂಡ್ಸ್ ಕ್ಲಬ್ ಇರಾ ಇದರ ಸಕ್ರಿಯ ಸದಸ್ಯರಾಗಿದ್ದು, ಪ್ರಸ್ತುತ ಮಿಲಾಗ್ರಿಸ್ ಕಾಲೇಜಿನಲ್ಲಿ ಡಿಗ್ರಿ ತೃತೀಯ ವರ್ಷದ ವಿದ್ಯಾರ್ಥಿಯಾಗಿ ವಿದ್ಯಾಭ್ಯಾಸ ಮುಂದು ವರಿಸುತ್ತಿದ್ದಾನೆ.

ಬಾಲ್ಯದಲ್ಲಿಯೇ ಇರಾ ಗ್ರಾಮದಲ್ಲಿ ಪ್ರತಿವರ್ಷ ಆಯೋಜಿಸಲಾಗುತ್ತಿದ್ದ ರಾಜ್ಯ ಮಟ್ಟದ ಕಬಡ್ಡಿ



- **ಗ್ರಾಮೀಣ ಪ್ರದೇಶದಿಂದ ಹೊರಹೊಮ್ಮಿದ ಈ ಯುವ ಪ್ರತಿಭೆ, ಮುಂದಿನ ದಿನಗಳಲ್ಲಿ ರಾಷ್ಟ್ರಮಟ್ಟದ ಹಾಗೂ ಅಂತರರಾಷ್ಟ್ರೀಯ ಮಟ್ಟದ ಕಬಡ್ಡಿ ಪಂದ್ಯಗಳಲ್ಲಿ ಮಿಂಚುವ ಭರವಸೆಯನ್ನು ಮೂಡಿಸಿದ್ದಾರೆ.**

ಪಂದ್ಯಕೂಟಗಳು ಅವರ ಕ್ರೀಡಾ ಬದುಕಿನ ದಿಕ್ಕನ್ನೇ ಬದಲಾಯಿಸಿತು. ಕಬಡ್ಡಿ ಆಟಗಾರರ ಚುರುಕು, ದೈಹಿಕ ಸಾಮರ್ಥ್ಯ ಹಾಗೂ ತಂಡಾತ್ಮಕ ಆಟವನ್ನು ಹತ್ತಿರದಿಂದ ಕಂಡ ಅವರಿಗೆ ಕಬಡ್ಡಿಯ ಮೇಲಿನ ಆಸಕ್ತಿ ದಿನೇ ದಿನೇ ಗಟ್ಟಿಯಾಗಿ ಬೆಳೆದಿತ್ತು. ಈ ಆಸಕ್ತಿಗೆ ಸರಿಯಾದ ಮಾರ್ಗದರ್ಶನ ನೀಡಿದ್ದು ಭಾರತ್ ಫ್ರೆಂಡ್ಸ್ ಕ್ಲಬ್ ವತಿಯಿಂದ ಆಯೋಜಿಸಲಾಗುತ್ತಿದ್ದ ಕಬಡ್ಡಿ ತರಬೇತಿ ಶಿಬಿರಗಳು.

ಶಿಬಿರಗಳಲ್ಲಿ ಪಡೆದ ಶಿಸ್ತು ಬದ್ಧ ತರಬೇತಿ, ದೈಹಿಕ ಫಿಟ್‌ನೆಸ್ ಹಾಗೂ ತಾಂತ್ರಿಕ ಜ್ಞಾನ ಅವರ ಆಟಕ್ಕೆ ಬಲ ನೀಡಿತು. ಪರಿಣಾಮವಾಗಿ ಕೆಜಿ ಕಬಡ್ಡಿ ಪಂದ್ಯಕೂಟಗಳಲ್ಲಿ ಜಿಲ್ಲಾಮಟ್ಟದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ, ನಿರಂತರವಾಗಿ ಉತ್ತಮ ಆಟಗಾರನ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡು ಕಬಡ್ಡಿ ವಲಯದಲ್ಲಿ ಭರವಸೆಯ ಆಟಗಾರನಾಗಿ ಗುರುತಿಸಿಕೊಂಡಿದ್ದರು.

ಕಳೆದ ಮೂರು ವರ್ಷಗಳಿಂದ ಮಿಲಾಗ್ರಿಸ್ ಕಾಲೇಜಿನ ಕಬಡ್ಡಿ ಕೋಚ್ ಆಕಾಶ್ ಶೆಟ್ಟಿ ಅವರ ಮಾರ್ಗದರ್ಶನದಲ್ಲಿ ನಿರಂತರ ಅಭ್ಯಾಸ ನಡೆಸುತ್ತಿರುವ ಅವರು, ತನ್ನ ತಂತ್ರಜ್ಞಾನ, ವೇಗ, ಹಿಡಿತ ಹಾಗೂ ತಂಡದ

↘ 2ನೇ ಪುಟಕ್ಕೆ

### ಉಳ್ಳಾಲವಾಣಿ ಪ್ರತಿನಿಧಿಯ ಕಲ್ಪನೆ, ಪ್ರಧಾನಿ, ಕೇಂದ್ರ ಕೃಷಿ ಇಲಾಖೆಗೆ ಪತ್ರ

## ಗ್ರೀನ್ ಆರ್ಮಿ: ಪ್ರತ್ಯೇಕ ಕೃಷಿ ಪಡೆ

**ಮಂಗಳೂರು :** 'ಗ್ರೀನ್ ಆರ್ಮಿ' ಎಂಬುದು ಕೇವಲ ಘೋಷಣೆ ಅಲ್ಲ, ಇದು ಕೇಂದ್ರ ಅಥವಾ ರಾಜ್ಯ ಸರ್ಕಾರದ ಅಡಿಯಲ್ಲಿ ಸ್ಥಾಪಿಸಲ್ಪಡಬೇಕಾದ ಪ್ರತ್ಯೇಕ ಹಾಗೂ ಸಂಘಟಿತ ವಿಭಾಗವಾಗಿರಬೇಕು. ದೇಶದಲ್ಲಿ ಉದ್ಯೋಗವಿಲ್ಲದೆ ಇರುವ ಲಕ್ಷಾಂತರ ಯುವಜನರನ್ನು ಕೃಷಿ ಕ್ಷೇತ್ರದ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಸೆಳೆಯುವ ಉದ್ದೇಶವೇ ಈ ಗ್ರೀನ್ ಆರ್ಮಿಯ ಮೂಲ ತತ್ವವಾಗಿದೆ.



ಇದು ಉಳ್ಳಾಲವಾಣಿ ಪ್ರತಿನಿಧಿ ಕೆ.ವೈ ರಾವ್ ಇವರ ಕನಸಾಗಿದ್ದು, ಈ ಕುರಿತು ಕೇಂದ್ರ ಸರಕಾರವನ್ನು ಒತ್ತಾಯಿಸಿ ಪ್ರಧಾನಿಯವರಿಗೆ ಪತ್ರವನ್ನು ಬರೆಯಲಾಗಿದೆ.

ಈ ಯೋಜನೆಯಡಿ ಉದ್ಯೋಗವಿಲ್ಲದ ಯುವಕರನ್ನು ಪಾರದರ್ಶಕ ಆಯ್ಕೆ ಪ್ರಕ್ರಿಯೆಯ ಮೂಲಕ ನೇಮಕ ಮಾಡಬೇಕು. ಗ್ರಾಮೀಣ ಹಾಗೂ ಅರ್ಧನಗರ ಪ್ರದೇಶದ ವಿದ್ಯಾವಂತ ಯುವಕರಿಗೆ ಮೊದಲ ಆದ್ಯತೆ ನೀಡಬಹುದು. ನೇಮಕಗೊಂಡ ಯುವಕರಿಗೆ ಅನುಭವಸ್ಥ ಹಾಗೂ ನಿಪುಣ ರೈತರಿಂದ, ಕೃಷಿ ವಿಜ್ಞಾನಿಗಳಿಂದ, ಕೃಷಿ ವಿಜ್ಞಾನ ಕೇಂದ್ರಗಳು , ಕೃಷಿ ವಿಶ್ವವಿದ್ಯಾಲಯಗಳ ಸಹಕಾರದಿಂದ ಸಮಗ್ರ ತರಬೇತಿ ನೀಡಬೇಕು.

ಇದನ್ನು ಇನ್ನಷ್ಟು ಬಲಪಡಿಸುವ ನಿಟ್ಟಿನಲ್ಲಿ, ಇಸ್ರೇಲ್



(ಡ್ರಿಪ್ ನೀರಾವರಿ), ನೆದರ್‌ಲ್ಯಾಂಡ್ಸ್ (ಪ್ರಿಸಿಷನ್ ಫಾರ್ಮಿಂಗ್), ಜಪಾನ್ (ಉಚ್ಚ ಉತ್ಪಾದಕ ತಂತ್ರಜ್ಞಾನ), ಆಸ್ಟ್ರೇಲಿಯಾ (ಕೃಷಿ ಯಾಂತ್ರೀಕರಣ) ಮುಂತಾದ ದೇಶಗಳ ಆಧುನಿಕ ಕೃಷಿ ವಿಧಾನಗಳ ಬಗ್ಗೆ ವಿದೇಶಿ ತರಬೇತಿ ಅಥವಾ ವಿದೇಶಿ ತಜ್ಞರ ಮೂಲಕ ಭಾರತದಲ್ಲಿಯೇ ತರಬೇತಿ ನೀಡುವ ವ್ಯವಸ್ಥೆ ಕಲ್ಪಿಸಬೇಕು.

ಗ್ರೀನ್ ಆರ್ಮಿಯ ಕಾರ್ಯಕ್ಷೇತ್ರಗಳು ಹೀಗಿರಬಹುದು, ಖಾಲಿ ಬಿದ್ದಿರುವ ಕೃಷಿ ಭೂಮಿಗಳು, ಸರ್ಕಾರದ ಸ್ವಾಮ್ಯದ ಪಾಳು ಭೂಮಿಗಳು, ಗ್ರಾಮ ಮಟ್ಟದ ಸಹಕಾರಿ ಕೃಷಿ ಯೋಜನೆಗಳು, ಸಸ್ಯಸಾರ ಮತ್ತು ಹವಾಮಾನ ಸಹಿಷ್ಣು ಕೃಷಿ ವಲಯಗಳು.

ಸೈನಿಕ ಶಿಸ್ತು, ಸಂಘಟನೆ, ಹೊಣೆಗಾರಿಕೆ ಹಾಗೂ ಕಾರ್ಯಕ್ಷಮತೆಯನ್ನು ಮಾದರಿಯಾಗಿ ತೆಗೆದುಕೊಂಡು ಯುನಿಫಾರ್ಮ್, ಹುದ್ದಾ ವ್ಯವಸ್ಥೆ, ನಡವಳಿಕಾ ಸಂಹಿತೆ ಮತ್ತು ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹಧನಗಳನ್ನು ಗ್ರೀನ್ ಆರ್ಮಿಯಲ್ಲಿ ಅಳವಡಿಸಬಹುದು. ಇದರಿಂದ ಯುವಕರಲ್ಲಿ ಗರ್ವ, ಗೌರವ ಮತ್ತು ಹೊಣೆಗಾರಿಕೆಯ ಭಾವನೆ ಮೂಡುತ್ತದೆ.

### ಸ್ವಾವಲಂಬಿ ಭಾರತ ನಿರ್ಮಾಣದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆ

ಗ್ರೀನ್ ಆರ್ಮಿ ಯೋಜನೆಯಿಂದ ಆಹಾರ ಭದ್ರತೆ ಬಲಪಡಿಸುವುದು, ನಿರುದ್ಯೋಗ ಸಮಸ್ಯೆ ಕಡಿಮೆ ಮಾಡುವುದು, ಗ್ರಾಮೀಣ ವಲಸೆ ತಡೆಯುವುದು ಮತ್ತು ಕೃಷಿಗೆ ಮರ್ಯಾದೆ ತರುವುದು ಸಾಧ್ಯವಾಗು ತ್ತದೆ. ತರಬೇತಿ ಪಡೆದ ಸದಸ್ಯರು ಮುಂದಿನ ಹಂತದಲ್ಲಿ ಕೃಷಿ ಉದ್ಯಮಿಗಳು, ತರಬೇತಿದಾರರು ಮತ್ತು ಗ್ರಾಮೀಣ ನಾಯಕರಾಗಿ ಹೊರಹೊಮ್ಮಬಹುದು. ರಾಷ್ಟ್ರ ರಕ್ಷಣೆಯ ಜೊತೆಗೆ ರಾಷ್ಟ್ರ ಪೋಷಣೆಯ ಹೊಣೆ ಹೊತ್ತಂತಹ ಈ ಗ್ರೀನ್ ಆರ್ಮಿ, ಸ್ವಾವಲಂಬಿ ಭಾರತ ನಿರ್ಮಾಣದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಲಿದೆ ಎಂಬುದು ಆಶಯವಾಗಿದೆ. ಅದರಂತೆ ಸರಕಾರ ತುರ್ತಾಗಿ ಈ ಕುರಿತು ನಿರ್ಣಯ ತೆಗೆದುಕೊಂಡು ದೇಶದಾದ್ಯಂತ ಖಾಲಿ ಬಿದ್ದಿರುವ ಭೂಮಿಗಳಲ್ಲಿ ಕೃಷಿ ನಡೆಸುವ ಮುಖೇನ ಆಹಾರ ಸಾಮಗ್ರಿಗಳ ಬೆಲೆಯನ್ನು ಕೂಡಾ ಕಡಿಮೆ ಮಾಡಬಹುದು.

## ನರಿಂಗಾನ: ಕಂಬಳ ನಮ್ಮ ದೇಶದ ಆಸ್ತಿ, ಸಂಸ್ಕೃತಿಯ ಪ್ರತೀಕ: ಡಿ.ಕೆ.ಶಿವಕುಮಾರ್

**ನರಿಂಗಾನ ಲವ–ಕುಶ ಕಂಬಳೋತ್ಸವ**

**ಉಳ್ಳಾಲ:** ಇಂದು ಕರಾವಳಿ ಕರ್ನಾಟಕ್ಕೆ ರಾಜ್ಯ ಹಾಗೂ ದೇಶ ಮಟ್ಟದಲ್ಲಿ ವಿಶೇಷ ಗೌರವವಿದೆ. ಕರಾವಳಿ ಕರ್ನಾಟಕದ ಅಸ್ಮಿತೆಗೆ ಸಾಕ್ಷಿಯಾದ ಯಕ್ಷಗಾನ, ದೈವಾರಾಧನೆ ಹಾಗೂ ನಾಗಾರಾಧನೆ ಕರಾವಳಿಯ ವಿಶಿಷ್ಟ ಪರಂಪರೆಗೆ ಸಾಕ್ಷಿಯಾಗಿದ್ದು, ಇದು ಧಾರ್ಮಿಕವಾಗಿಯೂ ಎಲ್ಲರನ್ನು ಒಗ್ಗೂಡಿಸುವ ಶಕ್ತಿಯನ್ನು ಹೊಂದಿದೆ. ಇನ್ನೊಂದೆಡೆ ಸುದೀರ್ಘ ಇತಿಹಾಸ ಹೊಂದಿರುವ ಕಂಬಳ ಕ್ರೀಡೆ ಕರಾವಳಿಯ ಜೀವಾಳವೇ ಆಗಿದೆ. ಇವೆಲ್ಲದರ ಹೊರತು ಕರಾವಳಿಯನ್ನು ಕಲ್ಪಿಸುವುದೇ ಅಸಾಧ್ಯ ಎಂದು ಆಳ್ವಾಸ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಮೋಹನ್ ಆಳ್ವ ಅವರು ಹೇಳಿದರು.

ಅವರು ನರಿಂಗಾನದಲ್ಲಿ 4 ನೇ ವರ್ಷದ ಲವ– ಕುಶ ಕಂಬಳೋತ್ಸವದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.

ಕರಾವಳಿಯ ಜಾನಪದ ಕ್ರೀಡೆ ಕಂಬಳವು ನಾಡಿನ ಸಂಸ್ಕೃತಿ, ಆಚಾರ–ವಿಚಾರವನ್ನು ಬಿಂಬಿಸುವ ಒಂದು ಜೀವಂತ ಪರಂಪರೆ ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಬಣ್ಣಿಸಿದ್ದಾರೆ. ಜಾತಿ ಧರ್ಮ



ಮತ ಎಲ್ಲವನ್ನೂ ಮರೆತು ಈ ನಾಡಿನ ಸಂಪತ್ತನ್ನು ಕಾಪಾಡಿಕೊಂಡು ಬರುತ್ತಾ ಇದ್ದೀರಿ. ಹಗಲು ರಾತ್ರಿ ನಡೆಯುವ ಕಂಬಳವನ್ನು ವೀಕ್ಷಿಸಿ, ಪ್ರೋತ್ಸಾಹಿಸುವ ಮೂಲಕ ಉಳಿಸಿ ಬೆಳೆಸಿಕೊಂಡು ಬಂದಿದ್ದೀರಿ ಇದಕ್ಕೆ ನಿಮಗೆಲ್ಲರಿಗೂ ಅಭಿನಂದನೆಗಳು ಸಲ್ಲಬೇಕು ಎಂದರು.

ವಿಧಾನಸಭಾ ಅಧ್ಯಕ್ಷರಾದ ಯು.ಟಿ.ಖಾದರ್ ಅವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಕಂಬಳ ಓಟ ಕೇವಲ ಮನರಂಜನೆ ಮಾತ್ರವಲ್ಲ ನಮ್ಮ ಕರಾವಳಿಯ ಜಾನಪದೀಯ ಹಾಗೂ ಈ ಮಣ್ಣಿನ ಸೌಹಾರ್ದತೆಯ ಕ್ರೀಡೆಯಾಗಿದೆ.ಈ ಕಂಬಳ ಪರಂಪರೆಯನ್ನು ಉಳಿಸಿ



ಮುಂದುವರಿಸಿಕೊಂಡು ಹೋಗಬೇಕಾಗಿದೆ. ಸರಕಾರ ವತಿಯಿಂದಲೂ ಕೂಡಾ ಕಂಬಳಕ್ಕೆ ಅನುದಾನ ಒದಗಿಸಿ ಪ್ರೋತ್ಸಾಹಿಸುವ ಕಾರ್ಯ ಆಗಬೇಕಿದೆ ಎಂದರು.

ಮಾಣಿಲದ ಶ್ರೀ ಮೋಹನದಾಸ ಸ್ವಾಮೀಜಿ ಅವರು ಆಶೀರ್ವಚನ ನೀಡಿದರು.

ಒಡಿಯೂರು ಗುರುದೇವಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಕಂಬಳದ ಹಿಂದೆ ಒಂದು ಧಾರ್ಮಿಕ ಭಾವನೆ ಇದೆ. ಇದು ಕೃಷಿ ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿದೆ. ತುಳು ಭಾಷೆ, ಸಂಸ್ಕೃತಿ ಉಳಿಯಬೇಕಾದರೆ ಇಂತಹ ಕಾರ್ಯಗಳು ಆಗಬೇಕು, ತುಳುವಿಗೆ ಮಾನ್ಯತೆ ಸಿಗಬೇಕು ಎಂದರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಜಿಲ್ಲಾ ಉಸ್ತುವಾರಿ ಸಚಿವರಾದ ದಿನೇಶ್ ಗುಂಡುರಾವ್, ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ, ಎಐಸಿಸಿ ಕಾರ್ಯದರ್ಶಿ ಶ್ರೀನಿವಾಸ್,

↘ 2ನೇ ಪುಟಕ್ಕೆ

> **ಪ್ರತೀ ಕಂಬಳಕ್ಕೆ ಐದು ಲಕ್ಷ ರೂ.**
> **ಕಂಬಳದಲ್ಲಿ ಸೇರಿರುವ ಜನರ ಉತ್ಸಾಹ ನೋಡಿದಾಗ ಕಂಬಳದ ಮಹತ್ವ ಗೊತ್ತಾಗುತ್ತದೆ. ನಮ್ಮ ಸಂಸ್ಕೃತಿಯ ಉಳಿವಿಗಾಗಿ ಹಾಗೂ ವಿಧಾನಸಭಾ ಅಧ್ಯಕ್ಷರಾದ ಯು.ಟಿ.ಖಾದರ್ ಅವರ ಮುಂದಿನ ವರ್ಷದಿಂದ ಟೂರಿಮ ಅನುದಾನದೊಂದಿಗೆ 24 ಕಂಬಳಕ್ಕೂ ತಲಾ ಐದು ಲಕ್ಷ ಒದಗಿಸಿಕೊಡುವ ಕೆಲಸ ಸರಕಾರದ ವತಿಯಿಂದ ಮಾಡಲಿದ್ದೇವೆ.**
> ■ ಎಚ್.ಕೆ. ಪಾಟೀಲ್
> ಪ್ರವಾಸೋದ್ಯಮ ಸಚಿವ

## ಕಾಪಿಕಾಡು ಶ್ರೀ ಉಮಾಮಹೇಶ್ವರಿ ಕ್ಷೇತ್ರದ ಬ್ರಹ್ಮಕಲಶ ಪ್ರಯುಕ್ತ ಚಪ್ಪರ ಮುಹೂರ್ತ ಸಂಪನ್ನ



**ಉಳ್ಳಾಲ:** ತೊಕ್ಕೊಟ್ಟು, ಕಾಪಿಕಾಡುವಿನ ಶ್ರೀ ಉಮಾಮಹೇಶ್ವರಿ ಕ್ಷೇತ್ರದಲ್ಲಿ ಫೆ.1ರಿಂದ 6ರ ತನಕ ಬ್ರಹ್ಮಕಲಶೋತ್ಸವ ನಡೆಯಲಿದ್ದು, ಆ ಪ್ರಯುಕ್ತ ಕ್ಷೇತ್ರದಲ್ಲಿ ಚಪ್ಪರ ಮುಹೂರ್ತದ ಧಾರ್ಮಿಕ ವಿಧಿ ವಿಧಾನಗಳು ಕ್ಷೇತ್ರದ ಪ್ರಧಾನ ಅರ್ಚಕ ಶ್ರೀ ಪರಮೇಶ್ವರ ಜೋಷಿ ನೇತೃತ್ವದಲ್ಲಿ ನಡೆಯಿತು.

ಉಮಾಮಹೇಶ್ವರಿ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಎ.ಜೆ.ಶೇಖರ್, ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ದಿನೇಶ್, ಕೆ.ಅತ್ತಾವರ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಸತೀಶ್ ಕುಂಪಲ, ಕಾರ್ಯಾಧ್ಯಕ್ಷ ಸುರೇಶ್ ಭಟ್ನಗರ, ಗೌರವ ಸಲಹೆಗಾರ ಕೆ.ಟಿ.ಸುವರ್ಣ,

- **ಫೆ.1ರಿಂದ 6ರ ತನಕ ಬ್ರಹ್ಮಕಲಶೋತ್ಸವ ನಡೆಯಲಿದೆ.**
- **ಕ್ಷೇತ್ರದ ಪ್ರಧಾನ ಅರ್ಚಕ ಶ್ರೀ ಪರಮೇಶ್ವರ ಜೋಷಿ ನೇತೃತ್ವ ವಹಿಸಲಿದ್ದಾರೆ.**

ಉಪಾಧ್ಯಕ್ಷರಾದ ಚಂದ್ರಹಾಸ್ ಪಂಡಿತ್ ಹೌಸ್, ಪ್ರಶಾಂತ್ ಕಾಪಿಕಾಡು, ಪ್ರಧಾನ ಕಾರ್ಯದರ್ಶಿ ಗೋಪಿನಾಥ್ ಕಾಪಿಕಾಡು, ಕ್ಷೇತ್ರದ ಮೊಕ್ತೇಸರರಾದ ಡಾ.ರಾಮಕೃಷ್ಣ ಶೆಟ್ಟಿ, ರಘುರಾಮ ಶೆಟ್ಟಿ ಕೊಸಪ್ಪ ಗಟ್ಟಿ, ನಿರ್ಮಲಾ ಕುಂಜಬು, ಉಗ್ರಾಣ ಸಮಿತಿ ಅಧ್ಯಕ್ಷ ದಿನೇಶ್ ಕಾಜವ, ಸ್ವಾಗತ ಸಮಿತಿ ಸಂಚಾಲಕ ಪ್ರಶಾಂತ್ ಚೌಟ,

↘ 2ನೇ ಪುಟಕ್ಕೆ

### ಪರಂಪರೆಯಿಂದ ಪರಿಪೂರ್ಣತೆಯತ್ತ ಶ್ರೀ ಶ್ರೀ ನಿತಿನ್ ನರೇಂದ್ರನಾಥ ಯೋಗೇಶ್ವರೇಶ್ವರ ಸ್ವಾಮಿಗಳ ದಿವ್ಯ ಸಾಧನೆ

## ಶ್ರೀ ಶ್ರೀ ನಿತಿನ್ ನರೇಂದ್ರನಾಥ ಯೋಗೇಶ್ವರೇಶ್ವರ ಸ್ವಾಮಿ ಮಠಾಧಿಪತಿಗಳು, ಶ್ರೀ ಗುರುಪರಾಶಕ್ತಿ ಮಠ ಮರಕಡ

**ಮಂಗಳೂರು:** ಪುಣ್ಯ ಭೂಮಿ, ಕರ್ಮ ಭೂಮಿ ಎಂದು ಗುರುತಿಸಲ್ಪಟ್ಟಿರುವ ನಮ್ಮೀ ಭರತವರ್ಷ ದಿವ್ಯ ಸನಾತನತೆಯ ಮೂಲ ಕ್ಷೇತ್ರಮಾತ್ರವಲ್ಲ, ಭಗವತ್ ತತ್ವದ ಲೀಲಾ ಕ್ಷೇತ್ರವೂ ಆಗಿದೆ. ಪರಮ ಪೂಜ್ಯ ಶ್ರೀ ಶ್ರೀ ನರೇಂದ್ರನಾಥ ಯೋಗೇಶ್ವರೇಶ್ವರ ಮಹಾಸ್ವಾಮಿಯವರ ನುಡಿ ಸಂದೇಶದಂತೆ 'ಮಾಯಾತೀತನೋರ್ವ ಮಾಯೆಯೊಳಗೆ ಬಂದ ಚಿಂತನ' ಇದು.'ಮತ್ತೆ ಮತ್ತೆ ಹುಟ್ಟಿ ಬರುವೆ' ಅಂದ ಭಗವತ್ ವಾಣಿಯಂತೆ ಅನೇಕಾನೇಕ ಸಾಧು ಸಂತರು ಮಹಾ ಮಹರ್ಷಿಗಳು, ಯುಗಪುರುಷರು ಪ್ರತೀ ಯುಗಯುಗಗಳಲ್ಲಿಯೂ ಇಲ್ಲಿ ಅವತರಿಸಿರುವುದಂತೂ ನಿತ್ಯ ಸತ್ಯ.

ಮೂವತ್ತು ವರುಷಗಳ ಹಿಂದೆ ವಿರಾಟ್ ತತ್ವದ ಪೂರ್ಣ ಆವಿರ್ಭಾವ ತನ್ನೊಳಗೇ ಆದಾಗ, ಸಾಮಾನ್ಯ ಜೀವಿತದಿಂದ ಭಿನ್ನರಾಗಿ ಪೂರ್ಣ ದೈವಿಕ ಚಿಂತನದೊಳಗೆ ತನ್ನನ್ನು ತೊಡಗಿಸಿಕೊಂಡವರು ಪರಮಪೂಜ್ಯರು. ಅಂದಿನಿಂದ ಹಗಲಿರುಳೆನ್ನದೆ ಅವಿರತವಾಗಿ ತನ್ನೆಡೆಗೆ ಬಂದ ನೋವಿನ ನೋವನ್ನೇ ಉಣ್ಣುತ್ತಿರುವ ಜನಮಾನಸಕ್ಕೆ ಸಾಂತ್ವನ ಕೊಡುವ ಕಾರ್ಯ ಅವರಿಂದಾಯಿತು. ಜನುಮ ಜನುಮಾಂತರಗಳಲ್ಲಿ ನಾವೇ ಮಾಡಿದ ಕರ್ಮದುರಿತಗಳಿಂದ





ಬಿಡುಗಡೆಗೊಳ್ಳಲು ಪ್ರಾಯಶ್ಚಿತ್ತಪೂರ್ವಕವಾದ ಕಣ್ಣೀರ ತರ್ಪಣದೊಂದಿಗೆ ಕ್ಷಮಾ ಯಾಚನೆಯ ಪ್ರಾರ್ಥನೆಯ ಸುಲಭ ಪರಿಹಾರದ ದಾರಿ ತೋರಿದರು. ಕಾಲಗರ್ಭದೊಳಗೆ ಹುದುಗಿ ಹೋಗಿದ್ದ ಅಸಂಖ್ಯ ದೇವ ಚೈತನ್ಯಗಳನ್ನು ಉದ್ದೀಪನಗೊಳಿಸಿ ಸಾಮೂಹಿಕ ಕರಸೇವೆಯ ಮೂಲಕ ಬೆವರ ತರ್ಪಣ ಕೊಡಿಸಿ ಅಸಂಖ್ಯ ದೇಗುಲಗಳ, ನಾಗಾಲಯಗಳ ಪುಣ್ಯ ತೀರ್ಥಗಳ ಪುನರ್ ಸೃಷ್ಟಿಗೆ ಕಾರಣೀಭೂತರಾದರು.

ಸನಾತನತೆಯ ವಿರಾಟಪುರುಷನನ್ನು ಮತ್ತೆದ್ದು ನಿಲ್ಲಿಸುವ ಮಹೋನ್ನತ ಸಂಕಲ್ಪದಂತೆ ತನ್ನವೈಖರೀ ವೃತ್ತಿಯಿಂದ ಪ್ರತಿಪಾದಿತವಾದ ಸನಾತನತೆಯ ಮೂಲತತ್ವವನ್ನು ಜೀವನಧರ್ಮವಾಗಿಸಿಕೊಂಡು, ಆತ್ಮೋನ್ನತಿಯ ಪಥದತ್ತ ಸಾಗುವವರಿಗೆ ಆತ್ಮತತ್ವ ಉದ್ದೀಪನಗೊಳಿಸಿಕೊಳ್ಳಲು ಭವ್ಯಆಧ್ಯಾತ್ಮಕೇಂದ್ರವನ್ನು ಸಂಸ್ಥಾಪಿಸಿದ್ದಾರೆ. ಅದುವೇ ಭಾವುಕ ಭಕ್ತ ಸಂದೋಹವ ದಿವ್ಯಾನುಭೂತಿಯತ್ತ ಕೊಂಡೊಯ್ಯುವ "ಶ್ರೀ ಗುರುಪರಾಶಕ್ತಿ ಮಠ ಮರಕಡ".

ದರ್ಶನ ಪದ್ಧತಿ ಇದು ಭಾರತೀಯ ಆರಾಧನಾ ಪರಂಪರೆಯ ವಿಶಿಷ್ಟ ಚಿಂತನ. ಮರಕಡದ ದೇವ ನಡೆಯಲ್ಲಿ

↘ 6ನೇ ಪುಟಕ್ಕೆ

### ಉನ್ನತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದವರು

**ದೇಶದ ಅತ್ಯುನ್ನತ ವೈಜ್ಞಾನಿಕ ಸಂಸ್ಥೆಯಾದ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ, ತಂತ್ರಾಂಶ ರಕ್ಷಣಾವಲಯದಲ್ಲಿ ಸೈಬರ್ ಸೆಕ್ಯೂರಿಟಿ ಹಾಗೂ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ವಿಭಾಗದಲ್ಲಿ ಪರಿಣಿತರಾಗಿ, ಎರಡು ದಶಕಗಳ ಕಾರ್ಯಾವಧಿಯಲ್ಲಿ ಜಗದ್‌ವಿಖ್ಯಾತ ಬಹುರಾಷ್ಟ್ರೀಯ ಸಂಸ್ಥೆಗಳಾದ Qualcomm Intel, ಮುಂತಾದ ಸಂಸ್ಥೆಗಳಲ್ಲಿ ತಂತ್ರಾಂಶ ರಕ್ಷಣಾವಲಯದಲ್ಲಿ ಉನ್ನತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದವರು.**



www.ullalavani.com
ullalavani@gmail.com
ಉಳ್ಳಾಲ ವಾಣಿ

## ಸಂಪಾದಕೀಯ

### ಸಾಮಾಜಿಕ ಜಾಲತಾಣಗಳಲ್ಲಿ ರಾಜ್ಯದ ಜನ ಸೇವಕರ ವಿರುದ್ಧ ಅಸಹನೀಯ ಟೀಕೆಗಳು ಏಕೆ?

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳನ್ನು ಗಮನಿಸಿದರೆ, ಜನಸೇವಕರಾಗಬೇಕಾದ ಶಾಸಕರು, ಸಚಿವರು ಹಾಗೂ ಸಾರ್ವಜನಿಕ ಸೇವಕರ ವಿರುದ್ಧದ ಟೀಕೆಗಳು ಮಿತಿಮೀರಿರುವುದು ಸ್ಪಷ್ಟವಾಗಿ ಕಾಣುತ್ತದೆ. ಟೀಕೆ ಎಂಬುದು ಆರೋಗ್ಯಕರ ಜನತಂತ್ರದ ಅವಿಭಾಜ್ಯ ಅಂಗವೇ ಆಗಿದ್ದರೂ, ಇಂದು ಅದು ಅನೇಕ ಸಂದರ್ಭಗಳಲ್ಲಿ ಶಿಷ್ಟಾಚಾರ ಮೀರಿದ ನಿಂದನೆ, ಅವಮಾನ, ವೈಯಕ್ತಿಕ ದಾಳಿಗಳ ರೂಪಕ್ಕೆ ತಿರುಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಈ ಪರಿಸ್ಥಿತಿಗೆ ಕಾರಣ ಒಂದೇ ಅಲ್ಲ. ಮೊದಲನೆಯದಾಗಿ, ಜನರ ನಿರೀಕ್ಷೆ ಮತ್ತು ನೆಲದ ಮಟ್ಟದ ವಾಸ್ತವ್ಯಗಳ ನಡುವಿನ ಅಂತರ ದಿನೇದಿನೇ ಹೆಚ್ಚುತ್ತಿದೆ. ಚುನಾವಣೆ ಸಮಯದಲ್ಲಿ ಜನಸೇವಕರು ನೀಡುವ ಭರವಸೆಗಳು ಬಹಳ ದೊಡ್ಡವಾಗಿರುತ್ತವೆ. ಆದರೆ ಅಧಿಕಾರಕ್ಕೆ ಬಂದ ನಂತರ ಅವುಗಳು ಕಾರ್ಯರೂಪಕ್ಕೆ ಬಾರದಾಗ ಜನರಲ್ಲಿ ನಿರಾಸೆ, ಅಸಮಾಧಾನ ಮತ್ತು ಆಕ್ರೋಶ ಉಂಟಾಗುವುದು ಸಹಜ. ಈ ಆಕ್ರೋಶಕ್ಕೆ ಸಾಮಾಜಿಕ ಜಾಲತಾಣಗಳು ತಕ್ಷಣದ ಹೊರಹೋಗುವ ದ್ವಾರವಾಗಿವೆ.

ಎರಡನೆಯದಾಗಿ, ಭ್ರಷ್ಟಾಚಾರ, ಪಕ್ಷಪಾತ, ಅಧಿಕಾರದ ದುರುಪಯೋಗ, ಜನಸಾಮಾನ್ಯರ ಸಮಸ್ಯೆಗಳತ್ತ ನಿರ್ಲಕ್ಷ್ಯ ಎಂಬ ಆರೋಪಗಳು ನಿರಂತರವಾಗಿ ಕೇಳಿಬರುತ್ತಿವೆ. ಎಲ್ಲ ಆರೋಪಗಳು ಸತ್ಯವೇ ಎನ್ನುವುದಿಲ್ಲ. ಆದರೆ ಇಂತಹ ಆರೋಪಗಳು ಸಾರ್ವಜನಿಕ ನಂಬಿಕೆಯನ್ನು ಕುಗ್ಗಿಸುತ್ತವೆ. ನಂಬಿಕೆ ಕುಸಿದಾಗ ಗೌರವವೂ ಕುಸಿಯುತ್ತದೆ. ಇದರಿಂದಾಗಿ ಜನಸೇವಕರ ಬಗ್ಗೆ ಮಾತನಾಡುವಾಗ ಜನರು ಸಂಯಮ ಕಳೆದುಕೊಳ್ಳುವ ಪ್ರವೃತ್ತಿ ಹೆಚ್ಚಾಗಿದೆ.

ಮೂರನೆಯದಾಗಿ, ಸಾಮಾಜಿಕ ಜಾಲತಾಣಗಳ ಸ್ವಭಾವವೇ ಈ ಸಮಸ್ಯೆಗೆ ಇಂಧನ ಹಾಕುತ್ತಿದೆ. ಮೊಬೈಲ್ ಫೋನ್ ಕೈಯಲ್ಲಿದ್ದರೆ ಸಾಕು, ಯಾರ ಮೇಲಾದರೂ ಏನೇ ಬೇಕಾದರೂ ಹೇಳಬಹುದಾದ ಭಾವನೆ ಕೆಲವರಲ್ಲಿ ಬೆಳೆದಿದೆ. ಮುಖಾಮುಖಿಯಾಗಿ ಹೇಳಲು ಧೈರ್ಯವಿಲ್ಲದ ಮಾತುಗಳನ್ನು ಆನ್‌ಲೈನ್‌ನಲ್ಲಿ ಅತಿರೇಕವಾಗಿ ಹೇಳುವುದು, ತಪ್ಪು ಮಾಹಿತಿಯನ್ನು ಪರಿಶೀಲಿಸದೆ ಹಂಚಿಕೊಳ್ಳುವುದು, ಗುಂಪು ಮನೋಭಾವದಲ್ಲಿ ನಿಂದನೆಗೆ ಇಳಿಯುವುದು ಸಾಮಾನ್ಯವಾಗುತ್ತಿದೆ. ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಮತ್ತು ಅಸಭ್ಯತೆ ನಡುವಿನ ಗಡಿ ಮರೆತು ಹೋಗುತ್ತಿರುವುದು ದುರಂತ.

ಇದರಿಂದ ಜನತಂತ್ರದ ಮೂಲ ತತ್ವಗಳೇ ಹಾನಿಗೊಳಗಾಗುತ್ತಿವೆ. ಜನತಂತ್ರದಲ್ಲಿ ಪ್ರಶ್ನೆ ಕೇಳುವುದು, ಆಡಳಿತವನ್ನು ಟೀಕಿಸುವುದು ಜನರ ಹಕ್ಕು. ಆದರೆ ಆ ಟೀಕೆ ಸತ್ಯಾಧಾರಿತವಾಗಿರಬೇಕು, ವಿಷಯನಿಷ್ಠವಾಗಿರಬೇಕು ಮತ್ತು ಶಿಷ್ಟಾಚಾರದ ಮಿತಿಯೊಳಗಿರಬೇಕು. ವ್ಯಕ್ತಿಗತ ನಿಂದನೆ, ಕುಟುಂಬದ ಮೇಲೆ ದಾಳಿ, ಜಾತಿ ಧರ್ಮದ ಆಧಾರದ ಅವಹೇಳನ ಯಾವ ರೀತಿಯಲ್ಲೂ ಸಮರ್ಥನೀಯವಲ್ಲ. ಇನ್ನೊಂದು ಕಡೆ, ಜನಸೇವಕರ ಜವಾಬ್ದಾರಿಯನ್ನೂ ಮರೆತರೆ ಆಗದು. ಶಾಸಕರು ಮತ್ತು ಸಾರ್ವಜನಿಕ ಸೇವಕರು ಜನರ ಧ್ವನಿಗೆ ಸ್ಪಂದಿಸಬೇಕು. ಸಾಮಾಜಿಕ ಜಾಲತಾಣಗಳನ್ನು ಕೇವಲ ಪ್ರಚಾರದ ಸಾಧನವಾಗಿ ಅಲ್ಲ, ಜನರ ಪ್ರಶ್ನೆಗಳಿಗೆ ಉತ್ತರ ನೀಡುವ, ಸಮಸ್ಯೆಗಳನ್ನು ಅರಿಯುವ ವೇದಿಕೆಯಾಗಿ ಬಳಸಬೇಕು. ಪಾರದರ್ಶಕ ಆಡಳಿತ, ಸಮಯಕ್ಕೆ ಸರಿಯಾದ ಮಾಹಿತಿ, ಪ್ರಾಮಾಣಿಕ ಪ್ರಯತ್ನಗಳು ಜನರ ನಂಬಿಕೆಯನ್ನು ಮರುಸ್ಥಾಪಿಸಬಲ್ಲವು. ಜನರೊಂದಿಗೆ ಸಂವಾದ ಹೆಚ್ಚಾದಂತೆ ಅಸಮಾಧಾನವೂ ಕಡಿಮೆಯಾಗುತ್ತದೆ.

ಸಾರಾಂಶವಾಗಿ ಹೇಳಬೇಕಾದರೆ, ಇಂದಿನ ಸಾಮಾಜಿಕ ಜಾಲತಾಣಗಳ ವಾತಾವರಣವು ಜನರ ಅಸಮಾಧಾನವನ್ನು ಹೊರಹಾಕುತ್ತಿರುವ ಕನ್ನಡಿ. ಆದರೆ ಆ ಕನ್ನಡಿ ಅಸಭ್ಯತೆಯ ಪ್ರತಿಬಿಂಬವಾಗಬಾರದು. ಜನರೂ ಜವಾಬ್ದಾರಿಯಿಂದ ಮಾತನಾಡಬೇಕು, ಜನಸೇವಕರೂ ಹೊಣೆಗಾರಿಕೆಯಿಂದ ಕೆಲಸ ಮಾಡಬೇಕು. ಪರಸ್ಪರ ಗೌರವ, ಸಂಯಮ ಮತ್ತು ಹೊಣೆಗಾರಿಕೆಯೇ ಆರೋಗ್ಯಕರ ಜನತಂತ್ರದ ನಿಜವಾದ ಮೂಲ.

**ಸಂಪಾದಕ**

# ಕಾಲೇಜು ವಿದ್ಯಾರ್ಥಿಗಳ ಮಾದಕ ದ್ರವ್ಯ ತಪಾಸಣೆ

**ಉಳ್ಳಾಲ:** ದೇರಳಕಟ್ಟೆ ಭಾಗದ ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಮಾದಕ ವಸ್ತು ದುರುಪಯೋಗ ತಡೆಗಟ್ಟುವ ಉದ್ದೇಶದಿಂದ ಉಳ್ಳಾಲ ಮತ್ತು ಕೊಣಾಜೆ ಪೊಲೀಸರು ಕೇರಳ ತೆರಳುವ ಕಾಲೇಜು ಬಸ್ಸುಗಳನ್ನು ತಡೆದು ಬೀರಿ ಕೋಟೆಕಾರು ಮತ್ತು ಅಸೈಗೋಳಿಯಲ್ಲಿ ಜಂಟಿಯಾಗಿ ದಿಢೀರ್ ಮಾದಕ ವಸ್ತು ಪರೀಕ್ಷಾ ಕಾರ್ಯಾಚರಣೆಯನ್ನು ನಡೆಸಿದರು. ಕೊಣಾಜೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪಿ.ಎ. ಕಾಲೇಜಿನ ಎರಡು ಬಸ್‌ಗಳನ್ನು ತಡೆದು 87 ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲಾಗಿದ್ದು, ಎಲ್ಲರ ಫಲಿತಾಂಶವೂ ನೆಗೆಟಿವ್ ಆಗಿದೆ. ಇದು ಅತ್ಯಂತ ಸಕಾರಾತ್ಮಕ ಬೆಳವಣಿಗೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇದೇರೀತಿ ಉಳ್ಳಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಖಾಸಗಿ ಬಸ್‌ಗಳು ಹಾಗೂ ಕಾಲೇಜು ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದ ವಿದ್ಯಾರ್ಥಿಗಳನ್ನು ಪರೀಕ್ಷೆ ನಡೆಸಲಾಯಿತು. ಇಲ್ಲಿವರೆಗೆ ಒಟ್ಟು 103 ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲಾಗಿದ್ದು, ಅವರಲ್ಲಿ 101 ಮಂದಿಯ ವರದಿ ನೆಗೆಟಿವ್ ಆಗಿದೆ. ಇನ್ನೂ 10 ಪರೀಕ್ಷೆಗಳು ಪ್ರಗತಿಯಲ್ಲಿದ್ದು, ದಿನಾಂತ್ಯಕ್ಕೆ ಒಟ್ಟು ಸುಮಾರು 200 ವಿದ್ಯಾರ್ಥಿಗಳಿಗೆ ಮಾದಕ ವಸ್ತು ಪರೀಕ್ಷೆ ಪೂರ್ಣಗೊಳ್ಳಲಿದೆ. ಒಬ್ಬ ವಿದ್ಯಾರ್ಥಿ ಪರೀಕ್ಷೆಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದ್ದು, ಆತನ ವಿರುದ್ಧ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಉಳಿದ ಎಲ್ಲ ವಿದ್ಯಾರ್ಥಿಗಳ ವರದಿ ನೆಗೆಟಿವ್ ಆಗಿದೆ.

# ಮಂಜನಾಡಿ ಗುಡ್ಡ ಕುಸಿತ ಪ್ರಕರಣ ಎನ್‌ಐಟಿಕೆ ಅಧಿಕಾರಿಗಳ ತಂಡದಿಂದ ತಾಂತ್ರಿಕ ತನಿಖೆ ಆರಂಭ



**ಉಳ್ಳಾಲ:** ಮಂಜನಾಡಿ ಕೊಪ್ಪಲಕೋಡಿಯಲ್ಲಿ ಗುಡ್ಡ ಕುಸಿದು ಮಕ್ಕಳು , ಅಜ್ಜಿ ಸಾವನ್ನಪ್ಪಿ ಎರಡು ಕಾಲುಗಳನ್ನು ಕಳೆದುಕೊಂಡ ಅಶ್ವಿನಿ ಪ್ರಕರಣಕ್ಕೆ ಸಂಬಂಧಿಸಿ ಅಶ್ವಿನಿ ಹಾಗೂ ಮನೆಮಂದಿ ನ್ಯಾಯಕ್ಕಾಗಿ ನಡೆಸುತ್ತಿರುವ ಹೋರಾಟದ ಭಾಗವಾಗಿ ಎನ್‌ಐಟಿಕೆ ಅಧಿಕಾರಿಗಳ ತಂಡದಿಂದ ತಾಂತ್ರಿಕ ತನಿಖೆ ಆರಂಭವಾಗಿದೆ. ಎನ್ ಐಟಿಕೆ ಸಂಸ್ಥೆಯ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಇಬ್ಬರು ಅಸೋಸಿಯೇಟ್ ಪ್ರೊಫೆಸರ್ ಗಳು ಜಿಲ್ಲಾ ಪಂಚಾಯತ್ ಇಂಜಿನಿಯರುಗಳು ಹಾಗೂ ಮಂಜನಾಡಿ ಗ್ರಾ.ಪಂ ಸಿಬ್ಬಂದಿಯೊಂದಿಗೆ ಭೇಟಿ ನೀಡಿ ವರದಿ ಪಡೆದುಕೊಂಡಿದ್ದಾರೆ. ಎನ್ ಐಟಿಕೆ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಪ್ರೊಫೆಸರ್ ಗಳಾದ ಡಾ.ಪಳನಿಸಾಮಿ ಟಿ., ಡಾ. ಶ್ರೀವಲ್ಸಾ ಕೊಳಥಾಯರ್ ವರದಿ ಪಡೆದುಕೊಂಡಿದ್ದಾರೆ. ಮಂಜನಾಡಿಯಲ್ಲಿ ಸಂಭವಿಸಿದ ಭೀಕರ ಗುಡ್ಡ ಕುಸಿತದ ದುರಂತವು ಕೇವಲ ಪ್ರಕೃತಿ ವಿಕೋಪವಲ್ಲ. ಸ್ಥಳೀಯ ಗ್ರಾಮ ಪಂಚಾಯತ್‌ಗಳ ಆಡಳಿತ ವೈಫಲ್ಯದಿಂದ ನಡೆದಿದೆ. ಈ ದುರ್ಘಟನೆಯಲ್ಲಿ ಇಬ್ಬರು ಅಮಾಯಕ ಮಕ್ಕಳು ಹಾಗೂ ಅವರ ಅಜ್ಜಿ ಸಾವನ್ನಪ್ಪಿದ್ದು, ತಾಯಿ ಎರಡು ಕಾಲುಗಳನ್ನು ಮತ್ತು ಅಜ್ಜ ಒಂದು ಕಾಲನ್ನು ಕಳೆದುಕೊಂಡು ಶಾಶ್ವತ ಅಂಗವೈಕಲ್ಯಕ್ಕೆ ಒಳಗಾಗಿದ್ದಾರೆ. ಪ್ರಕರಣ ಸಂಬಂಧಿಸಿ ಅಪಾಯಕಾರಿ ಪ್ರದೇಶವೆಂದು ಗುರುತಿಸಲ್ಪಟ್ಟ 70 ಫೀಟ್ ಗುಡ್ಡದ ಬಳಿ ರಸ್ತೆ ನಿರ್ಮಾಣಕ್ಕೆ ಅನುಮತಿ ನೀಡಿದವರು ಯಾರು? ಭೂಉಪಯೋಗ ನಿಯಮಗಳನ್ನು ಉಲ್ಲಂಘಿಸಿ ನಡೆದ ಚರಂಡಿ, ಮಣ್ಣು ತೆಗೆಯುವ ಹಾಗೂ ಭೂಮಿಯ ಸ್ವರೂಪ ಬದಲಾವಣೆ ಕಾರ್ಯಗಳ ಮೇಲೆ ಗ್ರಾಮ ಪಂಚಾಯತ್ ಏಕೆ ಕ್ರಮ ಕೈಗೊಂಡಿಲ್ಲ? ಮಣ್ಣು ಪರೀಕ್ಷೆ ಮಾಡದೆ 70 ಫೀಟ್ ಗುಡ್ಡ ಕಡಿದು ರಸ್ತೆ ನಿರ್ಮಾಣ ಹೇಗೆ ಸ್ಥಳೀಯ ಇಂಜಿನಿಯರಿಂಗ್ ವಿಭಾಗದ ಅನುಮತಿ ನೀಡಿದೆ ? ಸ್ಥಳೀಯವಾಗಿ ಅಪಾಯದ ಎಚ್ಚರಿಕೆಗಳು, ಮಳೆಗಾಲಕ್ಕೆ ಸಾರ್ವಜನಿಕರ ದೂರುಗಳಿದ್ದರೂ ಜಿಲ್ಲಾಡಳಿತ ಮತ್ತು ಗ್ರಾಮ ಪಂಚಾಯತ್ ಇಂಜಿನಿಯರಿಂಗ್ ವಿಭಾಗ ಯಾಕೆ ಮೌನ ವಹಿಸಿತ್ತು? ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಮುಂಗಾರು ಪೂರ್ವ ಸಮೀಕ್ಷೆ ನಡೆಸಿತ್ತೇ? ನಡೆಸಿದ್ದರೆ ಅದರ ವರದಿ ಎಲ್ಲಿದೆ? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಹುಡುಕಲು ಕರ್ನಾಟಕ ಸರ್ಕಾರವು ಸುರತ್ಕಲ್‌ನ ರಾಷ್ಟ್ರೀಯ ತಾಂತ್ರಿಕ ಸಂಸ್ಥೆ ಎನ್ ಐಟಿಕೆಯನ್ನು ತನಿಖೆಗೆ ನಿಯೋಜಿಸಿದೆ. ಮಕ್ಕಳ ಸಾವಿನ ಕುರಿತು ಸರ್ಕಾರದ ಆದೇಶದ ಮೇರೆಗೆ ಜಿಲ್ಲಾಡಳಿತವು ಉನ್ನತ ಮಟ್ಟದ ತನಿಖೆ ನಡೆಸುವ ಸಾಧ್ಯತೆಯಿದ್ದು, ನ್ಯಾಯ ಸಿಗಬೇಕಾದರೆ ವೈಜ್ಞಾನಿಕ ಸತ್ಯ ಬಹಿರಂಗವಾಗಬೇಕು. ಸತ್ಯ ಬಹಿರಂಗವಾಗಬೇಕಾದರೆ ವೈಜ್ಞಾನಿಕ ತನಿಖೆ ಮುಖ್ಯ ಆಗಿರುತ್ತದೆ. ಜಿ.ಪಂ ಇಂಜಿನಿಯರ್ ವಿರುದ್ಧ ಅಸಮಾಧಾನ: ಅಶ್ವಿನಿ ಮನೆಮಂದಿ ನ್ಯಾಯಕ್ಕಾಗಿ ಹೋರಾಡುತ್ತಿದ್ದರೂ, ಎನ್ ಐಟಿಕೆ ಅಧಿಕಾರಿಗಳ ಜೊತೆಗೆ ಸ್ಥಳ ಪರಿಶೀಲನೆಗೆ ಆಗಮಿಸಿದ ಜಿಲ್ಲಾ ಪಂಚಾಯತ್ ಇಂಜಿನಿಯರ್ ನಿತಿನ್ ಅವರು ಮತ್ತೆ ಮನೆಮಂದಿಯನ್ನು ಸಂಶಯ ವ್ಯಕ್ತಪಡಿಸಿ ಮಾತುಗಳನ್ನಾಡಿದರು. ಮನೆಯವರೆಗೂ ರಸ್ತೆಯನ್ನು ಮಾಡಿಕೊಡಲಾಗಿದೆ, ಸದ್ಯ ನೀವು ಬೇರೆ ಆರೋಪಗಳನ್ನು ಮಾಡುತ್ತಿರುವಿರಿ ಎಂದು ಹೇಳುತ್ತಿದ್ದಂತೆ, ಮನೆಮಂದಿ ದುರ್ಘಟನೆ ಸಂದರ್ಭ ಜೆಸಿಬಿ ಬರಲು ಸಾಧ್ಯವಾಗುತ್ತಿದ್ದರೂ ಮಕ್ಕಳ ಜೀವ ಉಳಿಯುತಿತ್ತು. ಇದೀಗ ಸುಳ್ಳು ಆಪಾದನೆಗಳನ್ನು ಮಾಡಿ ತನಿಖೆಯ ಹಾದಿ ತಪ್ಪಿಸದಿರಿ ಎಂದು ಮನೆಮಂದಿ ಆಕ್ರೋಶ ವ್ಯಕ್ತಪಡಿಸಿದರು. ಇದರ ಜೊತೆಗೆ ತಾ.ಪಂ ಮಾಜಿ ಸದಸ್ಯ ನಕ್ಕರೆ ಬಾವು ಅಹಮ್ಮದ್ ಕುಂಞಟಿಜಜಜಿಟಿಜಜ ಎಂಬವರು ಚರಂಡಿ, ರಸ್ತೆ ಮಾಡಿದ್ದೇವೆ, ಎಲ್ಲವನ್ನು ಮಾಡಿದರೂ ಆರೋಪ ನಡೆಸುವುದು ಸೂಕ್ತವಲ್ಲ ಎಂದು ಮನೆಮಂದಿ ಜೊತೆಗೆ ವಾಗ್ವಾದಕ್ಕೆ ಇಳಿದ ಪ್ರಸಂಗ ನಡೆಯಿತು. ಪ್ರತಿಕ್ರಯಿಸಿದ ಮನೆಮಂದಿ ಎಲ್ಲವನ್ನು ನಿಯಮಬದ್ಧವಾಗಿ ಮಾಡುತ್ತಿದ್ದಲ್ಲಿ ದಾಖಲೆಗಳನ್ನು ನೀಡಲು ಯಾಕೆ ಹಿಂದೇಟು ಹಾಕುತ್ತಿದ್ದಾರೆ. ದಾಖಲೆಗಳ ಆಧಾರದಲ್ಲಿ ಆಪಾದನೆಗಳನ್ನು ಮಾಡಿ, ಅದನ್ನು ಬಿಟ್ಟು ಅನ್ಯಾಯಕ್ಕೊಳಗಾದ ಕುಟುಂಬಕ್ಕೆ ನ್ಯಾಯ ಸಿಗುವುದನ್ನು ತಪ್ಪಿಸಲು ಮುಂದಾಗದಿರಿ ಎಂದು ಆರೋಪ ಪ್ರತ್ಯಾರೋಪಗಳು ನಡೆಯಿತು. ತನಿಖಾ ತಂಡ ಸ್ಥಳದಲ್ಲಿನ ವರದಿಗಳೆಲ್ಲವನ್ನು ಸಂಗ್ರಹಿಸಿದೆ. ಈ ಸಂದರ್ಭ ಜಿಲ್ಲಾ ಪಂಚಾಯತ್ ಇಂಜಿನಿಯರ್ ನಿತಿನ್ ಹಾಗೂ ಲಾಯ್ಡ್ , ಅಶ್ವಿನಿಯವರ ಪತಿ ಸೀತಾರಾಮ , ಸಹೋದರ ತೇಜು ಕುಮಾರ್, ಸಂಬಂಧಿ ಸುಮಲತಾ ಕೊಣಾಜೆ , ಮಂಜನಾಡಿ ಗ್ರಾ.ಪಂ ಸಾಹುಲ್ ಹಮೀದ್, ಉಪಸ್ಥಿತರಿದ್ದರು.

# ಕಣಂದೂರಿನ ಧರ್ಮ ಅರಸು ಶ್ರೀ ತೋಡಕುಕ್ಕಿನಾರ್ ದೈವಸ್ಥಾನದ ಜೀರ್ಣೋದ್ಧಾರ ಪೂರ್ವಭಾವಿ ಸಭೆ



■ ಮೂರು ಊರು, ಐದು ಗ್ರಾಮಗಳ ಭಕ್ತರ ಪೂರ್ವಭಾವಿ ಸಭೆ ಹಾಗೂ ಜೀರ್ಣೋದ್ಧಾರ ಸಮಿತಿ ರಚನ

**ಕೊಣಾಜೆ:** ಕಣಂದೂರಿನ ಧರ್ಮ ಅರಸು ಶ್ರೀ ತೋಡಕುಕ್ಕಿನಾರ್ ದೈವಸ್ಥಾನದ ಜೀರ್ಣೋದ್ಧಾರದ ಕುರಿತು ಮೂರು ಊರು, ಐದು ಗ್ರಾಮಗಳ ಭಕ್ತರ ಪೂರ್ವಭಾವಿ ಸಭೆ ಹಾಗೂ ಜೀರ್ಣೋದ್ಧಾರ ಸಮಿತಿ ರಚನೆಯು ಇತ್ತೀಚೆಗೆ ಕ್ಷೇತ್ರದಲ್ಲಿ ನಡೆಯಿತು.

ಕ್ಷೇತ್ರದ ಆಡಳಿತ ಮೊಕೇಸರರಾದ ದೇವಿಪ್ರಸಾದ್ ಪೊಯ್ಯತ್ತಾಯ ಮಾತನಾಡಿ, ಧರ್ಮ ಅರಸು ತೋಡಕುಕ್ಕಿನಾರ್ ಕ್ಷೇತ್ರ ಇತಿಹಾಸ ಪ್ರಸಿದ್ಧ ದೇವಸ್ಥಾನ ಹಾಗೂ ಕಾರಣಿಕದ ಕ್ಷೇತ್ರ. ಪ್ರತೀ ಹನ್ನೆರಡು ವರ್ಷಕ್ಕೊಮ್ಮೆ ದೈವ ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯ ಆಗಬೇಕಾಗಿದೆ. ಹಾಗೇಯೇ ಕಣಂತೂರು ಕ್ಷೇತ್ರದಲ್ಲಿಯೂ ಜೀರ್ಣೋದ್ಧಾರದ ಕುರಿತು ಭಕ್ತರು ಸಭೆ ಸೇರಿದ್ದು, ಇದಕ್ಕೆ ಗ್ರಾಮಗಳ ಭಕ್ತರ ಸಹಕಾರ ಅಗತ್ಯ ಎಂದರು. ಅಧ್ಯಕ್ಷರಾಗಿ ಬೋಳಿಯಾರ್ ಇದೇ ಸಂದರ್ಭದ ಜೀರ್ಣೋದ್ಧಾರ ಸಮಿತಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಸಮಿತಿ ಅಧ್ಯಕ್ಷರಾಗಿ ಸಂತೋಷ್ ಕುಮಾರ್ ಬೋಳಿಯಾರ್ ಅವರು ಆಯ್ಕೆಯಾದರು. ಗೌರವಾಧ್ಯಕ್ಷರಾಗಿ; ದೇವಿಪ್ರಸಾದ ಪೊಯ್ಯತ್ತಾಯ, ಸುಬ್ರಹ್ಮಣ್ಯ ಭಟ್, ಪದ್ಮನಾಭ ರೈ ಯಾನೆ ಮಂಜು ಭಂಡಾರಿ, ಶಂಕರಮೋಹನ ಪೂಂಜ, ರಾಜೀವ ಶೆಟ್ಟಿ ಯಾನೆ ಮುಂಡ ರೈ ಹಾಗೂ ಕಾರ್ಯಾಧ್ಯಕ್ಷರಾಗಿ ರಮೇಶ ಶೇಣವ ಚಕ್ರಕೋಡಿ, ಶ್ರೀನಾಥ್ ಕೊಂಡೆ, ಮನಮೋಹನ ಕೊಂಡೆ, ಶಿವಪ್ರಸಾದ ಮಾಡ, ಪ್ರವೀಣ್ ಶೆಟ್ಟಿ ಕಡ್ವಾಯಿ, ಮಾರ್ಗದರ್ಶಕರಾಗಿ ದೈವದ ದೇರಣ್ಣ ಪ್ರಧಾನ ಪಾತ್ರಿ ಶ್ರೀ ಕ್ಷೇತ್ರ ಕಣಂತ್ತೂರು, ಶ್ರೀ ದೈವದ ದೇರಣ್ಣ ಪ್ರಧಾನ ಪಾತ್ರಿ ಶ್ರೀ ಕ್ಷೇತ್ರ ಕೂಟತ್ತಜೆ, ಶ್ರೀ ದೈವದ ಮೂಲ್ಯಣ್ಣ ಕಣಂತ್ತೂರು ಶ್ರೀರಾಮ ದುರ್ಗಾಲಯಿ ದೈವದ ಪಾತ್ರಿ, ಶ್ರೀ ದೈವದ ಮೂಲ್ಯಣ್ಣ ಕೂಟತ್ತಜೆ, ಗೋಪಾಲ ಪುರುಷ ದುರ್ಗಾಲಯಿ ಮಾಣಿ, ಶ್ರೀ ಲಕ್ಷ್ಮಣ ಯಾನೆ ಕಾಂತ ಕಣಂತ್ತೂರು, ಶ್ರೀ ಗಣೇಶ ಶೇರಿಗಾರ ಅವರನ್ನು ಆಯ್ಕೆ ಮಾಡಲಾಯಿತು. ಸಮಿತಿ ಸಂಚಾಲಕರಾಗಿ ಮಹೇಶ್ ಚೌಟ, ವಿಜೇಶ್ ನಾಯ್ಕ ನಡಿಗುತ್ತು, ಜಗದೀಶ ಆಳ್ವ ಕುವೆತ್ತಬೈಲು, ಪ್ರವೀಣ್ ಶೆಟ್ಟಿ ಪಾದೆ, ಶಿವಪ್ರಕಾಶ್ ಪೊಯ್ಯತ್ತಬೈಲು, ಕಿರಣ್ ಕುಮಾರ್ ಕುರ್ಮಾನು, ಪ್ರವೀಣ್ ಸುವರ್ಣ ಹೂ ಹಾಕುವಕಲ್ಲು, ಸತೀಶ್ ಬದಿಯಾರು, ಪ್ರಧಾನ ಕಾರ್ಯದರ್ಶಿಯಾಗಿ ಸುರೇಶ್ ಕೊಂಡೆ, ಕೋಶಾಧಿಕಾರಿ ರಾಧಾಕೃಷ್ಣ ರೈ ಉಮಿಯ ಅವರು ಆಯ್ಕೆಯಾದರು.

# ಕಂಬಳ ನಮ್ಮ ದೇಶದ ಆಸ್ತಿ, ಸಂಸ್ಕೃತಿಯ ಪ್ರತೀಕ

↗ 1ನೇ ಪುಟದಿಂದ

ಯುವ ಮುಖಂಡರಾದ ಮಿಥುನ್ ರೈ, ಜಿಲ್ಲಾ ಕಂಬಳ ಸಮಿತಿ ಅಧ್ಯಕ್ಷರಾದ ದೇವಿಪ್ರಸಾದ್ ಶೆಟ್ಟಿ, ದ.ಕ.ಜಿಲ್ಲಾ ಎಸ್ ಡಿಸಿಸಿ ಬ್ಯಾಂಕ್ ನ ಅಧ್ಯಕ್ಷರಾದ ಡಾ.ಎಂ.ಎನ್. ರಾಜೇಂದ್ರ ಕುಮಾರ್, ಕಾರವಾರದ ಶಾಸಕರಾದ ಸತೀಶ್ , ಚಿಕ್ಕಮಂಗಳೂರು ಶಾಸಕರಾದ ರಾಜು ಗೌಡ, ಮಾಜಿ ಸಚಿವ ರಮಾನಾಥ ರೈ, ಯೆನೆಪೋಯ ವಿವಿಯ ಕುಲಾಧಿಪತಿ ಯೆನೆಪೋಯ ಅಬ್ದುಲ್ಲಾ ಕುಂಞ, ಗೌರವಾಧ್ಯಕ್ಷರಾದ ಮಿತ್ತಕೋಡಿ ವೆಂಕಪ್ಪ ಕಾಜವ, ನರಿಂಗಾನ ಬೋಲ ಚರ್ಚ್ನ ಧರ್ಮಗುರು ಪೀಟರ್ ಸಲ್ದಾನ, ತಲಪಾಡಿ ದೇವಸ್ಥಾನದ ಅರ್ಚಕರಾದ ಗಣೇಶ್ ಭಟ್, ಗಡಿಕಾರರಾದ ಪ್ರಮೋದ್ ಕುಮಾರ್ ರೈ ಗುಣಕರ ಯಾನೆ ರಾಮ ರೈ, ಕಣಚೂರು ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಕಣಚೂರು ಮೋನು, ಎಂಆರ್ ಜಿ ಗ್ರೂಪ್ ನ ಅಧ್ಯಕ್ಷರಾದ ಪ್ರಕಾಶ್ ಶೆಟ್ಟಿ, ಯುವ ಕಾಂಗ್ರೆಸ್ ಅಧ್ಯಕ್ಷರಾದ ಇಬ್ರಾಹಿಂ ನವಾಝ್, ಮುಖಂಡರಾದ ಮಂಜುನಾಥ್, ಮುನಿಯಾಲು ಉದಯ ಕುಮಾರ್ ಶೆಟ್ಟಿ, ಕುದ್ರೋಳಿ ಕ್ಷೇತ್ರದ ಪದ್ಮನಾರ್ ಆರ್ ಪೂಜಾರಿ, ನಿಗಮ್ ಭಂಡಾರಿ, ಬೆಳ್ತಂಗಡಿಯ ರಕ್ಷಿತ್ ಶಿವರಾಮ್, ಇನಾಯತ್ ಆಲಿ, ಮಾಲ ನಾರಾಯಣ, ಪ್ರಕಾಶ್ ಕಾಂಚನ್ ಮೊದಲಾದವರು ಉಪಸ್ಥಿತರಿದ್ದರು.

ಸಹಕಾರ ರತ್ನ ಪ್ರಶಸ್ತಿ ಪಡೆದ ಟಿ.ಜಿ.ರಾಜಾರಾಂ ಭಟ್, ಡಾ. ಐಕಳ ಬಾವ ದೇವಿ ಪ್ರಸಾದ್ ಶೆಟ್ಟಿ, ಕಂಬಳ ಸಮಿತಿಯ ಗೌರವಾಧ್ಯಕ್ಷರಾದ ಮಿತ್ತಕೋಡಿ ವೆಂಕಪ್ಪ ಕಾಜವ, ರಾಜ್ಯೋತ್ಸವ ಪ್ರಶಸ್ತಿ ಪಡೆದ ಶಾಂತರಾಮ ಶೆಟ್ಟಿ, ಕಬಡ್ಡಿಪಟು ಧನಲಕ್ಷ್ಮೀ ಪೂಜಾರಿ, ಕ್ರೀಡಾ ಸಾಧಕ ಭಾಸ್ಕರ ದೇವಾಡಿಗ ಬೈಂದೂರು, ಗಣೇಶ್ ಪಂಬದ ಬಾಯಾರು, ಶೈಕ್ಷಣಿಕ ಸಾಧಕಿ ಅಪೇಕ್ಷಾ ಪುಂಡಿಕಾಯಿ, ಕರಾಟೆಪಟು ಆಯಿಷಾ ಮೊದಲಾದವರನ್ನು ಗೌರವಿಸಿ ಸನ್ಮಾನಿಸಲಾಯಿತು.

ಕಾರ್ಯಾಧ್ಯಕ್ಷರಾದ ಪ್ರಶಾಂತ್ ಕಾಜವ ಅವರು ಸ್ವಾಗತಿಸಿದರು. ಪತ್ರಕರ್ತರಾದ ಸತೀಶ್ ಪುಂಡಿಕಾಯಿ ಹಾಗೂ ಅಬ್ದುಲ್ ರಝಾಕ್ ಕುಕ್ಕಾಜೆ ನಿರೂಪಿಸಿದರು.

# ರಾಜ್ಯ ಕಬಡ್ಡಿ ತಂಡಕ್ಕೆ ಇರಾ ಗ್ರಾಮದ ಪ್ರತಿಭೆ

↗ 1ನೇ ಪುಟದಿಂದ

ಸಂಯೋಜಿತ ಆಟದಲ್ಲಿ ವಿಶಿಷ್ಟತೆ ತೋರಿಸಿದ್ದಾರೆ. ಕಠಿಣ ಪರಿಶ್ರಮ, ಶಿಸ್ತು ಹಾಗೂ ಸಮರ್ಪಣೆಯೇ ಅವನ ಯಶಸ್ಸಿನ ಗುಟ್ಟು ಎಂದು ಕ್ರೀಡಾ ತಜ್ಞರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಈ ಎಲ್ಲ ಸಾಧನೆಗಳ ಶ್ರೇಷ್ಠ ಫಲವಾಗಿ ಇದೀಗ ಕರ್ನಾಟಕ ರಾಜ್ಯ ಕಬಡ್ಡಿ ತಂಡಕ್ಕೆ ಆಯ್ಕೆಯಾಗುವ ಮೂಲಕ ಕೇವಲ ತನ್ನ ಕುಟುಂಬವಷ್ಟೇ ಅಲ್ಲದೆ, ಇರಾ ಗ್ರಾಮ, ಭಾರತ್ ಫ್ರೆಂಡ್ಸ್ ಕ್ಲಬ್ ಹಾಗೂ ಮಿಲಾಗ್ರಿಸ್ ಕಾಲೇಜಿಗೆ ಅಪಾರ ಹೆಮ್ಮೆ ತಂದಿದ್ದಾರೆ. ಗ್ರಾಮೀಣ ಪ್ರದೇಶದಿಂದ ಹೊರಹೊಮ್ಮಿದ ಈ ಯುವ ಪ್ರತಿಭೆ, ಮುಂದಿನ ದಿನಗಳಲ್ಲಿ ರಾಷ್ಟ್ರಮಟ್ಟದ ಹಾಗೂ ಅಂತರರಾಷ್ಟ್ರೀಯ ಮಟ್ಟದ ಕಬಡ್ಡಿ ಪಂದ್ಯಗಳಲ್ಲಿ ಮಿಂಚುವ ಭರವಸೆಯನ್ನು ಮೂಡಿಸಿದ್ದಾರೆ.

ಸ್ಥಳೀಯ ಕ್ರೀಡಾಭಿಮಾನಿಗಳು, ಕ್ಲಬ್ ಸದಸ್ಯರು, ತರಬೇತುದಾರರು ಹಾಗೂ ಕಾಲೇಜಿನ ಆಡಳಿತ ಮಂಡಳಿ ಈ ಸಾಧನೆಗೆ ಹರ್ಷ ವ್ಯಕ್ತಪಡಿಸಿ, ಅವರ ಮುಂದಿನ ಪ್ರಯತ್ನಗಳಿಗೆ ಶುಭ ಹಾರೈಸಿದ್ದಾರೆ. ಇರಾ ಗ್ರಾಮದ ಈ ಸಾಧನೆ, ಗ್ರಾಮೀಣ ಕ್ರೀಡಾ ಪ್ರತಿಭೆಗಳಿಗೆ ಪ್ರೇರಣೆಯಾಗಿ ನಿಲ್ಲುವಂತಿದೆ.

# ಶ್ರೀ ಉಮಾಮಹೇಶ್ವರಿ ಕ್ಷೇತ್ರದ ಚಪ್ಪರ ಮುಹೂರ್ತ

↗ 1ನೇ ಪುಟದಿಂದ

ಅಂಕಿತ್ ಉಳ್ಳಾಲ, ಕಮಲಾಕ್ಷ ಪಿಲಾರ್, ಸಭಾ ಕಾರ್ಯಕ್ರಮ ಅಧ್ಯಕ್ಷ ಜೀವನ್ ಕುಮಾರ್ ತೊಕ್ಕೊಟ್ಟು, ಸ್ವಯಂ ಸೇವಕ ಸಮಿತಿ ಅಧ್ಯಕ್ಷ ಸಂದೀಪ್ ಅಂಬ್ಲಮೊಗರು, ಪ್ರಧಾನ ಸಂಚಾಲಕ ದೀಕ್ಷಿತ್ ನಿಸರ್ಗ, ಹೊರೆಕಾಣಿಕೆ ಸಮಿತಿ ಅಧ್ಯಕ್ಷ ರವಿಶಂಕರ್ ಸೋಮೇಶ್ವರ, ಅಲಂಕಾರ ಸಮಿತಿ ಅಧ್ಯಕ್ಷ ಸಂತೋಷ್ ಕಾಪಿಕಾಡ್, ಪ್ರಧಾನ ಸಂಚಾಲಕ ಸುದೇಶ್ ಕಾಪಿಕಾಡ್, ಪ್ರಚಾರ ಸಮಿತಿ ಅಧ್ಯಕ್ಷ ಜಗದೀಶ್ ಆಚಾರ್ಯ, ಅನ್ನಸಂತರ್ಪಣೆ ಸಮಿತಿ ಪ್ರಧಾನ ಸಂಚಾಲಕ ಮೋಹನ್ ದಾಸ್ ಕಾಪಿಕಾಡ್, ಪ್ರಮುಖರಾದ ಉಮೇಶ್ ಗಟ್ಟಿ, ಗೋಪಾಲ ಆಚಾರ್ಯ, ಪ್ರಕಾಶ್ ಕಾಪಿಕಾಡ್, ಸಂಪತ್ ಶೆಟ್ಟಿ, ಉಮಾಮಹೇಶ್ವರಿ ಸೇವಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಗಣೇಶ್ ಕಾಪಿಕಾಡ್, ಮಹಿಳಾ ವಿಭಾಗ ಸಮಿತಿ ಸದಸ್ಯರಾದ ವಿಲಾಸಿನಿ, ಶ್ಯಾಮಲಾ, ಸುನೀತಾ ಬಾಬು, ಪವಿತ್ರಾ ಗಟ್ಟಿ, ರೇವತಿ, ನೂತನ ಪ್ರಕಾಶ್, ಸುಜತಾ ಮೊದಲಾದವರು ಉಪಸ್ಥಿತರಿದ್ದರು.


# ಬುರ್ದುಗೋಳಿ ಕಲ್ಲಾಪುವಿನ ಮಣ್ಣು ಮನೆಯ ಭಾವನೆ ನೀಡಿದೆ: ವಾರಣಾಸಿ ಕಾಶಿ ಮಠದ ಶ್ರೀ ಶ್ರೀ ಶ್ರೀ ವಿದ್ಯಾಶಂಕರಾನಂದ ಸರಸ್ವತಿ ಸ್ವಾಮೀಜಿ





**ಕಲ್ಲಾಪು:** ಬುರ್ದುಗೋಳಿ ಕಲ್ಲಾಪುವಿನ ಮಣ್ಣು ನನಗೆ ಮನೆ ಅನ್ನುವ ಭಾವನೆ ನೀಡಿದೆ. ಬೇರೆ ಊರಿಗೆ ಬಂದಿದ್ದೇವೆ ಎಂಬ ಯಾವುದೇ ರೀತಿಯ ಅಂಜಿಕೆ ಇಲ್ಲಿ ಎಷ್ಟೂ ಅನಿಸಿಲ್ಲ. ಸಮಿತಿ ಸದಸ್ಯರ ಪ್ರೀತಿ, ಅಪ್ಯಾಯತೆ, ಆತ್ಮೀಯತೆ ಹಾಗೂ ದೈವದಲ್ಲಿ ಇಟ್ಟ ಅಚಲ ನಂಬಿಕೆ ಇವೆಲ್ಲವೂ ನನಗೆ ಅಜ್ಜನ ಕಾರಣೀಕ ಶಕ್ತಿಯ ಜೀವಂತ ಪ್ರತ್ಯಕ್ಷ ಉದಾಹರಣೆಯಂತೆ ಕಾಣುತ್ತಿವೆ.ನಾವು ದೈವವನ್ನು ಎಷ್ಟು ಗಟ್ಟಿಯಾಗಿ ಹಿಡಿದುಕೊಳ್ಳುತ್ತೇವೋ, ಆಪತ್ತು ಬಂದಾಗ ದೈವಗಳೇ ಕೈಚಾಚಿ ನಮ್ಮನ್ನು ರಕ್ಷಿಸುತ್ತವೆ ಎಂದು ವಾರಣಾಸಿ ಕಾಶಿ ಮಠದ ಶ್ರೀ ಶ್ರೀ ಶ್ರೀ ವಿದ್ಯಾಶಂಕರಾನಂದ ಸರಸ್ವತಿ ಸ್ವಾಮೀಜಿ ಅಭಿಪ್ರಾಯಪಟ್ಟರು. ಅವರು ಕಲ್ಲಾಪು ಬುರ್ದುಗೋಳಿಯ ಗುಳಿಗ ಕೊರಗಜ್ಜ ದೈವಗಳ ಉದ್ಭವಶಿಲೆಯ ಪ್ರಧಾನ ಆದಿಸ್ಥಳ ಸೇವಾ ಟ್ರಸ್ಟ್ ಆಶ್ರಯದಲ್ಲಿ ಕ್ಷೇತ್ರದಲ್ಲಿ ಎರಡು ದಿನಗಳ ಕಾಲ ನಡೆಯಲಿರುವ ಗುಳಿಗ ಕೊರಗಜ್ಜ ದೈವದ ವರ್ಷಾವಧಿ ಕೋಲದಲ್ಲಿ ಭಾಗವಹಿಸಿ ಮಾತನಾಡಿದರು. ಕಲ್ಲಾಪುವಿನ ಮಣ್ಣಿನಲ್ಲಿ ನಮಗೆ ಏನಾಗಿದೆ ಎಂಬುದೇ ಮುಖ್ಯ. ಜೀವನದ ಪ್ರತಿಯೊಂದು ನಿರ್ಧಾರವೂ ಕೊರಗಜ್ಜನ ಅಪ್ಪಣೆಯಿಲ್ಲದೆ ತೆಗೆದುಕೊಳ್ಳುವುದೇ ಇಲ್ಲ. ಅಜ್ಜ ನಮ್ಮನ್ನು ಇಷ್ಟಪಡುತ್ತಾರಾ, ನಾವು ಅವರನ್ನು ಇಷ್ಟಪಡುತ್ತೇವೋ ಅದು ತಿಳಿಯುವುದಕ್ಕಿಂತ, ಅವರ ಜೊತೆಗಿನ ಅಂತರಂಗದ ಬಂಧವೇ ದೊಡ್ಡದು. ಬೆಳಕಿನ ದೀವಟಿಕೆಯನ್ನು ಕೈಯಲ್ಲಿ ಹಿಡಿದುಕೊಂಡು ಅಜ್ಜ ಮುಂದೆ ಸಾಗುತ್ತಾ, ನನ್ನನ್ನು ಹಿಂದೆ ಕರೆದುಕೊಂಡು ಹೋಗುತ್ತಿರುವ ಅನುಭವ,ಅದು ನನ್ನ ಬದುಕಿನ ಅಮೂಲ್ಯ ಕ್ಷಣ. ಅಜ್ಜನಿಂದ ನನಗೆ ಅಪಾರವಾದ ಪ್ರೀತಿ ದೊರೆತಿದೆ. ಎರಡು ವರ್ಷಗಳ ಪರಿಚಯದಲ್ಲಿ ಆಡಳಿತ ಮಂಡಳಿಯವರೊಂದಿಗೆ ಬೆಸೆದ ಆತ್ಮೀಯ ಸಂಬಂಧ, ಅಜ್ಜನ ಮೂಲ ಶಕ್ತಿಯನ್ನು ಇನ್ನಷ್ಟು ಹತ್ತಿರ ಮಾಡಿದೆ. ಯಶವಂತ್ ಶೆಟ್ಟಿ ಅವರಿಂದ ಪರಿಚಯವಾದ ಈ ಕ್ಷೇತ್ರ ನನ್ನ ಬದುಕಿನ ಹಾದಿಗಳನ್ನು ಬದಲಿಸಿದೆ. ಬೇರೆಯವರಿಗೆ ವಿಚಾರ ಹೇಳುವಾಗ ಒಂದೇ ಮಾತು ಹೇಳುತ್ತೇನೆ ಮರ್ಕಟ ಕಿಶೋರ ನ್ಯಾಯದಲ್ಲಿ ದೈವವನ್ನು ನಂಬಲೇಬೇಕು. ದೈವ ನಮ್ಮನ್ನು ಎಂದಿಗೂ ಕೈಬಿಡುವುದಿಲ್ಲ ಅನ್ನುವುದನ್ನು ತಾನೇ ಸಾಕ್ಷಿ ಎಂದರು. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಮಾತನಾಡಿ ಬುರ್ದುಗೋಳಿ ಕ್ಷೇತ್ರ ಇತಿಹಾಸ ಪಾವಿತ್ರತೆಯನ್ನು ಹೊಂದಿರುವ, ಭಕ್ತಿಪೂರಕವಾದ ಕ್ಷೇತ್ರವಾಗಿದೆ. ಈ ಕ್ಷೇತ್ರವನ್ನು ಅಭಿವೃದ್ಧಿಯ ದಿಕ್ಕಿನಲ್ಲಿ ಸಮರ್ಥವಾಗಿ ಕೊಂಡೊಯ್ಯುತ್ತಿರುವ ಆಡಳಿತ ಸಮಿತಿಯ ಸದಸ್ಯರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ರಾಜ್ಯ ಹಾಗೂ ರಾಷ್ಟ್ರಮಟ್ಟದ ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿರುವ ಹಿನ್ನಲೆ, ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಕಲ್ಪಿಸುವುದು ಅತ್ಯಂತ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಸರಕಾರದಿಂದ ಲಭ್ಯವಾಗುವ ಎಲ್ಲಾ ರೀತಿಯ ಸಹಕಾರವನ್ನು ನೀಡಲು ನಾವು ಬದ್ಧರಾಗಿದ್ದೇವೆ. ಕ್ಷೇತ್ರಕ್ಕೆ ನೀಡುವ ಸಹಕಾರವು ಸಮಾಜಕ್ಕೆ ಪರೋಕ್ಷವಾಗಿ ನೀಡುವ ಸಹಕಾರದಂತೆಯೇ ಎಂಬ ನಂಬಿಕೆ ನಮ್ಮದು. ಈಗಾಗಲೇ ಡ್ರೈನ್ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಂಡಿದ್ದು, ಮುಂದಿನ ದಿನಗಳಲ್ಲಿಯೂ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುವೆವು ಎಂದರು. ಶ್ರೀ ಕ್ಷೇತ್ರ ಕೊಲ್ಯ ಮೂಕಾಂಬಿಕಾ ದೇವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷರಾದ ಚಂದ್ರಹಾಸ್ ಪಂಡಿತ್ ಹೌಸ್ ಮಾತನಾಡಿ, ಸ್ಥಳಾವಕಾಶ ಹಾಗೂ ಮೂಲಸೌಕರ್ಯ ವ್ಯವಸ್ಥೆಯಲ್ಲಿ ಇದ್ದ ಕೊರತೆಯನ್ನು ನಿವಾರಿಸುವ ಉದ್ದೇಶದಿಂದ ಭೂದಾನ ನಿಧಿ ಹಾಗೂ ಸ್ವರ್ಣ ಭಂಡಾರ ನಿಧಿಗಳನ್ನು ಆರಂಭಿಸಲಾಗಿದೆ. ಕೊರಗಜ್ಜನ ಕಾರಣಿಕ ಶಕ್ತಿಯಿಂದಾಗಿ ಈ ಎಲ್ಲಾ ವ್ಯವಸ್ಥೆಗಳು ನಿಧಾನವಾಗಿ ನಿವಾರಣೆಯಾಗುತ್ತಿದ್ದು, ಕೈಗೊಂಡಿರುವ ಕಾರ್ಯಗಳು ಸೂಸೂತ್ರವಾಗಿ ಮತ್ತು ಯಶಸ್ವಿಯಾಗಿ ನೆರವೇರುತ್ತಿವೆ. ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ, ದೈವಾನುಗ್ರಹ ಪಡೆದುಕೊಳ್ಳುತ್ತಿದ್ದಾರೆ ಎಂದರು. ಈ ಸಂದರ್ಭ ಬೆಂಗಳೂರಿನ ಕ್ಷತ್ರಿಯ ಮಹಿಳಾ ಸಂಘದ ಅಧ್ಯಕ್ಷೆ ಮಹಾಲಕ್ಷ್ಮೀ ಮೇಘರಾಜ್ , ತಮಿಳುನಾಡು ಪಿಎಂಕೆ ಪಕ್ಷದ ಜಿಲ್ಲಾಧ್ಯಕ್ಷರಾದ ಬಿ.ಮಂಜುನಾಥ್ , ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ , ಬಿಜೆಪಿ ಮಂಗಳೂರು ಮಂಡಲ ಅಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲ್ ಹಾಗೂ ಕಲ್ಲಾಪು ಬುರ್ದುಗೋಳಿಯ ಗುಳಿಗ ಕೊರಗಜ್ಜ ದೈವಗಳ ಉದ್ಭವಶಿಲೆಯ ಪ್ರಧಾನ ಆದಿಸ್ಥಳ ಸೇವಾ ಟ್ರಸ್ಟ್ ನ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕಲ್ಲಾಪು ಬುರ್ದುಗೋಳಿ ಗುಳಿಗ ಕೊರಗಜ್ಜ ದೈವಗಳ ಉದ್ಭವಶಿಲೆಯ ಪ್ರಧಾನ ಆದಿಸ್ಥಳದ ಕುರಿತಾದ ಸಿಂಗಾರ ಸುಗಿಪು' ತುಳು ಭಕ್ತಿಗೀತೆ ವಿಡಿಯೋ ಹಾಡುಗಳ ಬಿಡುಗಡೆಯನ್ನು ಸ್ವಾಮಿಗಳು ನಡೆಸಿಕೊಟ್ಟರು.

# ವಿಶ್ವ ವೇದಿಕೆಯಲ್ಲಿ ಯಶಸ್ಸು ಸಾಧಿಸಲು ಯುವಕರು ಕಲಿಯಬೇಕಾದ ಪಾಠಗಳು




ಇಂದಿನ ಜಾಗತೀಕರಣದ ಯುಗದಲ್ಲಿ ವಿದೇಶಗಳಲ್ಲಿ ನೆಲೆಸಿರುವ ಎನ್‌ಆರ್‌ಐ ಉದ್ಯಮಿಗಳು ತಮ್ಮ ಶ್ರಮ, ಪರಿಶ್ರಮ ಮತ್ತು ದೃಢಸಂಕಲ್ಪದಿಂದ ಯಶಸ್ಸಿನ ಎತ್ತರ ತಲುಪಿದ್ದಾರೆ. ಅವರು ಅನುಭವಿಸಿದ ಹೋರಾಟ, ಕಲಿತ ಪಾಠಗಳು ಹಾಗೂ ಗಳಿಸಿದ ಸಾಧನೆಗಳು ಇಂದಿನ ವಿದ್ಯಾರ್ಥಿಗಳು ಮತ್ತು ಯುವಕರಿಗೆ ದಾರಿದೀಪವಾಗಬಹುದು. ಯಶಸ್ಸು ಎಂಬುದು ಒಂದೇ ದಿನದಲ್ಲಿ ಸಿಗುವುದಲ್ಲ; ಅದು ನಿರಂತರ ಪ್ರಯತ್ನ, ಶಿಸ್ತು ಮತ್ತು ಸರಿಯಾದ ದಿಕ್ಕಿನ ಫಲಿತಾಂಶ ಎಂದು ಅನೇಕ ಯಶಸ್ವೀ ಎನ್‌ಆರ್‌ಐ ಉದ್ಯಮಿಗಳು ಹೇಳುತ್ತಾರೆ.

**ಶಿಕ್ಷಣವನ್ನು ಕೇವಲ ಪದವಿಗೆ ಸೀಮಿತಗೊಳಿಸಬೇಡಿ**

ವಿದ್ಯಾರ್ಥಿಗಳು ಮೊದಲು ಮನಗಾಣಬೇಕಾದ ಸಂಗತಿ ಎಂದರೆ, ಶಿಕ್ಷಣವೆಂದರೆ ಕೇವಲ ಅಂಕಗಳು ಅಥವಾ ಪ್ರಮಾಣಪತ್ರವಲ್ಲ. ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸುವ ಶಕ್ತಿ ನೀಡುವುದೇ ನಿಜವಾದ ಶಿಕ್ಷಣ. ಪಠ್ಯಪುಸ್ತಕದ ಜ್ಞಾನಕ್ಕಿಂತ ಹೊರತಾಗಿ, ತಂತ್ರಜ್ಞಾನ, ಸಂವಹನ ಕೌಶಲ್ಯ, ಸಮಸ್ಯೆ ಪರಿಹಾರ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬೇಕು. ವಿದೇಶದಲ್ಲಿ ಯಶಸ್ವಿಯಾದ ಉದ್ಯಮಿಗಳು "ನಾವು ಕಾಲೇಜಿನಲ್ಲಿ ಕಲಿತ ಪಾಠಕ್ಕಿಂತ ಜೀವನವೇ ನಮಗೆ ಹೆಚ್ಚು ಕಲಿಸಿತು" ಎಂದು ಸ್ಪಷ್ಟವಾಗಿ ಹೇಳುತ್ತಾರೆ.

**ಇಂಗ್ಲಿಷ್ ಮತ್ತು ಸಂವಹನ ಕೌಶಲ್ಯಕ್ಕೆ ಮಹತ್ವ ನೀಡಿ**

ಜಾಗತಿಕ ಮಟ್ಟದಲ್ಲಿ ಕೆಲಸ ಮಾಡಬೇಕೆಂದರೆ ಉತ್ತಮ ಸಂವಹನ ಕೌಶಲ್ಯ ಅತ್ಯಗತ್ಯ. ವಿಶೇಷವಾಗಿ ಇಂಗ್ಲಿಷ್ ಭಾಷೆಯ ಮೇಲೆ ಹಿಡಿತ ಇರಬೇಕು. ಇದು ಕೇವಲ ಭಾಷೆ ಅಲ್ಲ, ನಿಮ್ಮ ಆತ್ಮವಿಶ್ವಾಸವನ್ನು ವ್ಯಕ್ತಪಡಿಸುವ ಸಾಧನ. ನಿಮ್ಮ ಆಲೋಚನೆಗಳನ್ನು ಸ್ಪಷ್ಟವಾಗಿ ಹೇಳುವ ಸಾಮರ್ಥ್ಯ ಇದ್ದರೆ ಅವಕಾಶಗಳು ತಾನೇ ಹುಡುಕಿ ಬರುತ್ತವೆ.

**ಕನಸು ಕಾಣುವುದರಲ್ಲಿ ತಪ್ಪಿಲ್ಲ, ಆದರೆ ಯೋಜನೆ ಅಗತ್ಯ**

ಯುವಕರು ದೊಡ್ಡ ಕನಸುಗಳನ್ನು ಕಾಣಬೇಕು. ಆದರೆ ಕನಸುಗಳಿಗೆ ಸ್ಪಷ್ಟ ಯೋಜನೆ ಇರಬೇಕು. ಯಾವ ಕ್ಷೇತ್ರದಲ್ಲಿ ಮುಂದುವರಿಯಬೇಕು? ಅದಕ್ಕೆ ಬೇಕಾದ ಕೌಶಲ್ಯಗಳೇನು? ಮುಂದಿನ ಐದು ವರ್ಷಗಳಲ್ಲಿ ನಾನು ಎಲ್ಲಿರಬೇಕು? ಇಂತಹ ಪ್ರಶ್ನೆಗಳಿಗೆ ಉತ್ತರ ಹುಡುಕಿಕೊಳ್ಳಬೇಕು. ಯಶಸ್ವೀ ಎನ್‌ಆರ್‌ಐ ಉದ್ಯಮಿಗಳು ತಮ್ಮ ಜೀವನದಲ್ಲಿ ಗುರಿ ಸ್ಪಷ್ಟವಾಗಿದ್ದುದರಿಂದಲೇ ಯಶಸ್ಸು ಸಾಧ್ಯವಾಯಿತು ಎಂದು ಹೇಳುತ್ತಾರೆ.

**ಸೋಲನ್ನು ಭಯಪಡುವ ಅಗತ್ಯವಿಲ್ಲ**

ಸೋಲು ಜೀವನದ ಭಾಗ. ವಿದೇಶಗಳಲ್ಲಿ ಉದ್ಯಮ ಆರಂಭಿಸಿದ ಅನೇಕರು ಮೊದಲ ಹಂತದಲ್ಲೇ ವಿಫಲರಾಗಿದ್ದಾರೆ. ಆದರೆ ಅವರು ಸೋಲನ್ನು ಅಂತ್ಯವಲ್ಲ, ಪಾಠವೆಂದು ಸ್ವೀಕರಿಸಿದರು. "ನಾನು ಸೋಲಿನಿಂದ ಪಾಠ ಕಲಿತೆ, ಅದೇ ನನ್ನ ಯಶಸ್ಸಿನ ಮೂಲ" ಎನ್ನುವುದು ಅವರ ಅನುಭವ. ಯುವಕರು ಸೋಲಿಗೆ ಹೆದರದೇ, ಮತ್ತೆ ಎದ್ದು ನಿಲ್ಲುವ ಮನೋಭಾವ ಬೆಳೆಸಿಕೊಳ್ಳಬೇಕು.

**ಹಣದ ಮೌಲ್ಯವನ್ನು ಅರಿತುಕೊಳ್ಳಿ**

ಹಣ ಸಂಪಾದನೆ ಮಾತ್ರವಲ್ಲ, ಅದನ್ನು ಸರಿಯಾಗಿ ಬಳಸುವುದೂ ಮುಖ್ಯ. ಅನಗತ್ಯ ಖರ್ಚು ತಪ್ಪಿಸಿ, ಉಳಿತಾಯ ಮತ್ತು ಹೂಡಿಕೆ ಬಗ್ಗೆ ತಿಳುವಳಿಕೆ ಪಡೆಯಬೇಕು. ಅನೇಕ ಎನ್‌ಆರ್‌ಐ ಉದ್ಯಮಿಗಳು ಮೊದಲ ಸಂಬಳದಿಂದಲೇ ಉಳಿತಾಯ ಆರಂಭಿಸಿದ್ದನ್ನು ಹೆಮ್ಮೆಯಿಂದ ಹೇಳುತ್ತಾರೆ. ಹಣದ ಶಿಸ್ತು ಜೀವನದ ಶಿಸ್ತುಗೂ ಕಾರಣವಾಗುತ್ತದೆ.

ನೈತಿಕತೆ ಮತ್ತು ಪ್ರಾಮಾಣಿಕತೆ ಮರೆಯಬೇಡಿ: ಯಶಸ್ಸು ಕೇವಲ ಹಣ ಅಥವಾ ಸ್ಥಾನಮಾನದಿಂದ ಅಳೆಯಲಾಗುವುದಿಲ್ಲ. ನಿಮ್ಮ ನಡವಳಿಕೆ, ನೈತಿಕತೆ ಮತ್ತು ಪ್ರಾಮಾಣಿಕತೆಯೇ ನಿಮ್ಮ ನಿಜವಾದ ಗುರುತು. ವಿದೇಶದಲ್ಲಿ ಭಾರತೀಯರಿಗೆ ಗೌರವ ಸಿಕ್ಕಿರುವುದಕ್ಕೆ ಮುಖ್ಯ ಕಾರಣ ಅವರ ಶಿಸ್ತು, ನಂಬಿಕೆ ಮತ್ತು ನೈತಿಕ ಮೌಲ್ಯಗಳು. ಯುವಕರು ಯಾವ ಪರಿಸ್ಥಿತಿಯಲ್ಲೂ ಈ ಮೌಲ್ಯಗಳನ್ನು ಕೈ ಬಿಡಬಾರದು.

**ಸದಾ ಕಲಿಯುವ ಮನೋಭಾವ ಇರಲಿ**

ತಂತ್ರಜ್ಞಾನ ವೇಗವಾಗಿ ಬದಲಾಗುತ್ತಿರುವ ಈ ಕಾಲದಲ್ಲಿ, "ನನಗೆ ಎಲ್ಲವೂ ಗೊತ್ತು" ಎನ್ನುವ ಮನಸ್ಥಿತಿ ಅಪಾಯಕಾರಿ. ಪ್ರತಿದಿನ ಹೊಸದನ್ನು ಕಲಿಯುವ ಆಸಕ್ತಿ ಇರಬೇಕು. ಹೊಸ ಕೌಶಲ್ಯಗಳು, ಹೊಸ ಆಲೋಚನೆಗಳು ನಿಮ್ಮನ್ನು ಸ್ಪರ್ಧೆಯಲ್ಲಿ ಮುನ್ನಡೆಸುತ್ತವೆ.



**ಸಮಯ ಶಿಸ್ತು ಮತ್ತು ದುಡಿಮೆ ಯಶಸ್ಸಿನ ಕೀಲಿಕೈ**

ವಿದೇಶಗಳಲ್ಲಿ ಯಶಸ್ಸು ಸಾಧಿಸಿದವರ ಜೀವನ ಗಮನಿಸಿದರೆ, ಸಮಯಪಾಲನೆ ಮತ್ತು ಕಠಿಣ ದುಡಿಮೆ ಸಾಮಾನ್ಯ ಅಂಶಗಳಾಗಿವೆ. ಸಮಯವನ್ನು ವ್ಯರ್ಥ ಮಾಡುವವರಿಗೆ ಅವಕಾಶಗಳು ಕೈ ತಪ್ಪುತ್ತವೆ. ದಿನದ ಪ್ರತಿಯೊಂದು ಗಂಟೆಯೂ ನಿಮ್ಮ ಭವಿಷ್ಯ ನಿರ್ಮಾಣಕ್ಕೆ ಬಳಸಬೇಕು ಎಂಬ ಅರಿವು ಅಗತ್ಯ.

**ದೇಶ ಮತ್ತು ಕುಟುಂಬದ ಜೊತೆಗಿನ ಸಂಬಂಧ ಉಳಿಸಿಕೊಳ್ಳಿ**

ವಿದೇಶದಲ್ಲಿ ನೆಲೆಸಿದರೂ, ದೇಶದ ಬೇರುಗಳನ್ನು ಮರೆತರೆ ಆಗದು. ಕುಟುಂಬ, ಸಮಾಜ ಮತ್ತು ತಾಯ್ನಾಡಿನ ಜೊತೆಗಿನ ನಂಟು ಮಾನಸಿಕ ಶಕ್ತಿಯನ್ನು ಹೆಚ್ಚಿಸುತ್ತದೆ. ಅನೇಕ ಎನ್‌ಆರ್‌ಐ ಉದ್ಯಮಿಗಳು ಶಿಕ್ಷಣ, ಆರೋಗ್ಯ, ಸಮಾಜಸೇವೆಯ ಮೂಲಕ ತಮ್ಮ ದೇಶಕ್ಕೆ ಕೊಡುಗೆ ನೀಡುತ್ತಿರುವುದು ಯುವಕರಿಗೆ ಮಾದರಿಯಾಗಿದೆ.

**ಆತ್ಮವಿಶ್ವಾಸವೇ ನಿಮ್ಮ ದೊಡ್ಡ ಆಸ್ತಿ**

ಕೊನೆಗೆ, ಯುವಕರು ತಮ್ಮ ಮೇಲೆ ನಂಬಿಕೆ ಇಡಬೇಕು. ನೀವು ಸಾಧಿಸಬಲ್ಲಿರಿ ಎಂಬ ವಿಶ್ವಾಸವೇ ನಿಮ್ಮನ್ನು ಮುನ್ನಡೆಸುತ್ತದೆ. ಪರಿಸ್ಥಿತಿಗಳು ಎಷ್ಟೇ ಕಠಿಣವಾಗಿದ್ದರೂ, ಆತ್ಮವಿಶ್ವಾಸ ಮತ್ತು ಪರಿಶ್ರಮ ಇದ್ದರೆ ಯಶಸ್ಸು ದೂರವಿಲ್ಲ.

## ತುಳು ಕ್ರೈಂ ಥ್ರಿಲ್ಲರ್ 'ಕಟ್ಟೆಮಾರ್' ಟ್ರೇಲರ್ ಅದ್ದೂರಿ ಬಿಡುಗಡೆ: ಜ.23ರಂದು ತೆರೆಗೆ



ಮಂಗಳೂರು: ಅಸ್ತ್ರ ಪ್ರೊಡಕ್ಷನ್ ಸಂಸ್ಥೆಯ ಲಂಚುಲಾಲ್ ಕೆ.ಎಸ್. ನಿರ್ಮಾಣದ ಬಹುನಿರೀಕ್ಷಿತ ಕ್ರೈಂ ಥ್ರಿಲ್ಲರ್ ತುಳು ಸಿನಿಮಾ 'ಕಟ್ಟೆಮಾರ್' ಇದೇ ಜನವರಿ 23ರಂದು ತೆರೆಗೆ ಬರಲಿದ್ದು, ಅದರ ಟ್ರೇಲರ್ ಬಿಡುಗಡೆ ಸಮಾರಂಭ ಮಂಗಳೂರಿನ ಬಿಗ್ ಸಿನಿಮಾಸ್‌ನಲ್ಲಿ ಗಣ್ಯರ ಉಪಸ್ಥಿತಿಯಲ್ಲಿ ಅದ್ದೂರಿಯಾಗಿ ನೆರವೇರಿತು. ಟ್ರೇಲರ್ ಬಿಡುಗಡೆ ಮಾಡಿ ಮಾತನಾಡಿದ ನಿರ್ಮಾಪಕ ಲಂಚುಲಾಲ್ ಕೆ.ಎಸ್., "ಜನವರಿ 23ರಂದು ಕಟ್ಟೆಮಾರ್ ಸಿನಿಮಾ ಬಿಡುಗಡೆಯಾಗುತ್ತಿದೆ. ಬೇರೆ ಭಾಷೆಗಳ ಸಿನಿಮಾಗಳಿಗಿಂತ ತುಳು ಚಿತ್ರವೂ ಯಾವುದಕ್ಕೂ ಕಡಿಮೆಯಾಗಬಾರದು ಎಂಬ ಉದ್ದೇಶದಿಂದ ಈ ಚಿತ್ರವನ್ನು ಭರ್ಜರಿಯಾಗಿ ನಿರ್ಮಿಸಿದ್ದೇವೆ. ತುಳು ಚಿತ್ರರಂಗಕ್ಕೆ ಕಟ್ಟೆಮಾರ್ ನಮ್ಮ ವಿಶೇಷ ಕೊಡುಗೆ. ಎಲ್ಲರೂ ಈ ಹೊಸ ಪ್ರಯತ್ನಕ್ಕೆ ಬೆಂಬಲ ನೀಡಬೇಕು. ನಿಮ್ಮ ಬೆಂಬಲ ದೊರೆತರೆ ತುಳು ಸಿನಿ ಇಂಡಸ್ಟ್ರಿಗೆ ಇನ್ನೂ ಹಲವು ಹೊಸ ಸಾಹಸಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ" ಎಂದು ಹೇಳಿದರು. ನಟ ರೂಪೇಶ್ ಶೆಟ್ಟಿ ಮಾತನಾಡಿ, "ಈ ಚಿತ್ರಕ್ಕೆ ರಿವ್ಯೂ ಕೊಡುವ ಅವಶ್ಯಕತೆಯೇ ಇಲ್ಲ. ಟ್ರೇಲರ್ ಪ್ರದರ್ಶನದ ವೇಳೆ ಕೇಳಿಬಂದ ಪ್ರೇಕ್ಷಕರ ಚಪ್ಪಾಳೆ, ಶಿಳ್ಳೆಗಳೇ ಇದರ ಮಟ್ಟವನ್ನು ತೋರಿಸಿವೆ" ಎಂದರು. ಮುಖ್ಯಪಾತ್ರದಲ್ಲಿ ನಟಿಸಿರುವ ಜೆಪಿ ತುಮಿನಾಡ್ ಮಾತನಾಡಿ, "ಹೊಸತನದ ನಿರೀಕ್ಷೆಯಲ್ಲಿ ಮೂಡಿದ ಚಿತ್ರವೇ ಕಟ್ಟೆಮಾರ್. ಲಂಚುಲಾಲ್ ಅವರು ಸದಾ ಹೊಸ ನಿರ್ದೇಶಕರು ಮತ್ತು ಹೊಸ ಪ್ರತಿಭೆಗಳನ್ನು ತೆರೆಗೆ ತರುತ್ತಿದ್ದಾರೆ. ಈ ಸಿನಿಮಾ ತುಳು ಚಿತ್ರರಂಗಕ್ಕೆ ದೊಡ್ಡ ಕೊಡುಗೆ ಆಗಬಹುದು ಎಂಬ ನಂಬಿಕೆ ನನಗಿದೆ. ಈ ಚಿತ್ರ ಗೆದ್ದರೆ ಇಂಥಾ ವಿಭಿನ್ನ ಪ್ರಯತ್ನಗಳಿಗೆ ಇನ್ನಷ್ಟು ಮಂದಿ ಮುಂದೆ ಬರಲಿದ್ದಾರೆ" ಎಂದರು. ನಿರ್ದೇಶಕ ಸಚಿನ್ ಕಾಟ್ಲ ಮಾತನಾಡಿ, "ಈ ತರಹದ ಸಿನಿಮಾ ಮಾಡಲು ಧೈರ್ಯ ಬೇಕು. ಆ ಧೈರ್ಯವನ್ನು ನಿರ್ಮಾಪಕ ಲಂಚುಲಾಲ್ ತೋರಿಸಿದ್ದಾರೆ. ಈ ಚಿತ್ರದಲ್ಲಿ ಹೊಸತನವಿದೆ. ಎಲ್ಲರೂ ಬೆಂಬಲ ನೀಡಬೇಕು" ಎಂದು ಮನವಿ ಮಾಡಿದರು. ನಟಿ ಹರ್ಷಿತಾ ಕುಲಾಲ್ ಮಾತನಾಡಿ, ಇದು ತಮ್ಮ ಮೊದಲ ಅನುಭವವಾಗಿದ್ದು, ಪ್ರೇಕ್ಷಕರ ಸಹಕಾರವನ್ನು ಕೋರಿದರು. ಸಮಾರಂಭದಲ್ಲಿ ಆಕಾಂಕ್ಷ ರಾವ್, ಪಲ್ಲವಿ ದೇವಾಡಿಗ, ರಕ್ಷಿತ್ ಗಾಣಿಗ, ಮಾಸುಮಾ ಕೊಡಗು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಖ್ಯಾತ ನಿರೂಪಕ ಆಂಕರ್ ಚೇತನ್ ನಿರೂಪಿಸಿದರು. ಚಿತ್ರದ ಕುರಿತು 'ಕಟ್ಟೆಮಾರ್' ಚಿತ್ರಕ್ಕೆ ರಕ್ಷಿತ್ ಗಾಣಿಗ ಮತ್ತು ಸಚಿನ್ ಕಾಟ್ಲ ಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ನಿರ್ದೇಶನ ಮಾಡಿದ್ದಾರೆ. ಅಸ್ತ್ರ ಪ್ರೊಡಕ್ಷನ್ ಮೂಲಕ ಲಂಚುಲಾಲ್ ಕೆ.ಎಸ್. ಬಂಡವಾಳ ಹೂಡಿದ್ದು, ಅವರು ಚಿತ್ರದಲ್ಲಿ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಕಾಂತಾರ ಖ್ಯಾತಿಯ ಸ್ವರಾಜ್ ಶೆಟ್ಟಿ ಹಾಗೂ 'ಸು ಫ್ರಂ ಸೋ' ಖ್ಯಾತಿಯ ಜೆಪಿ ತುಮಿನಾಡ್ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದಾರೆ. ಮೈಮ್ ರಾಮದಾಸ್, ಮಾಸುಮ ಕೊಡಗು, ಭಗವಾನ್ ಸುರತ್ಕಲ್, ನಮಿತಾ ಕಿರಣ್ ಸೇರಿದಂತೆ ಹಲವರು ಚಿತ್ರದಲ್ಲಿದ್ದಾರೆ. ಕಾರ್ತಿಕ್ ಮೂಲ್ಕಿ ಸಂಗೀತ, ಗಣೇಶ್ ನೀರ್ಚಾಲು ಸಂಕಲನ, ಸಂತೋಷ್ ಆಚಾರ್ಯ ಗುಂಪಲಾಜೆ ಅವರ ಛಾಯಾಗ್ರಹಣ ಚಿತ್ರಕ್ಕಿದೆ. ಟೀಸರ್‌ನಲ್ಲಿಯೇ ಭರವಸೆ ಮೂಡಿಸಿರುವ ಈ ಸಿನಿಮಾ ಜನವರಿ 23ರಂದು ತೆರೆಗೆ ಅಪ್ಪಳಿಸಲಿದೆ.

## ಜ.19ರಂದು ಕುಂಜತ್ತೂರಿನಲ್ಲಿ ಕ್ಯಾಪ್ಸ್ ಫೌಂಡೇಶನ್ ವತಿಯಿಂದ ಕೃಷ್ಣ ಎಸ್.ಎಂ.ಯು.ಕೆ ಸೈನ್ಸ್ ಪಾರ್ಕ್ 4.0 ಉದ್ಘಾಟನೆ



**ಕುಂಜತ್ತೂರು:** ಕ್ಯಾಪ್ಸ್ ಫೌಂಡೇಶನ್ ವತಿಯಿಂದ ಕೃಷ್ಣ ಎಸ್‌ಎಂಯುಕೆ ಸೈನ್ಸ್ ಪಾರ್ಕ್ 4.0ರ ಇದರ ಉದ್ಘಾಟನಾ ಸಮಾರಂಭ ಜ.19 ರ. ಬೆಳಿಗ್ಗೆ 9.30ಕ್ಕೆ ಎಸ್.ಎಂ.ವಿ ಕೆ, ಕುಂಜತ್ತೂರು ನಲ್ಲಿ ನಡೆಯಲಿದೆ. ರಾಷ್ಟ್ರ ನಿರ್ಮಾಣದ ದೃಷ್ಟಿಕೋನ ಹೊಂದಿರುವ ಈ ಯೋಜನೆ, ಹೊರಾಂಗಣ ಪ್ರಯೋಗಗಳು ಹಾಗೂ ವೈಜ್ಞಾನಿಕ ಉಪಕರಣಗಳ ಮೂಲಕ ಪ್ರಾಯೋಗಿಕ ಅಧ್ಯಯನಕ್ಕೆ ಉತ್ತೇಜನ ನೀಡುವ ಉದ್ದೇಶ ಹೊಂದಿದೆ ಎಂದು ಕ್ಯಾಪ್ಸ್ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷರಾದ ಸಿಎ ಚಂದ್ರಶೇಖರ ಶೆಟ್ಟಿ ಮುಂಡ್ಕೂರು ತಿಳಿಸಿದ್ದಾರೆ. ತೊಕ್ಕೊಟ್ಟು ಸೇವಾಸೌಧದಲ್ಲಿನ ಉಳ್ಳಾಲ ತಾಲೂಕು ಪತ್ರಕರ್ತರ ಸಂಘದಲ್ಲಿ ಆಯೋಜಿಸಲಾದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ಪ್ಲಾಸ್ಟಿಕ್ ಮುಕ್ತ ಭಾರತ ನಿರ್ಮಾಣದ ಗುರಿಯೊಂದಿಗೆ ವಿಜ್ಞಾನವನ್ನು ಆಟದ ಮೂಲಕ ಕಲಿಸುವ ಉದ್ದೇಶದಿಂದ ಕಟೀಲು, ಕೋಟ, ರಾಮಕುಂಜದಲ್ಲಿ ಭಾಗಗಳಲ್ಲಿ ಯಶಸ್ಸಿನ ಕಾರ್ಯಕ್ರಮವನ್ನು ನಡೆಸಿದೆ. 75 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ವಿಜ್ಞಾನ ವನ ಸೈನ್ಸ್ ಪಾರ್ಕ್ ಅಪಾರ ಜನಪ್ರತಿಕ್ರಿಯೆ ಪಡೆದುಕೊಂಡಿದೆ. ವಿಜ್ಞಾನವನ್ನು ಮನರಂಜನೆಯೊಂದಿಗೆ ಮಕ್ಕಳಿಗೆ ಪರಿಚಯಿಸುವ ಈ ಪಾರ್ಕ್ ಕಳೆದ ಒಂದೂವರೆ ವರ್ಷಗಳಲ್ಲಿ ಸುಮಾರು 30,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವೀಕ್ಷಣೆ ನಡೆಸಿದ್ದಾರೆ. "ಆಟದ ಜೊತೆ ಕಲಿಯುವ ವಿಜ್ಞಾನ" ಎಂಬ ಪರಿಕಲ್ಪನೆಯೊಂದಿಗೆ ಆರಂಭಗೊಂಡ ಈ ವಿಜ್ಞಾನ ವನಕ್ಕೆ ಕಟೀಲಿನಲ್ಲಿಯೇ ಉತ್ತಮ ಸ್ಪಂದನೆ ದೊರೆತಿದ್ದು, ಮಕ್ಕಳಲ್ಲಿ ವಿಜ್ಞಾನ ಪ್ರೀತಿಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಎಂದರು.

ಕಾರ್ಯಕ್ರಮವು ಶ್ರೀ ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿ, ಶ್ರೀ ನಿತ್ಯಾನಂದ ಯೋಗಾಶ್ರಮ, ಕೊಂಡೆವೂರು ಮಠ ಅವರ ಆಶೀರ್ವಾದದೊಂದಿಗೆ ನಡೆಯಲಿದ್ದು, ಉದ್ಯಮಿ ಡಾ. ಕನ್ಯಾನ ಸದಾಶಿವ ಶೆಟ್ಟಿ , ಅಖಿಲ ಭಾರತ CAPS ರ್‍ಯಾಂಕರ್ ಹಾಗೂ ಮಾಜಿ ಅಧ್ಯಕ್ಷರು, MLR, ICAI ಸಿಎ ಪ್ರಸನ್ನ ಶೆಣೈ, ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮಹಾಲಿಂಗೇಶ್ವರ ವಿದ್ಯಾನಿಕೇತನ, ಕುಂಜತ್ತೂರು ಇದರ ಅಧ್ಯಕ್ಷ ಸುರೇಶ್ ಶೆಟ್ಟಿ, ಶ್ರೀ ಮಹಾಲಿಂಗೇಶ್ವರ ವಿದ್ಯಾನಿಕೇತನ ಕುಂಜತ್ತೂರು ಇದರ ಪ್ರಾಂಶುಪಾಲರಾದ ಕುಸುಮಾ, ಕೋಶಾಧಿಕಾರಿ ದಿನೇಶ್ ಶೆಟ್ಟಿ , ಕ್ಯಾಪ್ಸ್ ಫೌಂಡೇಶನ್‌ನ ಸದಸ್ಯೆ ಪೂರ್ಣಿಮಾ ಚಂದ್ರಶೇಖರ ಶೆಟ್ಟಿ ಉಪಸ್ಥಿತರಿದ್ದರು.

### 'ಸೀ ಗ್ರೌಂಡ್' ಕಡಲತೀರವು ಇಂದು ಅನಧಿಕೃತ ತ್ಯಾಜ್ಯ ವಿಲೇವಾರಿ ಕೇಂದ್ರ

## ನಗರಸಭೆಯ ನಿರ್ಲಕ್ಷ್ಯದ ವಿರುದ್ಧ ಸಾರ್ವಜನಿಕರು ಆಕ್ರೋಶ

**ಉಳ್ಳಾಲ:** ಪ್ರವಾಸಿಗರ ಆಕರ್ಷಣೀಯ ಕೇಂದ್ರ ಹಾಗೂ ಕ್ರೀಡಾ ಚಟುವಟಿಕೆಗಳ ತಾಣವಾಗಿರುವ ಉಳ್ಳಾಲ ನಗರಸಭಾ ವ್ಯಾಪ್ತಿಯ ಪ್ರಸಿದ್ಧ 'ಸೀ ಗ್ರೌಂಡ್' ಕಡಲತೀರವು ಇಂದು ಅನಧಿಕೃತ ತ್ಯಾಜ್ಯ ವಿಲೇವಾರಿ ಕೇಂದ್ರವಾಗಿ ಮಾರ್ಪಟ್ಟಿದೆ. ನಗರಸಭೆಯ ನಿರ್ಲಕ್ಷ್ಯದ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದು, ಕ್ರಮ ಕೈಗೊಳ್ಳದಿದ್ದರೆ ಮೌನ ಪ್ರತಿಭಟನೆ ನಡೆಲಾಗುವುದು. ಗೂಗಲ್‌ನಲ್ಲಿ 'ಕರಾವಳಿ ಪ್ರವಾಸ ತಾಣಗಳು' ಎಂದು ಹುಡುಕಿದಾಗ ಉಳ್ಳಾಲದ ಈ ಪ್ರದೇಶವು ಮುಂಚೂಣಿಯಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ, ವಾಸ್ತವದಲ್ಲಿ ಇಲ್ಲಿ ಲೋಡ್‌ಗಟ್ಟಲೆ ಪ್ಲಾಸ್ಟಿಕ್, ನಿರ್ಮಾಣ ಸಾಮಗ್ರಿ ಹಾಗೂ ಅಪಾಯಕಾರಿ ತ್ಯಾಜ್ಯಗಳನ್ನು ಸುರಿಯಲಾಗುತ್ತಿದೆ. ಇದರಿಂದ ಸ್ಥಳೀಯ ನಿವಾಸಿಗಳು ಮತ್ತು ಪ್ರವಾಸಿಗರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ನಾಗರಿಕ ಸಮಿತಿಯ ಅಬ್ದುಲ್ ರಹಮಾನ್ ತಿಳಿಸಿದ್ದಾರೆ.

## ಉಳ್ಳಾಲ ತಾಲೂಕಿನ 10 ಕಡೆಗಳಲ್ಲಿ ಜ.18ರಿಂದ ಫೆ.1ರವರೆಗೆ ಹಿಂದೂ ಸಂಗಮ



**ಉಳ್ಳಾಲ:** ಇಲ್ಲಿನ ತಾಲೂಕು ಇದರ ಯೋಜನೆಯಂತೆ 2026ರ ಜ.18 ರಿಂದ ಫೆ.1 ರವರೆಗೆ ತಾಲೂಕಿನ 10 ಕಡೆಗಳಲ್ಲಿ ಹಿಂದೂ ಸಂಗಮ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಜ.18, ಮಧ್ಯಾಹ್ನ 3ಕ್ಕೆ ಗೋವನಿತಾಶ್ರಯ ಪಾವೂರು, ಜ.25 ರಂದು ಮಧ್ಯಾಹ್ನ 3 ಕ್ಕೆ ಕೈರಂಗಳ ಹೂಹಾಕುವಕಲ್ಲು ಮೈದಾನ, ಮಧ್ಯಾಹ್ನ 3 ಕ್ಕೆ ಕುತ್ತಾರು ದೇವಸ್ಥಾನ, ಫೆ. 1 ಮಧ್ಯಾಹ್ನ 3 ಕ್ಕೆ ಸೋಮೇಶ್ವರ ವ್ಯಾಪ್ತಿಯ ಶಾರದಾ ಮೈದಾನ ಕೊಲ್ಯ, ಕೋಟೆಕಾರು–ಮಾಡೂರು ನೀರಿನ ಟ್ಯಾಂಕ್ ಬಳಿ, ತಲಪಾಡಿ– ದೇವಿಪುರ ದೇವಸ್ಥಾನ, ಕೊಣಾಜೆ ಅಸೈಗೋಳಿ ಮೈದಾನ, ಕುರ್ನಾಡು ಕಾಯರ್ ಗೋಳಿ ಮೈದಾನ , ಅಂಬ್ಲಮೊಗರು ಆಡು ಬಾಕಿಮಾರ್ ಗದ್ದೆ, ಉಳ್ಳಾಲ ಐಸ್ ಫ್ಯಾಕ್ಟರಿ ಭೊಟಾ ಮಂಗಳೂರು ಪ್ರದೇಶಗಳಲ್ಲಿ ನಡೆಯಲಿದೆ. ಸಮಿತಿ ಗೌರವಾಧ್ಯಕ್ಷರಾಗಿ ಸುದೇಶ್ ಮರೋಳಿ, ಅಧ್ಯಕ್ಷರಾಗಿ ಚಂದ್ರಹಾಸ್ ಪೂಂಜಾ, ಉಪಾಧ್ಯಕ್ಷರಾಗಿ ರಾಜೇಶ್ ಬಂಗೇರ, ಸಂಯೋಜಕರಾಗಿ ಪ್ರೇಮ್ ರಾಜ್ ಪೂಜಾರಿ ಹಾಗೂ ಉಪಾಧ್ಯಕ್ಷರಾಗಿ ಪದ್ಮನಾಭ ಪಾಣಾರ ಸೋಮೇಶ್ವರ, ರಾಜೇಶ್ ಬಂಗೇರ ಉಳ್ಳಾಲ, ಶ್ರೀಧರ್ ಪೆರಡೆ ಮಂಜನಾಡಿ, ಸತೀಶ್ ದೀಪಂ, ಪ್ರಸಾದ್ ಮಡ್ಯಾರ್ ಕೋಟೆಕಾರ್, ಜಯಂತ್ ಕೊಂಡಾಣ, ಶಿವಪ್ರಸಾದ್ ಅಡ್ಕ ಸೋಮೇಶ್ವರ, ಶೋಭಾ ಕೇಶವ ಕಜೆ ಕಿನ್ಯ, ಸೂರಜ್ ಮಡ್ಯಾರ್, ಜಗದೀಶ್ ನಾಯ್ಕ್ ತಲಪಾಡಿ, ಪ್ರವೀಣ್ ಕೃಷ್ಣ ಕೋಡಿ, ರಮೇಶ್ ಶೆಟ್ಟಿಗಾರ್ ಕೊಣಾಜೆ ಕಾರ್ಯದರ್ಶಿಯಾಗಿ ಸುಭಾಷ್ ಧರ್ಮನಗರ, ಪವಿತ್ರ ಕರೆಬೈಲ್, ದುಷ್ಯಂತ್ ಮುಡಿಪು, ಕೋಶಾಧಿಕಾರಿಯಾಗಿ ಪ್ರವೀಣ್ ಬಸ್ತಿ, ಸುದರ್ಶನ್ ಧರ್ಮನಗರ, ಮಹಿಳಾ ಸಂಚಾಲಕರಾಗಿ ಗಾಯತ್ರಿ ಕಿಶೋರ್, ಕುತ್ತಾರು, ಸಹಸಂಚಾಲಕಿಯಾಗಿ ತುಳಸಿ ನಿತಿನ್ ಗಟ್ಟಿ ಕುರ್ನಾಡ್ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಸಾಮಾಜಿಕ ಸೇವಾ ಸಹಕಾರ, ಸ್ವಾವಲಂಬನೆ ವೃದ್ಧಿಸುವ ಸಲುವಾಗಿ ಸಮಾಜದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಸೇವಾ, ಕ್ರೀಡಾ, ಕಲಾ, ಸಹಕಾರಿ ಇತ್ಯಾದಿ ಎಲ್ಲಾ ಪ್ರಕಾರದ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಂಘಟನೆಗಳ ಸಹಯೋಗದಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ಕೌಟುಂಬಿಕ ಮೌಲ್ಯಗಳ ಪುನರುತ್ಥಾನ, ಸಾಮಾಜಿಕ ಸಾಮರಸ್ಯದ ಜಾಗರಣ, ಪರಿಸರ ಸಂರಕ್ಷಣೆಯ ಸಂಕಲ್ಪ, ಸ್ವಾವಲಂಬಿ ಹಾಗೂ ಸ್ವಾಭಿಮಾನಿ ಜೀವನ ಪದ್ಧತಿ ಮತ್ತು ನಾಗರೀಕ ಕರ್ತವ್ಯಗಳ ಪಾಲನೆಯ ಅನುಷ್ಠಾನದಂತಹ ಆದರ್ಶಗಳ ಅಡಿಯಲ್ಲಿ ಸಮಾಜಕ್ಕಾಗಿ ಸಂಘಟಿತವಾಗಿ ಸ್ಥಳೀಯ ಸಮಾಜವೇ ನಡೆಸುವ ಕಾರ್ಯಕ್ರಮಗಳಾಗಲಿವೆ ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಉಳ್ಳಾಲದಲ್ಲಿ ಪೋಸ್ಟರ್ ಬಿಡುಗಡೆ**

ಹಿಂದೂ ಸಂಗಮ ಆಯೋಜನಾ ಸಮಿತಿ ಉಳ್ಳಾಲ ಮಂಡಲ ಇದರ ಆಶ್ರಯದಲ್ಲಿ ಇದೇ ಫೆ 1 ರಂದು ಉಳ್ಳಾಲ ನಗರಸಭೆ ವ್ಯಾಪ್ತಿಯ ಉಳಿಯ,ವಿದ್ಯಾರಣ್ಯನಗರ, ಮೊಗವೀರ ಪಟ್ಣ, ತೊಕ್ಕೊಟ್ಟು ಮತ್ತು ಧರ್ಮನಗರ ಗ್ರಾಮಗಳನ್ನೊಳಗೊಂಡ ಉಳ್ಳಾಲ ಮಂಡಲ ಹಿಂದೂ ಸಂಗಮ ಹಾಗೂ ಶೋಭಾಯಾತ್ರೆ ಆಯೋಜಿಸಿದ್ದು ಈ ಹಿನ್ನೆಲೆಯಲ್ಲಿ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ಉಳ್ಳಾಲ ಶಾರದನಿಕೇತನದ ಸಭಾಂಗಣದಲ್ಲಿ ಜರುಗಿತು. ಉಳ್ಳಾಲದ ದೈವಸ್ಥಾನದ ಗುರಿಕಾರರು ಮತ್ತು ಚಾಕರಿ ವರ್ಗದವರು ಪೋಸ್ಟರ್ ಬಿಡುಗಡೆಗೊಳಿಸಿದರು.

ಈ ಸಂಧರ್ಭದಲ್ಲಿ ಉಳ್ಳಾಲ ತಾಲೂಕಿನ ಹಿಂದೂ ಸಂಗಮದ ಆಯೋಜನ ಸಮಿತಿಯ ಉಪಾಧ್ಯಕ್ಷರಾದ ರಾಜೇಶ್ ಬಂಗೇರ,ಉಳ್ಳಾಲ ವ್ಯಾಘ್ರಚಾಮುಂಡಿ ದೈವಸ್ಥಾನದ ಸುಭಾಷ್ ಪೂಜಾರಿ, ಉಳ್ಳಾಲ ಚೀರುಂಭ ಭಗವತಿ ಕ್ಷೇತ್ರದ ಖಂಡಪ್ಪ ಕಾರ್ನವರು, ಬಂಡಿಕೊಟ್ಯ ಕೊಟ್ಟಾರ ಸ್ಥಾನ ಮಲರಾಯ ದೈವಸ್ಥಾನದ ಲತೀಶ್ ಮುಂಡಪ್ಪ ಪೂಜಾರಿ ವೈದ್ಯನಾಥ ದೈವಸ್ಥಾನ ಉಳ್ಳಾಲ ದಾಮು ಮುಂಡಪ್ಪ ಪೂಜಾರಿ, ಶ್ರೀ ವೀರಭದ್ರ ದುರ್ಗಾಪರಮೇಶ್ವರಿಯ ಅಧ್ಯಕ್ಷ ಐತಪ್ಪ ಶೆಟ್ಟಿಗಾರ್ , ಶ್ರೀ ತಿರುಮಲ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದ ಅಧ್ಯಕ್ಷರು ಶ್ರೀಕರಕಿಣಿ, ಉಳಿಯ ಶ್ರೀ ಉಳ್ಳಾಲ್ದಿ ಧರ್ಮಸರ ಕ್ಷೇತ್ರದ ಸುರೇಶ್ ಗುರಿಕಾರರು, ಗೋಪಾಲಕೃಷ್ಣ ಭಜನಾಮಂಡಳಿಯ ಅಬ್ಬಂಜರ ಉಮೇಶ್ ಅಬ್ಬಂಜರ, ಉಳ್ಳಾಲ ಉಳಿಯ ದೇವಸ್ಥಾನದ ನಂದ ಗುರಿಕಾರರು, ಉಪಸ್ಥಿತಿರಿದ್ದರು. ಭೊಟಾ ಮಂಗಳೂರು ಉಳ್ಳಾಲದಲ್ಲಿ ನಡೆಯುವ ಬ್ರಹತ್ ಹಿಂದೂ ಸಂಗಮ ಸಮಾವೇಶ ಉಳ್ಳಾಲ ಶ್ರೀ ಚೀರುಂಭ ಭಗವತೀ ಕ್ಷೇತ್ರದಿಂದ ಬ್ರಹತ್ ಶೊಭಾಯಾತ್ರೆ ಹೊರಟು ಐಸ್ ಫಾಕ್ಟರಿ ಭೊಟಾ ಮಂಗಳೂರು,ಉಳ್ಳಾಲದಲ್ಲಿ ಜರಗಲಿದೆ ಎಂದು ಕಾರ್ಯಕ್ರಮದ ಸಂಯೋಜಕ ಜಗದೀಶ್ ನಾಯ್ಕ್ ತಲಪಾಡಿ ತಿಳಿಸಿಕೊಟ್ಟರು,ಕಾರ್ಯಕ್ರಮದ ವಿವರಣೆ ಗುರುಪ್ರಸಾದ್ ನೀಡಿದರು, ಕಾರ್ಯಕ್ರಮ ನಿರೂಪಣೆ ಅರುಣ್ ಉಳ್ಳಾಲ್, ಸುರೇಶ್ ಗಟ್ಟಿ ವಂದಿಸಿದರು.

### ಕುತ್ತಾರು ಕೊರಗಜ್ಜನ ಕ್ಷೇತ್ರಕ್ಕೆ ನಟ ಸುನೀಲ್ ಶೆಟ್ಟಿ ಭೇಟಿ

## ಪುತ್ರ ಅಹಾನ್ ಶೆಟ್ಟಿ ನಟನೆಯ ಬಾರ್ಡರ್–2 ಯಶಸ್ಸಿಗೆ ಪ್ರಾರ್ಥನೆ



**ಉಳ್ಳಾಲ:** ಕರಾವಳಿಯ ಕಾರಣೀಕ ಕ್ಷೇತ್ರವಾದ ಕುತ್ತಾರು ಕೊರಗಜ್ಜನ ಆದಿಸ್ಥಳಕ್ಕೆ ಬಾಲಿವುಡ್ ನಟರಾದ ಸುನೀಲ್ ಶೆಟ್ಟಿ ಅವರು ಶುಕ್ರವಾರ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು ಮಂಗಳೂರಿಗೆ ಯಾರು ಬಂದರು ಕೊರಗಜ್ಜನ ಕ್ಷೇತ್ರಕ್ಕೆ ಬಂದೇ ಬರ್ತಾರೆ.ಯಾರೇ ಬಂದರೂ ಕೊರಗಜ್ಜ ಅವರ ಬಯಕೆಗಳನ್ನು ಈಡೇರಿಸುತ್ತಾರೆ. ನನ್ನ ಮಗ,ಮಗಳು,ಅಳಿಯ ಎಲ್ಲರೂ ಇಲ್ಲಿಗೆ ಬಂದಿದ್ದಾರೆ.ನನಗೂ ಇಲ್ಲಿ ಬರಲು ಬಹಳ ಆಶೆ ಇತ್ತು ಅದು ಇಂದು ನೆರವೇರಿದೆ.ಪುತ್ರ ಅಹಾನ್ ಶೆಟ್ಟಿ ನಟನೆಯ ಬಹು ನಿರೀಕ್ಷಿತ ಬಾರ್ಡರ್ –2 ಚಿತ್ರ ಬಿಡುಗಡೆಯಾಗುತ್ತಿದೆ.ಅದರ ಯಶಸ್ಸಿಗಾಗಿ ಆಶೀರ್ವಾದ ಬೇಡಲು ಇಲ್ಲಿಗೆ ಬಂದಿದ್ದೇನೆ. ತುಳು ಭಾಷೆ,ಸಂಸ್ಕೃತಿಯನ್ನು ಜಗತ್ತಿಗೆ ಪಸರಿಸುವ ಉದ್ದೇಶದಿಂದ ಈಗಾಗಲೇ "ಜೈ"ತುಳು ಸಿನಿಮಾದಲ್ಲಿ ನಟಿಸಿದ್ದೇನೆ.ತುಳು,ಕನ್ನಡ ಸಿನೆಮಾದಲ್ಲಿ ಸದ್ಯಕ್ಕೆ ಬೇರೆ ಯೋಜನೆಗಳಿಲ್ಲ ಎಂದರು. ಕುತ್ತಾರು ಕೊರಗತನಿಯ ಆದಿಸ್ಥಳ ಕ್ಷೇತ್ರದ ಪರವಾಗಿ ನಟ ಸುನೀಲ್ ಶೆಟ್ಟಿ ಅವರನ್ನ ಸನ್ಮಾನಿಸಿ ಗೌರವಿಸಲಾಯಿತು. ಮುಂಬಯಿ ಉದ್ಯಮಿ ವಿವೇಕ್ ಶೆಟ್ಟಿ ಬೊಲ್ಯಗುತ್ತು,ಕುತ್ತಾರು ಕೊರಗತನಿಯ ಆದಿಕ್ಷೇತ್ರದ ಮಹಾಬಲ ಹೆಗ್ಡೆ,ದೇವಿಪ್ರಸಾದ್ ಶೆಟ್ಟಿ,ಶ್ರೀರಾಮ್ ರೈ ಮೊದಲಾದವರು ಉಪಸ್ಥಿತರಿದ್ದರು.

# ಮಾ.28,29,30ರಂದು ಬ್ರಹ್ಮಕಲಶೋತ್ಸವ; ಬಂಡಿಕೊಟ್ಯ ಶ್ರೀ ಮಲರಾಯ ದೈವಸ್ಥಾನದಲ್ಲಿ ಪೂರ್ವಭಾವಿ ಸಭೆ



**ಉಳ್ಳಾಲ:** ಸುಮಾರು 800 ವರುಷಗಳ ಪೌರಾಣಿಕ ಹಿನ್ನೆಲೆಯುಳ್ಳ, ರಾಣಿ ಅಬ್ಬಕ್ಕಳ ಕಾಲದಿಂದಲೂ ಆರಾಧಿಕೊಂಡು ಬಂದಿರುವ ಅತ್ಯಂತ ಪುರಾತನ ಕ್ಷೇತ್ರವಾಗಿರುವ ಉಳ್ಳಾಲ ಬಂಡಿಕೊಟ್ಯದ ರಾಜನ್ ದೈವ ಶ್ರೀ ಮಲರಾಯ, ಜುಮಾದಿ ಬಂಟ ದೈವಗಳ ನೂತನ ಭಂಡಾರ ಮನೆಯ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು ಇದೇ ಮಾರ್ಚ್ 28,29,30 ರಂದು ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವವು ನಡೆಯಲಿದೆ. ಆ ಪ್ರಯುಕ್ತ ಕ್ಷೇತ್ರದಲ್ಲಿ ದೇವಸ್ಥಾನ,ದೈವಸ್ಥಾನ,ಮಠ,ಮಂದಿರ ಮತ್ತು ಸಂಘ ಸಂಸ್ಥೆಗಳ ಪ್ರಮುಖರ ಉಪಸ್ಥಿತಿಯಲ್ಲಿ ಪೂರ್ವಭಾವಿ ಸಭೆ ನಡೆಯಿತು. ಸಭೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರಾದ ಸತೀಶ್ ಕುಂಪಲ ಅವರನ್ನು ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಬಂಡಿಕೊಟ್ಯ ಶ್ರೀ ಮಲರಾಯ ದೈವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಸುಂದರ ಉಳ್ಳಾಲ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.ಮಲರಾಯ ದೈವಸ್ಥಾನದ ಅರ್ಚಕರಾದ ಲತೀಶ್ ಯಾನೆ ಮುಂಡ ಪೂಜಾರಿ,ಚೀರುಂಭ ಭಗವತೀ ಕ್ಷೇತ್ರದ ಪ್ರಧಾನ ಅರ್ಚಕರಾದ ಮಂಜಪ್ಪ ಕಾರ್ನವರ್,ಪ್ರಮುಖರಾದ ಬಾಲಕೃಷ್ಣ ಶೆಟ್ಟಿ ಉಳ್ಳಾಲಗುತ್ತು,ಉಳ್ಳಾಲ ಮೊಗವೀರ ಸಂಘದ ಮಾಜಿ ಅಧ್ಯಕ್ಷರಾದ ಸದಾನಂದ ಬಂಗೇರ, ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರಾದ ಸುರೇಶ್ ಭಟ್ನಗರ,ತಲಪಾಡಿ ಅಲಂಕಾರಗುಡ್ಡೆ ಶ್ರೀ ಮಲರಾಯ ದೈವಸ್ಥಾನದ ಪ್ರಮುಖರಾದ ರವೀಂದ್ರನಾಥ ರೈ,ಬ್ರಹ್ಮಶ್ರೀ ಬಿಲ್ಲವ ವೇದಿಕೆಯ ಅಧ್ಯಕ್ಷರಾದ ಕೆ.ಟಿ.ಸುವರ್ಣ,ಮಂಗಳೂರು ವಿಶ್ವವಿದ್ಯಾಲಯದ ನಾರಾಯಣಗುರು ಅಧ್ಯಯನ ಪೀಠದ ಸದಸ್ಯರಾದ ಸತೀಶ್ ಕರ್ಕೇರ,ಉಳ್ಳಾಲ ಚೀರುಂಭ ಭಗವತೀ ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷರಾದ ಚಂದ್ರಹಾಸ ಉಳ್ಳಾಲ್ ,ಸೋಮೇಶ್ವರ ಸೋಮನಾಥ ಕ್ಷೇತ್ರದ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ದೀಪಕ್ ಪಿಲಾರು,ಗ್ಯಾರಂಟಿ ಅನುಷ್ಠಾನ ಜಿಲ್ಲಾ ಸಮಿತಿಯ ಉಪಾಧ್ಯಕ್ಷರಾದ ಸುರೇಖ ಚಂದ್ರಹಾಸ್,ಉಳ್ಳಾಲ ಬೈಲು ವೈದ್ಯನಾಥ ಕ್ಷೇತ್ರದ ಪ್ರಮುಖರಾದ ರವಿ ಸುವರ್ಣ,ಉಳ್ಳಾಲ ಲಕ್ಷ್ಮೀ ನರಸಿಂಹ ಕ್ಷೇತ್ರದ ಪ್ರಮುಖರಾದ ಶ್ರೀಕರ ಕಿಣಿ,ಪ್ರಮುಖರಾದ ನಿಶಾನ್ ಪೂಜಾರಿ ಬಂಡಿಕೊಟ್ಯ,ಉಳ್ಳಾಲ್ತಿ ಧರ್ಮಅರಸರ ಕ್ಷೇತ್ರದ ಪ್ರಮುಖರಾದ ಸುಂದರ ಉಳಿಯ,ಗೋಳಿಯಡಿ ಅಯ್ಯಪ್ಪ ಮಂದಿರದ ಪ್ರಮುಖರಾದ ದಿನೇಶ್ ಉಳಿಯ,ವಳಚಿಲತ್ತಾಯ ದೈವಸ್ಥಾನದ ಪ್ರಮುಖರಾದ ಶ್ರೀಕಾಂತ್ ಬಂಗೇರ,ಕೊಲ್ಯ ಬಿಲ್ಲವ ಸಮಾಜದ ಪ್ರಮುಖರಾದ ವೇಣುಗೋಪಾಲ ಕೊಲ್ಯ,ಕೋರ್ದಬ್ಬು ದೈವಸ್ಥಾನದ ಚಂದ್ರಹಾಸ ಗುರಿಕಾರ,ಉಳ್ಳಾಲ ಗೋಪಾಲಕೃಷ್ಣ ಮಠದ ಜಯಂತ್ ಭಟ್,ಉಳ್ಳಾಲ ವೀರಭದ್ರ ಕ್ಷೇತ್ರದ ರಮೇಶ್ ಮೊದಲಾದವರು ಉಪಸ್ಥಿತರಿದ್ದರು.

ಜೀವನ್ ಕುಮಾರ್ ತೊಕ್ಕೊಟ್ಟು ಸ್ವಾಗತಿಸಿದರು. ಮಧ್ವರಾಜ್ ತೊಕ್ಕೊಟ್ಟು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಉದಯ ಆರ್.ಕೆ ಉಳ್ಳಾಲ್ ವಂದಿಸಿದರು. ನವನೀತ್ ಉಳ್ಳಾಲ್ ನಿರೂಪಿಸಿದರು.

## ಕಲ್ಲಾಪು ಬುರ್ದುಗೋಳಿ ಕ್ಷೇತ್ರದಲ್ಲಿ ವರ್ಷಾವಧಿ ಕೋಲ

# ‘ಸಿಂಗಾರ ಸುಗಿಪು’ ತುಳು ಭಕ್ತಿಗೀತೆ ಬಿಡುಗಡೆ

**ಕಲ್ಲಾಪು:** ಬುರ್ದುಗೋಳಿ ಕಲ್ಲಾಪುವಿನ ಮಣ್ಣು ನನಗೆ ಮನೆ ಅನ್ನುವ ಭಾವನೆ ನೀಡಿದೆ. ಬೇರೆ ಊರಿಗೆ ಬಂದಿದ್ದೇವೆ ಎಂಬ ಯಾವುದೇ ರೀತಿಯ ಅಂಜಿಕೆ ಇಲ್ಲಿ ಎಷ್ಟೂ ಅನಿಸಿಲ್ಲ. ಸಮಿತಿ ಸದಸ್ಯರ ಪ್ರೀತಿ, ಅಪ್ಯಾಯತೆ, ಆತ್ಮೀಯ ತೆ ಹಾಗೂ ದೈವದಲ್ಲಿ ಇಟ್ಟ ಅಚಲ ನಂಬಿಕೆ ಇವೆಲ್ಲವೂ ನನಗೆ ಅಜ್ಜನ ಕಾರಣೀಕ ಶಕ್ತಿಯ ಜೀವಂತ ಪ್ರತ್ಯಕ್ಷ ಉದಾಹರಣೆಯಂತೆ ಕಾಣುತ್ತಿವೆ.ನಾವು ದೈವವನ್ನು ಎಷ್ಟು ಗಟ್ಟಿಯಾಗಿ ಹಿಡಿದುಕೊಳ್ಳುತ್ತೇವೋ, ಆಪತ್ತು ಬಂದಾಗ ದೈವಗಳೇ ಕೈಚಾಚಿ ನಮ್ಮನ್ನು ರಕ್ಷಿಸುತ್ತವೆ ಎಂದು ವಾರಣಾಸಿ ಕಾಶಿ ಮಠದ ಶ್ರೀ ಶ್ರೀ ಶ್ರೀ ವಿದ್ಯಾಶಂಕರಾನಂದ ಸರಸ್ವತಿ ಸ್ವಾಮೀಜಿ ಅಭಿಪ್ರಾಯಪಟ್ಟರು.

ಅವರು ಕಲ್ಲಾಪು ಬುರ್ದುಗೋಳಿಯ ಗುಳಿಗ ಕೊರಗಜ್ಜ ದೈವಗಳ ಉದ್ಭವಶಿಲೆಯ ಪ್ರಧಾನ ಆದಿಸ್ಥಳ ಸೇವಾ ಟ್ರಸ್ಟ್ ಆಶ್ರಯದಲ್ಲಿ ಕ್ಷೇತ್ರದಲ್ಲಿ ಎರಡು ದಿನಗಳ ಕಾಲ ನಡೆದ ಗುಳಿಗ ಕೊರಗಜ್ಜ ದೈವದ ವರ್ಷಾವಧಿ ಕೋಲದಲ್ಲಿ ಭಾಗವಹಿಸಿ ಮಾತನಾಡಿದರು.



ಕಲ್ಲಾಪುವಿನ ಮಣ್ಣಿನಲ್ಲಿ ನಮಗೆ ಏನಾಗಿದೆ ಎಂಬುದೇ ಮುಖ್ಯ. ಜೀವನದ ಪ್ರತಿಯೊಂದು ನಿರ್ಧಾರವೂ ಕೊರಗಜ್ಜನ ಅಪ್ಪಣೆಯಿಲ್ಲದೆ ತೆಗೆದುಕೊಳ್ಳುವುದೇ ಇಲ್ಲ. ಅಜ್ಜ ನಮ್ಮನ್ನು ಇಷ್ಟಪಡುತ್ತಾರಾ, ನಾವು ಅವರನ್ನು ಇಷ್ಟಪಡುತ್ತೇವೋ ಅದು ತಿಳಿಯುವುದಕ್ಕಿಂತ, ಅವರ ಜೊತೆಗಿನ ಅಂತರಂಗದ ಬಂಧವೇ ದೊಡ್ಡದು. ಬೆಳಕಿನ ದೀವಟಿಕೆಯನ್ನು ಕೈಯಲ್ಲಿ ಹಿಡಿದುಕೊಂಡು ಅಜ್ಜ ಮುಂದೆ ಸಾಗುತ್ತಾ, ನನ್ನನ್ನು ಹಿಂದೆ ಕರೆದುಕೊಂಡು ಹೋಗುತ್ತಿರುವ ಅನುಭವ,ಅದು ನನ್ನ ಬದುಕಿನ ಅಮೂಲ್ಯ ಕ್ಷಣ. ಅಜ್ಜನಿಂದ ನನಗೆ ಅಪಾರವಾದ ಪ್ರೀತಿ ದೊರೆತಿದೆ. ಎರಡು ವರ್ಷಗಳ ಪರಿಚಯದಲ್ಲಿ ಆಡಳಿತ ಮಂಡಳಿಯವರೊಂದಿಗೆ ಬೆಸೆದ ಆತ್ಮೀಯ ಸಂಬಂಧ, ಅಜ್ಜನ ಮೂಲ ಶಕ್ತಿಯನ್ನು ಇನ್ನಷ್ಟು ಹತ್ತಿರ ಮಾಡಿದೆ. ಯಶವಂತ್ ಶೆಟ್ಟಿ ಅವರಿಂದ ಪರಿಚಯವಾದ ಈ ಕ್ಷೇತ್ರ ನನ್ನ ಬದುಕಿನ ಹಾದಿಗಳನ್ನು ಬದಲಿಸಿದೆ. ಬೇರೆಯವರಿಗೆ ವಿಚಾರ ಹೇಳುವಾಗ ಒಂದೇ ಮಾತು ಹೇಳುತ್ತೇನೆ ಮರ್ಕಟ ಕಿಶೋರ ನ್ಯಾಯದಲ್ಲಿ ದೈವವನ್ನು ನಂಬಲೇಬೇಕು. ದೈವ ನಮ್ಮನ್ನು ಎಂದಿಗೂ ಕೈಬಿಡುವುದಿಲ್ಲ ಅನ್ನುವುದನ್ನು ತಾನೇ ಸಾಕ್ಷಿ ಎಂದರು.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಮಾತನಾಡಿ, ಬುರ್ದುಗೋಳಿ ಕ್ಷೇತ್ರ ಇತಿಹಾಸ ಪಾವಿತ್ರತೆಯನ್ನು ಹೊಂದಿರುವ, ಭಕ್ತಿಪೂರಕವಾದ ಕ್ಷೇತ್ರವಾಗಿದೆ. ಈ ಕ್ಷೇತ್ರವನ್ನು ಅಭಿವೃದ್ಧಿಯ ದಿಕ್ಕಿನಲ್ಲಿ ಸಮರ್ಥವಾಗಿ ಕೊಂಡೊಯ್ಯುತ್ತಿರುವ ಆಡಳಿತ ಸಮಿತಿಯ ಸದಸ್ಯರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ರಾಜ್ಯ ಹಾಗೂ ರಾಷ್ಟ್ರಮಟ್ಟದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿರುವ ಹಿನ್ನೆಲೆ, ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಕಲ್ಪಿಸುವುದು ಅತ್ಯಂತ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಸರಕಾರದಿಂದ ಲಭ್ಯವಾಗುವ ಎಲ್ಲಾ ರೀತಿಯ ಸಹಕಾರವನ್ನು ನೀಡಲು ನಾವು ಬದ್ಧರಾಗಿದ್ದೇವೆ. ಕ್ಷೇತ್ರಕ್ಕೆ ನೀಡುವ ಸಹಕಾರವು ಸಮಾಜಕ್ಕೆ ಪರೋಕ್ಷವಾಗಿ ನೀಡುವ ಸಹಕಾರದಂತೆಯೇ ಎಂಬ ನಂಬಿಕೆ ನಮ್ಮದು. ಈಗಾಗಲೇ ಡ್ರೈನ್ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಂಡಿದ್ದು, ಮುಂದಿನ ದಿನಗಳಲ್ಲಿಯೂ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುವೆವು ಎಂದರು.

ಶ್ರೀ ಕ್ಷೇತ್ರ ಕೊಲ್ಯ ಮೂಕಾಂಬಿಕಾ ದೇವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷರಾದ ಚಂದ್ರಹಾಸ್ ಪಂಡಿತ್ ಹೌಸ್ ಮಾತನಾಡಿ, ಸ್ಥಳಾವಕಾಶ ಹಾಗೂ ಮೂಲಸೌಕರ್ಯ ವ್ಯವಸ್ಥೆಯಲ್ಲಿ ಇದ್ದ ಕೊರತೆಯನ್ನು ನಿವಾರಿಸುವ ಉದ್ದೇಶದಿಂದ ಭೂದಾನ ನಿಧಿ ಹಾಗೂ ಸ್ವರ್ಣ ಭಂಡಾರ ನಿಧಿಗಳನ್ನು ಆರಂಭಿಸಲಾಗಿದೆ. ಕೊರಗಜ್ಜನ ಕಾರಣಿಕ ಶಕ್ತಿಯಿಂದಾಗಿ ಈ ಎಲ್ಲಾ ವ್ಯವಸ್ಥೆಗಳು ನಿಧಾನವಾಗಿ ನಿವಾರಣೆಯಾಗುತ್ತಿದ್ದು, ಕೈಗೊಂಡಿರುವ ಕಾರ್ಯಗಳು ಸುಸೂತ್ರವಾಗಿ ಮತ್ತು ಯಶಸ್ವಿಯಾಗಿ ನೆರವೇರುತ್ತಿವೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ, ದೈವಾನುಗ್ರಹ ಪಡೆದುಕೊಳ್ಳುತ್ತಿದ್ದಾರೆ ಎಂದರು.

ಈ ಸಂದರ್ಭ ಬೆಂಗಳೂರಿನ ಕ್ಷತ್ರಿಯ ಮಹಿಳಾ ಸಂಘದ ಅಧ್ಯಕ್ಷೆ ಮಹಾಲಕ್ಷ್ಮೀ ಮೇಘರಾಜ್ , ತಮಿಳುನಾಡು ಪಿಎಂಕೆ ಪಕ್ಷದ ಜಿಲ್ಲಾಧ್ಯಕ್ಷರಾದ ಬಿ.ಮಂಜುನಾಥ್ , ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಬಿಜೆಪಿ ಮಂಗಳೂರು ಮಂಡಲ ಅಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲ್ ಹಾಗೂ ಕಲ್ಲಾಪು ಬುರ್ದುಗೋಳಿಯ ಗುಳಿಗ ಕೊರಗಜ್ಜ ದೈವಗಳ ಉದ್ಭವಶಿಲೆಯ ಪ್ರಧಾನ ಆದಿಸ್ಥಳ ಸೇವಾ ಟ್ರಸ್ಟ್ ನ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಲ್ಲಾಪು ಬುರ್ದುಗೋಳಿ ಗುಳಿಗ ಕೊರಗಜ್ಜ ದೈವಗಳ ಉದ್ಭವಶಿಲೆಯ ಪ್ರಧಾನ ಆದಿಸ್ಥಳದ ಕುರಿತಾದ ‘ಸಿಂಗಾರ ಸುಗಿಪು’ ತುಳು ಭಕ್ತಿಗೀತೆ ವಿಡಿಯೋ ಹಾಡುಗಳ ಬಿಡುಗಡೆಯನ್ನು ಸ್ವಾಮಿಗಳು ನಡೆಸಿಕೊಟ್ಟರು.

# ಪರೀಕ್ಷೆ ಭಯಪಡದೇ ಎದುರಿಸಿರಿ: ಇಸ್ಲಾಹಿ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷ ಅಬ್ದುಲ್ ರಝಾಕ್




**ಉಳ್ಳಾಲ:** ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಪರೀಕ್ಷೆಯ ಬಗ್ಗೆ ಭಯಪಡದೆ ಎದುರಿಸಬೇಕು ಎನ್ನುವ ನೆಲೆಯಲ್ಲಿ ಕಾರ್ಯಾಗಾರ ನಡೆಯುತ್ತಿದ್ದು ಪೂರ್ಣ ಪ್ರಮಾಣದ ಪ್ರಯೋಜನ ವಿದ್ಯಾರ್ಥಿಗಳು ಪಡೆಯಬೇಕು ಎಂದು ಇಸ್ಲಾಹಿ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷ ಅಬ್ದುಲ್ ರಝಾಕ್ ಜಿ. ಅಭಿಪ್ರಾಯಪಟ್ಟರು.

ಮುಸ್ಲಿಂ ಎಜ್ಯುಕೇಶನಲ್ ಇನ್ಸ್ಟಿಟ್ಯೂಷನ್ ಫೆಡರೇಶನ್ ವತಿಯಿಂದ ಉಳ್ಳಾಲ ತಾಲೂಕಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಎರಡು ದಿನಗಳ ಗಣಿತ ಮತ್ತು ವಿಜ್ಞಾನ ವಿಷಯದಲ್ಲಿ ನಡೆದ ‘ಪಾಸಿಂಗ್ ಪ್ಯಾಕೇಜ್’ ಕಾರ್ಯಾಗಾರ ಉಳ್ಳಾಲ ಇಸ್ಲಾಹಿ ಶಾಲೆಯಲ್ಲಿ ಸೋಮವಾರ ಉದ್ಘಾಟಿಸಿ ಮಾತನಾಡಿದರು. ಮೀಫ್ ಕೇಂದ್ರ ಸಮಿತಿ ಅಧ್ಯಕ್ಷ ಮೂಸಬ್ಬ ಪಿ. ಮಾತನಾಡಿ, ಹಿಂದೆ ದ.ಕ.ಜಿಲ್ಲೆಯ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳನ್ನು ಒಂದೇ ಕಡೆ ಸೇರಿಸಿ ಕಾರ್ಯಾಗಾರ ನಡೆಸಲಾಗುತ್ತಿತ್ತು. ಇದರಿಂದ ಹೆಚ್ಚಿನ ಪ್ರಯೋಜನ ಸಿಗದು ಎನ್ನುವ ಶಿಕ್ಷಣಾಧಿಕಾರಿಯ ಅಭಿಪ್ರಾಯದ ಹಿನ್ನೆಲೆಯಲ್ಲಿ ಕಳೆದ ವರ್ಷದಿಂದ ದಕ್ಷಿಣ ಕನ್ನಡ ಜಿಲ್ಲಾದ್ಯಂತ 14 ಕಾರ್ಯಾಗಾರಗಳು ನಡೆಸಲಾಗಿತ್ತು. ಈ ವರ್ಷ ಈಗಾಗಲೇ 14 ಕಾರ್ಯಾಗಾರಗಳು ನಡೆದಿದ್ದು ಇನ್ನೂ ಆರರಿಂದ ಏಳು ಕಾರ್ಯಾಗಾರಗಳು ನಡೆಯಲಿದೆ ಎಂದು ತಿಳಿಸಿದರು. ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಯಾಕೂಬ್ ಕೊಯ್ಯೂರು ಮತ್ತು ಮಹಮ್ಮದ್

- ಹಿಂದೆ ದ.ಕ.ಜಿಲ್ಲೆಯ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳನ್ನು ಒಂದೇ ಕಡೆ ಸೇರಿಸಿ ಕಾರ್ಯಾಗಾರ ನಡೆಸಲಾಗುತ್ತಿತ್ತು.
- ಕಳೆದ ವರ್ಷದಿಂದ ದಕ್ಷಿಣ ಕನ್ನಡ ಜಿಲ್ಲಾದ್ಯಂತ 14 ಕಾರ್ಯಾಗಾರಗಳು ನಡೆಸಲಾಗಿತ್ತು.
- ಈ ವರ್ಷ ಈಗಾಗಲೇ 14 ಕಾರ್ಯಾಗಾರಗಳು ನಡೆದಿದ್ದು ಇನ್ನೂ ಆರರಿಂದ ಏಳು ಕಾರ್ಯಾಗಾರಗಳು ನಡೆಯಲಿದೆ

ಶರೀಫ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭ ಮೀಫ್ ಉಪಾಧ್ಯಕ್ಷ ಫರ್ವೇಝ್ ಅಲಿ, ಕಾರ್ಯದರ್ಶಿ ಅನ್ವರ್ ಹುಸೈನ್ ಗೂಡಿನಬಳಿ, ಮುಖ್ಯಾಧಿಕಾರಿ ಅಶ್ರಫ್ ಬಾವ, ಇಸ್ಲಾಹಿ ಎಜ್ಯುಕೇಶನ್ ಟ್ರಸ್ಟ್ ಕಾರ್ಯದರ್ಶಿ ಅಹ್ಮದ್ ಕುಂಞಟಿಜಜ–ಜುಟಿಜಜ ಮಾಸ್ಟರ್, ಉಳ್ಳಾಲ ಕ್ಲಸ್ಟರ್ ಸಿಆರ್ ಪಿ ಮೋಹನ್ ಕುಮಾರ್, ಆಡಳಿತಗಾರ್ತಿ ಆಯಿಶಾ ಸಬೀನಾ ಕೈಸೀರನ್, ಪ್ರಾಂಶುಪಾಲೆ ಸುಮಂಗಲಾ ಶೆಟ್ಟಿ, ವ್ಯವಸ್ಥಾಪಕಿ ಅನಿಲ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು. ಶಾಲಾ ಶಿಕ್ಷಕ ಮೂನಿಸ್ ಸ್ವಾಗತಿಸಿದರು. ಅಬ್ದುಲ್ ಅಝೀಝ್ ಅಂಬರ್ವಾಲಿ ವಂದಿಸಿದರು. ಶಿಕ್ಷಕಿ ನಿತಾಶ ಕಾರ್ಯಕ್ರಮ ನಿರೂಪಿಸಿದರು.

# ಮಂಗಳೂರು ವಿವಿ: ರಾಜಶ್ರೀ ಟಿ. ರೈ ಪೆರ್ಲ ಅವರ ಕಥಾಸಂಕಲನ ಬಿಡುಗಡೆ



**ಕೊಣಾಜೆ:** ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷದಿಂದ ಕಥೆಗಳು ಹುಟ್ಟುತ್ತವೆ. ಸಾಮಾಜಿಕ ಅಸಮಾನತೆ, ವೈಷಮ್ಯ, ಕೌಟುಂಬಿಕ ಕಲಹ, ಧಾರ್ಮಿಕ ಡಾಂಭಿಕತೆ ಮೊದಲಾದವುಗಳನ್ನು ವಸ್ತುವಾಗುಳ್ಳ ಕತೆಗಳನ್ನು ಸುಂದರವಾಗಿ ಹೆಣೆದಿರುವ ಕಥೆಗಳು ರಾಜಶ್ರೀ ಟಿ ರೈ ಪೆರ್ಲ ಅವರ 'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ' ಸಂಕಲನದಲ್ಲಿದೆ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ.ನಾಗಪ್ಪ ಗೌಡ ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾಲಯದ ಎಸ್ ವಿ ಪಿ ಕನ್ನಡ ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ ರಾಜಶ್ರೀ ಟಿ ರೈ ಪೆರ್ಲ ಅವರ ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ" ಕಥಾ ಸಂಕಲನವನ್ನು ಎಸ್ ವಿಪಿ ಅಧ್ಯಯನ ಸಂಸ್ಥೆಯ ಪ್ರೊ.ವಿವೇಕ ರೈ ವಿಚಾರ ವೇದಿಕೆಯಲ್ಲಿ ಬಿಡುಗಡೆಗೊಳಿಸಿ ಮಾತನಾಡಿದರು. ಪ್ರಾಧ್ಯಾಪಕರಾದ ಪ್ರೊ.ಸೋಮಣ್ಣ ಹೊಂಗಳ್ಳಿ ಅವರು ಕೃತಿಯ ಕುರಿತು ಮಾತನಾಡಿ, ಕನ್ನಡ ಕಥಾಸಾಹಿತ್ಯದ ಇತಿಹಾಸ ಬಹಳ ಶ್ರೀಮಂತವಾದುದು. ಲೇಖಕಿ ರಾಜಶ್ರೀ ರೈ ಅವರು ಸಮಾಜದೊಳಗೇ ಇದ್ದು ಸಮಾಜದ ಅನೇಕ ಸೂಕ್ಷ್ಮತೆಗಳನ್ನು ಸಮಾಜಕ್ಕೆ ಪರಿಚಯಿಸುವ ಕೆಲಸ ಈ ಕೃತಿಯ ಮೂಲಕ ಮಾಡಿದ್ದಾರೆ ಎಂದರು.

ಸಹಪ್ರಾಧ್ಯಾಪಕರಾದ ಡಾ.ಧನಂಜಯ ಕುಂಬ್ಳೆ ಮಾತನಾಡಿ, ಜಗತ್ತನ್ನು, ಪರಿಸರವನ್ನು ಸೂಕ್ಷ್ಮವಾಗಿ ನೋಡಬಲ್ಲ ವ್ಯಕ್ತಿಗಳು ಮಾತ್ರ ಸೃಜನಶೀಲರಾಗಿ ಬೆಳೆಯಲು ಸಾಧ್ಯ. ರಾಜಶ್ರೀಯವರಲ್ಲಿ ಸೃಜನಶೀಲ ಬರಹ ಮತ್ತು ಸಂಶೋಧನ ಸಾಮರ್ಥ್ಯ ಮೇಳೈಸಿದೆ ಎಂದರು. ಉಪನ್ಯಾಸಕ ಡಾ.ಯಶುಕುಮಾರ್ , ವಿದ್ಯಾರ್ಥಿ ನಾಯಕ ಅಭಿಷೇಕ್ ವಾಲ್ಮೀಕಿ ಮತ್ತು ಸ್ನೇಹ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಪವಿತ್ರಾ ಸ್ವಾಗತಿಸಿದರು. ಸ್ನೇಹ ಕಾರ್ಯಕ್ರಮ ನಿರೂಪಿಸಿದರು.

ದೈನಂದಿನ ಅನುಭವಗಳಲ್ಲಿ ಮನಸ್ಸನ್ನು ಕಾಡುವ ಭಾವಗಳನ್ನು, ಪ್ರಶ್ನಿಸಲೇಬೇಕಾದ ವಿಷಯಗಳನ್ನು ನನ್ನ ಕತೆಗಳಲ್ಲಿ ಬಿಂಬಿಸುತ್ತೇನೆ.
ಲೇಖಕಿ ರಾಜಶ್ರೀ ಟಿ ರೈ ಪೆರ್ಲ

# ಅಡ್ಕರೆಪಡ್ಪು ಬಾಕಿಮಾರು ಬಾವಿಯಲ್ಲಿ ಕೊಳೆತ ಸ್ಥಿತಿಯಲ್ಲಿ ಶವ ಪತ್ತೆ

**ಕೊಣಾಜೆ:** ಇಲ್ಲಿನ ಠಾಣಾ ವ್ಯಾಪ್ತಿಯ ಅಡ್ಕರೆಪಡ್ಪು ಬಾಕಿಮಾರು ಪ್ರದೇಶದ 30 ಎಕರೆ ಜಾಗದಲ್ಲಿದ್ದ ಬಾವಿಯಲ್ಲಿ ಅಪರಿಚಿತ ಯುವಕನ ಶವ ಸಂಪೂರ್ಣ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಕೊಳೆತ ಸ್ಥಿತಿಯಲ್ಲಿದ್ದ ಮೃತದೇಹವನ್ನು ಮೇಲಕ್ಕೆತ್ತುವಲ್ಲಿ ಯುವ ಕಾಂಗ್ರೆಸ್ ಮುಖಂಡ ಸಿ.ಎಂ ರವೂಫ್ ಸೇರಿದಂತೆ ಬೆಳ್ಮ ಗ್ರಾ.ಪಂ ಸದಸ್ಯ ಸತ್ತಾರ್ ಸಿ.ಎಂ, ಕೊಣಾಜೆ ಗ್ರಾ.ಪಂ ಸದಸ್ಯ ಇಕ್ಬಾಲ್, ಫಾರುಕ್ ಬೆಳ್ಮ, ಇರ್ಫಾನ್ ಎಂಬವರು ಕೊಣಾಜೆ ಪೊಲೀಸರಿಗೆ ಸಹಕರಿಸಿ



ಮಾನವೀಯತೆ ಮೆರೆದಿದ್ದಾರೆ. 30 ರ ಹರೆಯದ ಯುವಕನ ಮೃತದೇಹ ಇದಾಗಿದ್ದು, ಟೀ ಶರ್ಟ್ ಹಾಗೂ ಜೀನ್ಸ್ ಪ್ಯಾಂಟ್ ಧರಿಸಿದ್ದಾನೆ. ಮೃತದೇಹ ಸಂಪೂರ್ಣ ಕೊಳೆತ ಸ್ಥಿತಿಯಲ್ಲಿರುವುದರಿಂದ ಬಾವಿಗೆ ಬಿದ್ದು ಅಂದಾಜು 15 ದಿನಗಳ ಮೇಲೆ ಆಗಿರುವ ಶಂಕೆಯನ್ನು ಪೊಲೀಸರು ವ್ಯಕ್ತಪಡಿಸಿದ್ದಾರೆ. 30 ಎಕರೆ ಪ್ರದೇಶ ಖಾಸಗಿ ಒಡೆತನದಾಗಿದ್ದು, ಕೃಷಿ ಮಾತ್ರವಿದೆ. ಜ.5 ರಂದು ಸಿಯ್ಯಾಳ ಕೀಳಲು ಬಂದಿದ್ದ ವ್ಯಕ್ತಿ ಬಾವಿಯಲ್ಲಿ ಮೃತದೇಹ ತೇಲುವುದನ್ನು ಗಮನಿಸಿ ಹೊರಜಗತ್ತಿಗೆ ಮಾಹಿತಿ ನೀಡಿದ್ದಾರೆ. ಮೃತದೇಹ ಸಂಪೂರ್ಣ ಕೊಳೆತ ಸ್ಥಿತಿಯಲ್ಲಿರುವುದರಿಂದಾಗಿ ಪತ್ತೆ ಅಸಾಧ್ಯವಾಗಿದೆ. ಸ್ಥಳೀಯವಾಗಿ ನಾಪತ್ತೆ ಪ್ರಕರಣಗಳು ಇಲ್ಲದೇ ಇದ್ದು, ಕೊಣಾಜೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕಣಚೂರು ಸಂಸ್ಥೆಯಲ್ಲಿ ಅಗೋನ್–2026 ವಾರ್ಷಿಕ ಕ್ರೀಡೋತ್ಸವ




**ಕಣಚೂರು:** ಕಣಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯ ವತಿಯಿಂದ ವಾರ್ಷಿಕ ಕ್ರೀಡೋತ್ಸವ ‘ಅಗೋನ್–2026’ಕಣಚೂರು ಮೈದಾನದಲ್ಲಿ ಯಶಸ್ವಿಯಾಗಿ ನಡೆದಿದೆ. ಕ್ರೀಡೋತ್ಸವಕ್ಕೆ ಬೆಳಗ್ಗೆ ಚಾಲನೆ ನೀಡಲಾಯಿತು. ಅಂತರರಾಷ್ಟ್ರೀಯ ಚೆಸ್ ಗ್ರ್ಯಾಂಡ್ ಮಾಸ್ಟರ್ ಶ್ರೀಮತಿ ಇಷಾ ಶರ್ಮಾ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಕ್ರೀಡಾಕ್ಷೇತ್ರವು ವಿದ್ಯಾರ್ಥಿಗಳಲ್ಲಿ ಶಿಸ್ತು, ಏಕಾಗ್ರತೆ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದರು. ಇದೇ ವೇಳೆ ಡಾ.ಹಾಜಿ ಯು.ಕೆ.ಮೋನು ಹಾಗೂ ಅಬ್ದುಲ್ ರಹಿಮಾನ್ ಗೌರವ ಅತಿಥಿಗಳಾಗಿ ಭಾಗಿಯಾಗಿ, ವಿದ್ಯಾಭ್ಯಾಸದ ಜೊತೆಗೆ ದೈಹಿಕ ಆರೋಗ್ಯಕ್ಕೂ ಸಮಾನ ಮಹತ್ವ ನೀಡಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ.ಶಹನವಾಜ್ ಮಣಿಪಾಡಿ ಮಾತನಾಡಿ, ಕ್ರೀಡೆಯು ಭಾವನೆ, ಸಹನಶೀಲತೆ ಮತ್ತು ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ನೆರವಾಗುತ್ತವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು.

ದಿನವಿಡೀ ನಡೆದ ವಿವಿಧ ಅಥ್ಲೆಟಿಕ್ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಕ್ರೀಡಾತ್ಮಕ ಮನೋಭಾವದೊಂದಿಗೆ ಸಕ್ರಿಯವಾಗಿ ಭಾಗವಹಿಸಿದ್ದು, ವಿಜೇತರಿಗೆ ಬಹುಮಾನ ಹಾಗೂ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

# ಮತದಾರರ ಪಟ್ಟಿಯಿಂದ ಯಾರೂ ಹೊರಗುಳಿಯದಂತೆ ಎಸ್‌ವೈಎಸ್ ದ.ಕ.ಜಿಲ್ಲಾ ಸಮಿತಿ ಮನವಿ



**ಮುಡಿಪು:** ಕಡ್ಡಾಯ ಮತದಾರರ ಪಟ್ಟಿ ಪರಿಷ್ಕರಣೆಮ್ಯಾಪಿಂಗ್ ಕಾರ್ಯಭರದಿಂದ ನಡೆಯುತ್ತಿದೆ. ರಾಜ್ಯದ ಯಾವುದೇ ಪ್ರಜೆಗಳು ಇದರಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕಾಗಿದೆ ಎಂದು ಎಸ್‌ವೈಎಸ್ ದ.ಕ.ಜಿಲ್ಲಾ ಸಮಿತಿ ಮನವಿ ಮಾಡಿದೆ.ಎಸ್‌ವೈಎಸ್ ದ.ಕ. ಜಿಲ್ಲಾಧ್ಯಕ್ಷ ಮಹ್ಬೂಬ್ ಸಖಾಫಿ ಕಿನ್ಯ ಅಧ್ಯಕ್ಷತೆಯಲ್ಲಿ ಮುಡಿಪುವಿನ ಗೌಸಿಯ ಮದ್ರಸ ಸಭಾಂಗಣ ದಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ನಿರ್ಣಯ ಕೈಗೊಂಡು ಎಲ್ಲಾ ಘಟಕಗಳಿಗೆ ಮಾಹಿತಿ ನೀಡಲಾಯಿತು. ಈ ಸಂಬಂಧ ಎಸ್‌ವೈಎಸ್ ಯುನಿಟ್ ಸಮಿತಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಮನೆಗಳಿಗೆ ತೆರಳಿ ಜಾಗೃತಿ ಮೂಡಿಸುವಂತೆ ಮತ್ತು ಈ ಬಗ್ಗೆ ಹೆಲ್ಪ್‌ಡೆಸ್ಕ್ ತೆರೆಯುವಂತೆ ಸೂಚಿಸಲಾಯಿತು. ಸಭೆಯಲ್ಲಿ ಜಿಲ್ಲಾ ಕೋಶಾಧಿಕಾರಿ ರಝಾಕ್ ಭಾರತ್, ಉಪಾಧ್ಯಕ್ಷರಾದ ಬದ್ರುದ್ದೀನ್ ಅಝ್‌ಅರಿ,ಯಾಕೂಬ್ ಸಅದಿ ನಾವೂರು, ತೌಸೀಫ್ ಸಅದಿ ಹರೇಕಳ, ನವಾಝ್ ಸಖಾಫಿ ಅಡ್ಯಾರ್, ನಝೀರ್ ಹಾಜಿ ಲುಲು, ಕಾರ್ಯದರ್ಶಿಗಳಾದ ಮಹ್ಮೂದ್ ಸಅದಿ ಕುಕ್ಕಾಜೆ, ಮುತ್ತಲಿಬ್ ವೇಣೂರು, ಫಾರೂಕ್ ಶೇಡಿಗುರಿ, ಹಸನ್ ಪಾಂಡೇಶ್ವರ, ಇಸಾಕ್ ಉಳ್ಳಾಲ ಉಪಸ್ಥಿತರಿದ್ದರು. ಎಸ್‌ವೈಎಸ್ ದ.ಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಸ್ಮಾಯಿಲ್ ಮಾಸ್ಟರ್ ಮರಿಕ್ಕಳ ಸ್ವಾಗತಿಸಿದರು.

# ಮಹಿಳೆಯ ಮೇಲೆ ಹಲ್ಲೆ, ಅವಮಾನ ಪ್ರಕರಣ ಖಂಡನೆ: ಆರೋಪಿಗೆ ಕಠಿಣ ಶಿಕ್ಷೆಗೆ ಮಹಿಳಾ ಕಾಂಗ್ರೆಸ್ ಆಗ್ರಹ

**ಉಳ್ಳಾಲ:** ಕೊಣಾಜೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿಇತ್ತೀಚೆಗೆ ನಡೆದ ಮಹಿಳೆಯ ಮೇಲಿನ ಹಲ್ಲೆ ಹಾಗೂ ಅವಮಾನಕಾರಿ ವರ್ತನೆ ಪ್ರಕರಣವನ್ನು ಉಳ್ಳಾಲ ಬ್ಲಾಕ್ ಮಹಿಳಾ ಕಾಂಗ್ರೆಸ್ ಸಮಿತಿ ತೀವ್ರವಾಗಿ ಖಂಡಿಸಿದೆ. ಪ್ರಕರಣದ ಸಂಬಂಧಿಸಿದಂತೆ ಜ. 06ರ ಮಂಗಳವಾರ ದಂದು ರಾತ್ರಿ ಸುಮಾರು 8 ಗಂಟೆಗೆ ಸುನೀತಾ ಲೋಬೋ ಅವರು ತಮ್ಮ ಪತಿ ವಿಲ್ಫ್ರೆನ್ ಲೋಬೋ ಹಾಗೂ ಮಕ್ಕಳಾದ ವಿಶಾಲ್ ಲೋಬೋ ಮತ್ತು ವಿನೂಶ್ ಲೋಬೋರೊಂದಿಗೆ ಪಜೀರು ಗ್ರಾಮದ ಲೇಡಿ ಆಫ್ ಮರ್ಸಿ ಹಾಲ್‌ನಲ್ಲಿ ನಡೆದ ಮದುವೆ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ರೋಜ್ ಕಾರ್ಯಕ್ರಮಕ್ಕೆ ತೆರಳಿದ್ದರು. ರೋಜ್ ಕಾರ್ಯಕ್ರಮ ಮುಗಿಸಿ ಊಟ ಮಾಡಿದ ಬಳಿಕ, ರಾತ್ರಿ ಸುಮಾರು 10.45ರ ವೇಳೆಗೆ ಹಾಲ್ ಒಳಗೆ ನಿಂತಿದ್ದಾಗ ವಲೆರಿನ್ ಡಿಸೋಜ ಎಂಬ ಆರೋಪಿಯು ಸುನೀತಾ ಲೋಬೋ



ಅವರನ್ನು ದುರುದ್ದೇಶದಿಂದ ನೋಡಿ ಮೈಗೆ ಕೈತಾಗಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಈ ಬಗ್ಗೆ ಪ್ರಶ್ನಿಸಿದಾಗ, ನಾನು ಏನು ಬೇಕಾದರೂ ಮಾಡುತ್ತೇನೆ ಎಂದು ಬೆದರಿಕೆ ಹಾಕಿ ಆರೋಪಿತನು ಅಲ್ಲಿಂದ ತೆರಳಿದ್ದು, ಸ್ವಲ್ಪ ಸಮಯದ ನಂತರ ಎರಡು ಬಿಯರ್ ಬಾಟಲಿಗಳನ್ನು ಹಿಡಿದುಕೊಂಡು ಬಂದು ಸುನೀತಾ ಲೋಬೋ ಅವರಿಗೆ ಹಲ್ಲೆ ನಡೆಸಿದ್ದಾನೆ. ಬಿಯರ್ ಬಾಟಲಿಯಿಂದ ಹೊಡೆದ ಪರಿಣಾಮವಾಗಿ ಅವರ ಬಲ ಕಣ್ಣಿನ ಕೆಳಭಾಗದಲ್ಲಿ ಗಂಭೀರವಾದ ಊತ ಉಂಟಾಗಿದೆ ಎಂದು ಆರೋಪಿಸಿದ್ದಾರೆ. ಈ ಸಂದರ್ಭ ಅಲ್ಲಿಗೆ ಬಂದ ಸುನೀತಾ ಲೋಬೋ ಅವರ ಪತಿ ವಿಲ್ಫ್ರೆನ್ ಲೋಬೋ ಹಾಗೂ ಪುತ್ರ ವಿಶಾಲ್ ಲೋಬೋರ ಮೇಲೆ ಕೂಡ ಆರೋಪಿತನು ತೀವ್ರ ಹಲ್ಲೆ ನಡೆಸಿದ್ದು, ವಿಶಾಲ್ ಲೋಬೋ ಅವರ ಎಡಗೈ ಕಚ್ಚಿರುವುದಾಗಿ ಆರೋಪಿಸಿದ್ದಾರೆ .ಜನರು ಸೇರತೊಡಗಿದಾಗ, ಆರೋಪಿತನು ಅವ್ಯಾಚ್ಯ ಶಬ್ದಗಳಿಂದ ಬೈದು, ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಒಡ್ಡಿ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿ ಆರೋಪಿತ ವಲೆರಿನ್ ಡಿಸೋಜ ವಿರುದ್ಧ ತಕ್ಷಣ ಕೇಸ್ ದಾಖಲಿಸಿ, ಕಾನೂನಿನ ಪ್ರಕಾರ ಕಠಿಣ ಶಿಕ್ಷೆ ವಿಧಿಸಬೇಕು ಹಾಗೂ ಸುನೀತಾ ಲೋಬೋ ಅವರಿಗೆ ನ್ಯಾಯ ಒದಗಿಸಬೇಕು ಎಂದು ಉಳ್ಳಾಲ ಬ್ಲಾಕ್ ಮಹಿಳಾ ಕಾಂಗ್ರೆಸ್ ಸಮಿತಿಯ ವತಿಯಿಂದ ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಲಾಗಿದೆ.

ಸಾರ್ವಜನಿಕ ಸ್ಥಳದಲ್ಲೇ ಮಹಿಳೆಯೊಬ್ಬರ ಮೇಲೆ ನಡೆದ ಈ ದೌರ್ಜನ್ಯ ಮಹಿಳೆಯರ ಸುರಕ್ಷತೆ ಕುರಿತು ಗಂಭೀರ ಪ್ರಶ್ನೆಗಳನ್ನು ಎತ್ತಿದೆ. ಈ ಹಿನ್ನೆಲೆಯಲ್ಲಿ ಉಳ್ಳಾಲ ಬ್ಲಾಕ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಚಂದ್ರಿಕಾ ರೈ ಮತ್ತು ದ.ಕ ಜಿಲ್ಲಾ ಮಹಿಳಾ ಕಾಂಗ್ರೆಸ್ ನಗರ ಉಸ್ತುವಾರಿ ಸುರೇಖಾ ಚಂದ್ರಹಾಸ್ ಅವರ ನೇತೃತ್ವದ ಸಮಿತಿ ಪೊಲೀಸ್ ಇಲಾಖೆಯನ್ನು ಸಂಪರ್ಕಿಸಿ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಆರೋಪಿಗಳ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದೆ.

ಮಹಿಳೆಯರ ಮೇಲೆ ನಡೆಯುತ್ತಿರುವ ಇಂತಹ ದೌರ್ಜನ್ಯಗಳು ಸಮಾಜಕ್ಕೆ ಅಪಾಯಕಾರಿಯಾಗಿದ್ದು, ತಪ್ಪಿತಸ್ಥರಿಗೆ ಯಾವುದೇ ಕಾರಣಕ್ಕೂ ರಕ್ಷಣೆ ನೀಡಬಾರದು. ಮಹಿಳೆಯರು ಭಯವಿಲ್ಲದೆ ಬದುಕುವ ಸುರಕ್ಷಿತ ವಾತಾವರಣ ನಿರ್ಮಿಸುವ ಹೊಣೆ ಸರ್ಕಾರ ಹಾಗೂ ಪೊಲೀಸ್ ಇಲಾಖೆಯ ಮೇಲಿದೆ ಎಂದು ಮಹಿಳಾ ಕಾಂಗ್ರೆಸ್ ಮುಖಂಡರು ಆಗ್ರಹಿಸಿದ್ದಾರೆ.

ಪ್ರಕರಣದ ಸಂಪೂರ್ಣ ತನಿಖೆ ನಡೆಸಿ, ತಪ್ಪಿತಸ್ಥರನ್ನು ಶೀಘ್ರ ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಪೊಲೀಸ್ ಇಲಾಖೆಗೆ ಮಹಿಳಾ ಕಾಂಗ್ರೆಸ್ ಸಮಿತಿ ಮನವಿ ಮಾಡಿದೆ.

## ಮಂಗಳೂರು ವಿವಿ: ವಾಣಿಜ್ಯ ವಿಭಾಗದಲ್ಲಿ ಇಗ್ನೈಟ್ –2025

**ಕೊಣಾಜೆ:** ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಗಂಗೋತ್ರಿಯ ವಾಣಿಜ್ಯ ವಿಭಾಗ ಮತ್ತು ಯೂನಿಯನ್ ಬ್ಯಾಂಕ್ ಚೇರ್ ವತಿಯಿಂದ ಮಾನವ ಸಂಪನ್ಮೂಲ ವಿಭಾಗವು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ಇಗ್ನೈಟ್ – 2025 ಎಚ್. ಆರ್. ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಮಂಗಳೂರು ಫೈಮಸಿ ಇಂಡಸ್ಟ್ರಿ ಪ್ರೈವೇಟ್ ಲಿಮಿಟೆಡ್ ನ ಅಧ್ಯಕ್ಷರಾದ ರಾಘವೇಂದ್ರ ರಾವ್ ಸಣ್ಣಯ್ಯ ಉದ್ಘಾಟಿಸಿದರು. ಕಾರ್ಯಕ್ರಮದ ಸಭಾಧ್ಯಕ್ಷತೆಯನ್ನು ವಿಭಾಗದ ಅಧ್ಯಕ್ಷರಾದ ಡಾ. ಪ್ರೀತಿ ಕೀರ್ತಿ ಡಿಸೋಜಾ ವಹಿಸಿದ್ದರು. ವೇದಿಕೆಯಲ್ಲಿ ಪ್ರಾಧ್ಯಾಪಕರಾದ ಪ್ರೊಫೆಸರ್. ಪರಮೇಶ್ವರ, ಪ್ರೊಫೆಸರ್. ವೇದವ ಪಿ, ಉಪನ್ಯಾಸಕರಾದ ಡಾ. ದಿನಕರ ಕೆ–ಂಜೂರು, ಡಾ. ರಮ್ಯ ಕೆ. ಆರ್. ವೈಶಾಲಿ ಕೆ. ಮತ್ತು ಸಿ. ಲಹರಿ ಉಪಸ್ಥಿತರಿದ್ದರು. ಜೀವಿಕ ಮತ್ತು ತಂಡದವರು ಪ್ರಾರ್ಥಿಸಿದರು. ಜೀವಿಕ ಸ್ವಾಗತಿಸಿದರು. ಡಾ. ರಮ್ಯ ಕೆ. ಆರ್ ಕಾರ್ಯಕ್ರಮದ ಕುರಿತು ಮಾತನಾಡಿದರು. ಎಲ್ವಿಟ್ ಡಿಸೋಜಾ ವಂದಿಸಿದರು. ಆಫ್ನ ಕಾರ್ಯಕ್ರಮದ ನಿರೂಪಣೆಗೈದರು. ಉದ್ಘಾಟನೆ ಕಾರ್ಯಕ್ರಮದ ಬಳಿಕ ಎಚ್ ಆರ್ ಇವೆಂಟ್ ನ ವಿವಿಧ ವಿಭಾಗಗಳ ಸ್ಪರ್ಧೆ ನಡೆಯಿತು. ಮುಖ್ಯವಾಗಿ ಕ್ವಿಜ್, ಮಲ್ಟಿ ಟಾಸ್ಕಿಂಗ್, ಜಾಬ್ ಡಿಸ್ಕರಿಪ್ಶನ್ ಮತ್ತು ಕೇಸ್ ಸ್ಟಡಿ ಅನಾಲಿಸಿಸ್ ನಡೆಯಿತು. ಇವೆಂಟ್ ಸ್ಪರ್ಧೆಯಲ್ಲಿ ರಾಜೇಶ್ ಬಿ.ಸಿ. ಮತ್ತು ಅನುಷ ಬಿ. ಎನ್. ಪ್ರಥಮ ಸ್ಥಾನ ಗಳಿಸಿದರೆ ಸಜೀಲ ಕೆ. ಮತ್ತು ಪ್ರತೀಕ್ಷ ದ್ವಿತೀಯ ಸ್ಥಾನವನ್ನು ಗಳಿಸಿದರು.



ನರಿಂಗಾನ ಕಂಬಳದಲ್ಲಿ ಕಂಡುಬಂದ ದೃಶ್ಯ.

## ಪಿಲಾರು ನಿವಾಸಿ ಅಯ್ಯಪ್ಪ ವೃತಧಾರಿ ಕೇರಳದ ಎರಿಮಲೆಯಲ್ಲಿ ಹೃದಯಾಘಾತದಿಂದ ನಿಧನ

- ಅರ್ಕುಳ, ತುಪ್ಪೇಕಲ್ಲಿನಿಂದ ಶಬರಿಮಲೆ ಯಾತ್ರೆ ಕೈಗೊಂಡಿದ್ದರು.
- ಎರಿಮಲೆಯಿಂದ ಕಾಡಿನ ದಾರಿಯಾಗಿ ಪಂಪೆಗೆ ಪ್ರಯಾಣ ಬೆಳೆಸಿದ್ದ ವೇಳೆ ಕುಸಿದು ಬಿದ್ದು ಮೃತಪಟ್ಟಿದ್ದಾರೆ

**ಉಳ್ಳಾಲ:** ಶಬರಿಮಲೆ ಯಾತ್ರೆ ಕೈಗೊಂಡಿದ್ದ ಉಳ್ಳಾಲ ತಾಲೂಕಿನ ಅಯ್ಯಪ್ಪ ಮಾಲಾ ವೃತಧಾರಿಯೊಬ್ಬರು ಕೇರಳದ ಎರಿಮಲೆಯಲ್ಲಿ ಹೃದಯಾಘಾತಕ್ಕೆ ಬಲಿಯಾದ ಘಟನೆ ಬೆಳಿಗ್ಗೆ ನಡೆದಿದೆ.

ಸೋಮೇಶ್ವರ ಪುರಸಭಾ ವ್ಯಾಪ್ತಿಯ ಪಿಲಾರು ದೇಲಂತಬೆಟ್ಟು ನಿವಾಸಿ ಉದ್ಯಮಿ ಚಂದ್ರಹಾಸ್ ಶೆಟ್ಟಿ (55) ಮೃತಪಟ್ಟವರು. ಚಂದ್ರಹಾಸ್ ಅವರು ಇತರ ಅಯ್ಯಪ್ಪ ಮಾಲಾ ವೃತಧಾರಿಗಳ ಜೊತೆ ಶನಿವಾರದಂದು ನಗರದ ಅರ್ಕುಳ, ತುಪ್ಪೇಕಲ್ಲಿನಿಂದ ಶಬರಿಮಲೆ ಯಾತ್ರೆ ಕೈಗೊಂಡಿದ್ದರು. ಮಲೆಯಿಂದ ಕಾಡಿನ ದಾರಿಯಾಗಿ ಪಂಪೆಗೆ ಪ್ರಯಾಣ ಬೆಳೆಸಿದ್ದ ವೇಳೆ ಕುಸಿದು ಬಿದ್ದು ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ.



ಮರಣೋತ್ತರ ಪರೀಕ್ಷೆಯನ್ನು ತ್ವರಿತವಾಗಿ ನಡೆಸಿ ಉಳ್ಳಾಲಕ್ಕೆ ಜಿಲ್ಲಾ ಅಯ್ಯಪ್ಪ ಭಕ್ತರ ತಂಡದ ಜಿಲ್ಲಾಧ್ಯಕ್ಷರು ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದು, ಮರುದಿನ ಬೆಳಿಗ್ಗೆ ಪಾರ್ಥಿವ ಶರೀರವು ಉಳ್ಳಾಲ ತಲುಪುವ ವ್ಯವಸ್ಥೆಯನ್ನು ಮಾಡಿದರು.

ಮೃತ ಚಂದ್ರಹಾಸ್ ಅವರು ಮೂಲತ: ಬಾಕ್ರಬೈಲ್ ನಿವಾಸಿಯಾಗಿದ್ದು, ಮಿನರಲ್ ವಾಟರ್ ಪೂರೈಕೆಯ ಉದ್ಯಮ ನಡೆಸುತ್ತಿದ್ದರು. ಕಳೆದ ಹತ್ತು ವರುಷದ ಹಿಂದೆ ಪಿಲಾರಿನಲ್ಲೇ ಮನೆ ನಿರ್ಮಿಸಿ ವಾಸವಾಗಿದ್ದರು. ಮೃತರು ಪತ್ನಿ, ಪುತ್ರಿ, ಪುತ್ರನನ್ನು ಅಗಲಿದ್ದಾರೆ.

## ಇಲ್ಲಿ ಸಿಗತ್ತೆ ಫ್ರೆಶ್ ಮೀನು..



**ತಲಪಾಡಿ:** ಮೀನು ಅಂದರೆ ಯಾರಿಗೆ ತಾನೆ ಇಷ್ಟವಿಲ್ಲ.ಅದರಲ್ಲೂ ಕರಾವಳಿಗರಿಗಂತೂ ದಿನನಿತ್ಯದ ಊಟದಲ್ಲಿ ಮೀನು ಇರಲೇ ಬೇಕು. ಹೆಚ್ಚಾಗಿ ಫ್ರೆಶ್ ಮೀನನ್ನು ಜನರು ಮುಗಿಬಿದ್ದು ಖರೀದಿಸುತ್ತಾರೆ. ಅದರಲ್ಲೂ ತಲಪಾಡಿ ಮೀನು ಮಾರುಕಟ್ಟೆ ಎಲ್ಲ ಬಗೆಯ ವೆರೈಟಿ ಮೀನುಗಳ ಗೂಡು. ಹೌದು, ತಲಪಾಡಿ ಮೀನು ಮಾರುಕಟ್ಟೆಗೆ ಕಾಸರಗೋಡಿನಿಂದ ಉಳ್ಳಾಲದವರೆಗಿನ ಜನರು ಹೋಗಿ ರುಚಿ–ಶುಚಿಯಾದ ಮೀನುಗಳನ್ನು ಖರೀದಿಸುತ್ತಾರೆ. ಸಂಜೆಯಾಗಿತ್ತಿದ್ದಂತೆ ಮಾರುಕಟ್ಟೆಯಲ್ಲಿ ಜನಜಂಗುಳಿ ಜಾಸ್ತಿಯಾಗುತ್ತದೆ. ಇಲ್ಲಿ ಸಿಗುವಂತಹ ಫ್ರೆಶ್ ವೆರೈಟಿ ಮೀನುಗಳು ಇತರ ಕಡೆ ಸಿಗುವುದಿಲ್ಲ.ಇದು ಮಾರುಕಟ್ಟೆಯ ಅಭಿವೃದ್ಧಿಗೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಮಾರುಕಟ್ಟೆಗೆ ಬರುವ ಗ್ರಾಹಕರು ನಿರಾಶರಾಗಿ ವಾಪಾಸ್ ಹೋಗುವುದಿಲ್ಲ ಎಂಬುವುದೇ ಇಲ್ಲಿನ ಮಾರುಕಟ್ಟೆಯ ವಿಶೇಷವಾಗಿದೆ. ಬೂತಾಯಿ, ಬಂಗುಡೆ, ಅಂಜಲ್, ಸಿಗಡಿ, ಏಡಿ, ಸೇರಿದಂತೆ ಸಣ್ಣ ಮೀನಿನಿಂದ ಹಿಡಿದು ದೊಡ್ಡ ಮೀನಿನವರೆಗಿನ ಎಲ್ಲ ವೈವಿಧ್ಯಮಯ ಮೀನುಗಳು ಲಭ್ಯ.

## 'ಕ್ರೀಡಾ ಕೂಟ ಮೂಲಕ ಅಂಬೇಡ್ಕರ್ ಸಿದ್ಧಾಂತ ಎತ್ತಿಹಿಡಿಯಬೇಕು': ಸಚಿವ ಸತೀಶ್ ಜಾರಕಿಹೊಳಿ

### 'ಮಹಾನಾಯಕ ಜೈ ಭೀಮ್ ಟ್ರೋಫಿ' – 2026'





- ಪಂದ್ಯಕೂಟಕ್ಕೆ ಸಚಿವರು ಹಾಗೂ ಶಾಸಕರು ಬ್ಯಾಟ್ ಬೀಸುವ ಮೂಲಕ ಚಾಲನೆ ನೀಡಿದ್ರು.
- ಸಚಿವ ಜಾರಕಿ ಹೊಳಿ ಹಾಕಿರೋ ಬಾಲ್‌ಗೆ ಸ್ಪೀಕರ್ ಯು.ಟಿ.ಖಾದರ್ ಕ್ಲೀನ್ ಬೋಲ್ಡ್ ಆಗಿದ್ದಾರೆ.

**ಮುಡಿಪು:** ಅಂಬೇಡ್ಕರ್ ಅವರ ಸಿದ್ಧಾಂತಗಳನ್ನು ಪ್ರತಿ ವರ್ಷ ಈ ರೀತಿಯ ಕ್ರೀಡಾ ಕೂಟ ನಡೆಸುವ ಮೂಲಕ ಎತ್ತಿ ಹಿಡಿಯಬೇಕು. ಮಂಗಳೂರು ಕ್ಷೇತ್ರದಲ್ಲಿ ದಲಿತರ ಉದ್ಧಾರಕ್ಕಾಗಿ ಮಾಡಿದ ಮನವಿಗೆ ಕ್ಷೇತ್ರದ ಶಾಸಕರ ಜೊತೆಗೆ ಚರ್ಚಿಸಿ ಅಭಿವೃದ್ಧಿಗೆ ಸಹಕರಿಸುತ್ತೇನೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.



ಇವರು ಉಳ್ಳಾಲ ವಿದಾನಸಭಾ ಕ್ಷೇತ್ರದ ಬಾಳೆಪುಣಿ ರಾಜೀವ್ ಗಾಂಧಿ ಪಂಚಾಯಿತಿ ಮೈದಾನದಲ್ಲಿ ನಡೆದ ಅಖಿಲ ಕರ್ನಾಟಕ ಮಹಾನಾಯಕ ಜೈ ಭೀಮ್ ಬಳಗ, ಉಳ್ಳಾಲ ತಾಲೂಕು ಕ್ರೀಡಾ ಮತ್ತು ಸಾಂಸ್ಕೃತಿಕ ಘಟಕದಿಂದ ಪರಿಶಿಷ್ಟ ಜಾತಿ, ಪಂಗಡದ ಸಮಾಜ ಬಾಂಧವರಿಗೆ ನಡೆಸಲಾದ ಹೊನಲು ಬೆಳಕಿನ ಲೀಗ್ ಕಂ ನಾಕೌಟ್ ಮಾದರಿಯ "ಮಹಾನಾಯಕ ಜೈ ಭೀಮ್ ಟ್ರೋಫಿ" –2026"ರ ಪಂದ್ಯಾಕೂಟದಲ್ಲಿ ಭಾಗಿಯಾಗಿ ಮಾತನಾಡಿದ್ದಾರೆ.

ರಾಜ್ಯ ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಮಾತನಾಡಿ, ನಮ್ಮ ದೇಶದ ಜನರ ಭಾಷೆ, ವರ್ಣ, ಸಂಸ್ಕೃತಿ, ಆಹಾರ ಪದ್ಧತಿ, ಆಚಾರ, ವಿಚಾರ, ಪದ್ಧತಿಗಳು ಬೇರೆ ಬೇರೆ ಆಗಿದ್ದರೂ ಎಲ್ಲರಲ್ಲೂ ಭಾರತೀಯರು ಎಂಬ ಭಾವನೆ ಒಕ್ಕೊರಲಲ್ಲಿ ಮೂಡಿಸಲು ಅದು ಬ್ಯೂಟಿ ಆಫ್ ಇಂಡಿಯಾ ಎಂದೆನಿಸಿಕೊಳ್ಳಲು ಮಹಾನಾಯಕ ಡಾ. ಅಂಬೇಡ್ಕರ್ ಅವರ ಸಂವಿಧಾನ ಕಾರಣ ಎಂದು ಹೇಳಿದರು.

ಶಾಸಕರಾದ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಬ್ಬಯ್ಯ ಪ್ರಸಾದ್ ಅವರು ಇಂತಹ ಪಂದ್ಯಕೂಟ ನಡೆಯುತ್ತಿರುವುದು ನಿಜಕ್ಕೂ ಉತ್ತಮ ಕಾರ್ಯ ಎನ್ನುತ್ತಾ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಸ್ಪೀಕರ್ ಯು.ಟಿ.ಖಾದರ್ ಹಾಗೂ ಅವರ ಆಪ್ತಸಹಾಯಕರಾದ ವಿಜಯ್ ಕುಮಾರ್ ಹಾಗೂ ಬಾಳೆಪುಣಿ ಗ್ರಾಮ ಪಂಚಾಯತ್ ಸಾಧನೆಗಳಿಗೆ ಇದರ ಜೊತೆಗೆ ಮಂಗಳೂರು ವಿಧಾನಸಭಾ ಸ್ಥಳೀಯಾಡಳಿತ ಸಂಸ್ಥೆಗಳ ಪರಿಶಿಷ್ಟ ಜಾತಿ ಮತ್ತು ಪಂಗಡದ ಚುನಾಯಿತ ಪ್ರತಿನಿಧಿಗಳು ಹಾಗೂ ಧಾರ್ಮಿಕ ಕ್ಷೇತ್ರದ ಮುಖಂಡರುಗಳಿಗೆ ಗೌರವ ಸನ್ಮಾನ ಹಾಗೂ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿ ಸನ್ಮಾನಿಸಲಾಯಿತು.

ಪಂದ್ಯಕೂಟಕ್ಕೆ ಸಚಿವರು ಹಾಗೂ ಶಾಸಕರು ಬ್ಯಾಟ್ ಬೀಸುವ ಮೂಲಕ ಚಾಲನೆ ನೀಡಿದ್ರು. ಇದೇ ವೇಳೆ ಸಚಿವ ಜಾರಕಿ ಹೊಳಿ ಹಾಕಿರೋ ಬಾಲ್‌ಗೆ ಸ್ಪೀಕರ್ ಯು.ಟಿ.ಖಾದರ್ ಕ್ಲೀನ್ ಬೋಲ್ಡ್ ಆಗಿದ್ದಾರೆ. ಹೀಗೆ ಸ್ವಲ್ಪ ಸಮಯ ಆಟವಾಡಿದ್ದಾರೆ.

ಕಾರ್ಯಕ್ರಮದಲ್ಲಿ ಡಾ. ಯು. ಟಿ. ಇಫ್ತಿಕರ್ ಅಲಿ, ಮುಡಾ ಅಧ್ಯಕ್ಷ ಸದಾಶಿವ ಉಳ್ಳಾಲ, ಮುಡಿಪು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಶಾಂತ್ ಕಾಜವ, ಉಳ್ಳಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಶೆಟ್ಟಿ ಬೋಳಿಯಾರ್, ಬಾಳೆಪುಣಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಶೆರೀಫ್, ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಕೋಶಾಧಿಕಾರಿ ಪದ್ಮರಾಜ್ ಆರ್. ಪೂಜಾರಿ, ಭರತ್ ಶೆಟ್ಟಿ, ಬಶೀರ್, ರಾಜ್ಯ ಸಂಚಾಲಕ ಜಗದೀಶ್ ಗಂಗೊಳ್ಳಿ, ಸಂಚಾಲಕ ಪ್ರವೀಣ್ ಕುಮಾರ್ ಜೆ.ಪಿ, ಸಂಚಾಲಕ ಸುರೇಂದ್ರ ಕುಂದಾಪುರ, ಸಂಘಟನಾ ಕಾರ್ಯದರ್ಶಿ ರವಿ ಎಸ್, ಜಿಲ್ಲಾ ಎಸ್ ಸಿ ಎಸ್ ಟಿ ಘಟಕ ಅಧ್ಯಕ್ಷ ದಿನೇಶ್ ಮೂಳೂರು ಉಪಸ್ಥಿತರಿದ್ದರು.

ಕ್ರೀಡಾಕೂಟ ಸಂಯೋಜಕ ರೋಹಿತ್ ಉಳ್ಳಾಲ್ ಕಾರ್ಯಕ್ರಮ ನಿರೂಪಿಸಿದರು.

## ಹಸಿವು ನಿವಾರಣಾ ಕಾರ್ಯಕ್ರಮ

**ಸೋಮೇಶ್ವರ:** ಲಯನ್ಸ್ ಕ್ಲಬ್ ಸೋಮೇಶ್ವರದ ವತಿಯಿಂದ ಕನ್ಯಾನದಲ್ಲಿರುವ ಭಾರತ ಸೇವಾ ವೃದ್ಧಾಶ್ರಮ ಹಾಗೂ ಅನಾಥಾಶ್ರಮದಲ್ಲಿ ಹಸಿವು ನಿವಾರಣಾ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಸಂದರ್ಭದಲ್ಲಿ ಆಶ್ರಮದ ನಿವಾಸಿಗಳಿಗೆ ಪೌಷ್ಟಿಕವಾದ ಒಂದು ಸಮಯದ ಊಟವನ್ನು ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಲಬ್ ಅದ–್ಯಕ್ಷ ಲಯನ್ ಕೆ. ವಿಜಯನ್ ವಹಿಸಿದ್ದರು. ಆಶ್ರಮದ ಟ್ರಸ್ಟಿ ಶ್ರೀ ಈಶ್ವರ ಭಟ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಲಯನ್ಸ್ ಸದಸ್ಯರಾದ ನಿರ್ಮಿತಾ ಭಂಡಾರಿ, ವಿಜಯಕುಮಾರ್, ಶಶಿ ಕುಮಾರ್ ನಾಯರ್, ರಾಜಶ್ರೀ ನಾಯರ್, ಡಾ. ಅನುರೂಪಾ, ರಾಧಿಕಾ ಮಹೇಶ್, ಫ್ಲಾವಿಯಾ ಡಿ'ಸೋಜಾ ಹಾಗೂ ರಾಘವನ್ ಮೂತಾಲ್ ಅವರು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಲಯನ್ ನಿತೀಶ್ ಕೃಷ್ಣ ಸ್ವಾಗತ ಭಾಷಣ ಮಾಡಿದರು. ಕ್ಲಬ್ ಪರಿವಾರ ಸದಸ್ಯರಾದ ಹರೀಶ್ ಭಂಡಾರಿ ಅವರು ವಂದನಾರ್ಪಣೆ ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ಸೋಮೇಶ್ವರ ಲಯನ್ಸ್ ಕ್ಲಬ್ ಸದಸ್ಯರ ಜೊತೆಗೆ ಕ್ಲಬ್ಬಿನ ಕುಟುಂಬ ಸದಸ್ಯರು ಉಪಸ್ಥಿತರಿದ್ದು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

## ಬೋಳಿಯಾರ್: ಶಾಲೆ ವಿದ್ಯಾರ್ಥಿಗಳಿಗೆ ಶಿಕ್ಷಣದ ಮಾಹಿತಿ ಶಿಬಿರ ಆಯೋಜನೆ



**ಕೊಣಾಜೆ:** ಸಂವಿಧಾನ ಶಿಲ್ಪಿ ಡಾ. ಬಿ. ಆರ್.ಅಂಬೇಡ್ಕರ್ ವಿದ್ಯಾನಿಧಿ ಸಮಿತಿ ಉಳ್ಳಾಲ ತಾಲೂಕು ವತಿಯಿಂದ ದ. ಕ.ಜಿಲ್ಲಾ ಪಂಚಾಯತ್ ಬೋಳಿಯಾರ್ ಶಾಲೆ ವಿದ್ಯಾರ್ಥಿಗಳಿಗೆ ಶಿಕ್ಷಣದ ಮಾಹಿತಿ ಶಿಬಿರ ಇತ್ತೀಚೆಗೆ ನಡೆಯಿತು. ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಸಿಬ್ಬಂದಿಯಾಗಿರುವ ವಿಜಯರಾಜ್ ವಿದ್ಯಾರ್ಥಿಗಳಿಗೆ ಶಿಕ್ಷಣದ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ನೀಡಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥ ವಿಜ್ಞಾನ ವಿಭಾಗದ ಸಂಶೋಧನಾ ವಿದ್ಯಾರ್ಥಿಯಾಗಿರುವ ಶ್ರೀ ಶಿವರಾಜ್ ಪಟೇಲ ಅವರು ನೀಡಿದರು ನಂತರ 6ನೇ ತರಗತಿಯ ವಿದ್ಯಾರ್ಥಿನಿಯಾಗಿರುವ ಕುಮಾರಿ ಸೌಧ ಇವರ ಮುಂದಿನ ಶಿಕ್ಷಣಕ್ಕಾಗಿ ಸಮಿತಿಯು ದತ್ತು ಸ್ವೀಕಾರವಾಗಿ ತೆಗೆದುಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಶಾಲಾ ಅಭಿವೃದ್ಧಿ ಅಧ್ಯಕ್ಷರಾಗಿರುವ ಇಕ್ಬಾಲ್, ಮುಖ್ಯೋಪಾಧ್ಯಾಯನಿ ಶ ಚೇತನಾ ಪಿ, ರಮ್ಯಾ ಬಿ. ಎಚ್, ಪ್ರಜ್ಞಾ ಕೆ, ಸಮಿತಿಯ ಸದಸ್ಯರಾಗಿರುವ ಸೃಜನ್, ಮೈಕಲ್ ರೇಗೋ ಉಪಸ್ಥಿತರಿದ್ದರು. ಸ್ಥಾಪಕ ಅಧ್ಯಕ್ಷರಾದ ಯಾದವ ಅಸ್ಯೆಗೋಳಿ ಪ್ರಾಸ್ತಾವಿಕವಾಗಿ ಮಾತನಾಡಿದರು.

## ಪ್ರಾಮಾಣಿಕತೆ, ನಿಷ್ಠೆಯ ಜೀವನಪಥದಲ್ಲಿ ಬಾಳಿದ ಡಾ.ಎನ್.ವಿನಯ ಹೆಗ್ಡೆ : ಎನ್.ಸಂತೋಷ ಹೆಗ್ಡೆ

**ಮಂಗಳೂರು:** ಪ್ರಾಮಾಣಿಕತೆ, ನಿಷ್ಠೆಯನ್ನು ಜೀವನಪಥವನ್ನೆಲ್ಲಾ ಪಾಲಿಸಿಕೊಂಡು ಬಂದ ಡಾ. ಎನ್. ವಿನಯ ಹೆಗ್ಡೆ ಎಲ್ಲರೊಂದಿಗೆ ಆತ್ಮೀಯರಾಗಿದ್ದರು. ಅವರು ಸದಾ ಸಾಧನೆಯ ಹಾದಿಯಲ್ಲಿ ಮುನ್ನಡೆದವರು ಎಂದು ನೆನಪಿಸಿಕೊಂಡವರು ಅವರ ಕಿರಿಯ ಸೋದರ, ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ ಹೆಗ್ಡೆ. ಅಗಲಿದ ನಿಟ್ಟೆ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ, ನಿಟ್ಟೆ ಪರಿಗಣಿತ ವಿ.ವಿ.ಯ ಕುಲಾಧಿಪತಿ, ಶಿಕ್ಷಣ ತಜ್ಞ ಹಾಗೂ ಕೈಗಾರಿಕೋದ್ಯಮಿ ವಿನಯ ಹೆಗ್ಡೆ ಅವರಿಗೆ ನಗರದ ಟಿಎಂಎ ಪೈ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ನುಡಿನಮನ ಸಮಾರಂಭದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

ವಿನಯರ ಪರಿಶ್ರಮ ಅವರನ್ನು ಎತ್ತರಕ್ಕೆ ಬೆಳೆಸಿದುದಾಗಿ, ಲೆಮಿನಾ ಸಂಸ್ಥೆ ಸ್ಥಾಪಿಸಿ ಯಶಸ್ವಿಯಾದದ್ದು, ಕೆ.ಎಸ್. ಹೆಗ್ಡೆ ವೈದ್ಯಕೀಯ ಅಕಾಡೆಮಿ ಸ್ಥಾಪಿಸಿ ಸಮಾಜಕ್ಕೆ ಕೊಡುಗೆ ನೀಡಿರುವುದನ್ನು ಮೆಚ್ಚಿಕೊಂಡರು ಎಂದು ಅವರು ಹೇಳಿದರು.ನಿಟ್ಟೆ ವಿವಿಯ ಸಹಕುಲಾಧಿಪತಿ ಡಾ. ಶಾಂತಾರಾಮ ಶೆಟ್ಟಿ ಮಾತನಾಡಿ,



ವಿನಯ ಹೆಗ್ಡೆ ಕನಸುಗಾರರಾಗಿದ್ದು, ಕನಸನ್ನು ನನಸಾಗಿಸಲು ಶ್ರಮಿಸಿದವರಾಗಿದ್ದಾರೆ. ಅವರ ಸಾಧನೆಯ ಹಿಂದೆ ಅವಿರತ ಶ್ರಮವಿದ್ದು, ಇದು ಇತರರಿಗೆ ಪ್ರೇರಣೆ–ಯಾಗಿದೆ ಎಂದರು.ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನಸಭಾ ಅದ–್ಯಕ್ಷ ಯು.ಟಿ. ಖಾದರ್, ಶಾಸಕರು, ಮಾಜಿ ಮುಖ್ಯಮಂತ್ರಿಗಳು, ಮಾಜಿ ಸಚಿವರು, ಸಂಸದರರು ಹಾಗೂ ಶ್ರದ್ಧಾಂಜಲಿ ಅರ್ಪಿಸಿದ ಅನೇಕ ಗಣ್ಯರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಎ.ಜೆ. ಸಮೂಹ ಸಂಸ್ಥೆಗಳ ಅಧ್ಯಕ್ಷ ಎ.ಜೆ. ಶೆಟ್ಟಿ, ಬಂಟರ ಯಾನೆ ನಾಡವರ ಮಾತೃ ಸಂಘದ ಅಧ್ಯಕ್ಷ ಅಜಿತ್ ಕುಮಾರ್ ರೈ ಮಾಲಾಡಿ, ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ, ಯೆನೆಪೋಯ ಪರಿಗಣಿತ ವಿಶ್ವ ವಿದ್ಯಾನಿಲಯದ ಕುಲಾಧಿಪತಿ ಯೆನೆಪೋಯ ಅಬ್ದುಲ್ಲಾ ಕುಂಞ್, ಇಂಡಿಯನ್ ರೆಡ್ ಕ್ರಾಸ್ ಘಟಕದ ಸಭಾಪತಿ ಸಿ.ಎ. ಶಾಂತಾರಾಮ ಶೆಟ್ಟಿ, ಕ್ಯಾ. ಗಣೇಶ್ ಕಾರ್ನಿಕ್, ನಿಟ್ಟೆ ಗುತ್ತು ಕುಟುಂಬದ ಸದಸ್ಯರು ಕ್ಯಾ. ಪ್ರಸನ್ನ ಹೆಗ್ಡೆ, ನಿರ್ಮಲಾ ಅಡ್ಯಂತಾಯ್, ಅಶಾ ಅಜಿಲ್, ಸುಜಾತಾ ವಿನಯ ಹೆಗ್ಡೆ, ಅಶ್ವಿತ, ರೋಹಿತ್ ಪೂಂಜ, ವಿಶಾಲ್ ರೂಪಾ ಹೆಗ್ಡೆ, ಆವಿಷ್ಕಾ, ವೀರೆನ್, ವೈಷ್ಣವಿ ಮತ್ತು ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಮುಖಂಡರು ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿ ಪುಷ್ಪನಮನ ಸಲ್ಲಿಸಿದರು.ರಾಜ್ಯದ ಮಾಜಿ ಮುಖ್ಯಮಂತ್ರಿಗಳು, ಹಿರಿಯ ಸಚಿವರು, ಮಾಜಿ ಸಚಿವರು, ಶಾಸಕರು, ಮಾಜಿ ಶಾಸಕರು, ಉದ್ಯಮಿಗಳು, ಶಿಕ್ಷಣ ತಜ್ಞರು ಸೇರಿದಂತೆ ಗಣ್ಯರು ಗೌರವ ನಮನ ಸಲ್ಲಿಸಿದರು. ವಿನಯ ಹೆಗ್ಡೆಯವರ ಸಹಸ್ರಾರು ಆಪ್ತರು, ಅಭಿಮಾನಿಗಳು, ಕುಟುಂಬ ವರ್ಗದವರು ಮತ್ತು ನಿಟ್ಟೆ ಸಂಸ್ಥೆಗಳ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗವು ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

### ಆರ್‌ಎಸ್‌ಎಸ್ ಕಾರ್ಯಕರ್ತನ ಸಾವು, ಕಂಗಾಲಾದ ಕುಟುಂಬ

## ಅಸಹಾಯಕ ಮನೆಗೆ ಸಹಾಯಹಸ್ತ ಚಾಚಿದ ಕುತ್ತಾರು ಬಿಜೆಪಿ ಮುಖಂಡರು

**ಕುತ್ತಾರು:** ಕಳೆದ 20 ವರ್ಷಗಳ ಹಿಂದೆ ಆರ್‌ಎಸ್‌ಎಸ್ ಬೈಠಕ್ ಮುಗಿಸಿ ವಾಪಸ್ಸಾಗುತ್ತಿದ್ದ ವೇಳೆ ಅಸೌಖ್ಯಕ್ಕೀಡಾಗಿ ಸಾವನ್ನಪ್ಪಿದ ಜನಸಂಘ, ಬಿಜೆಪಿ ಹಾಗೂ ಆರ್ ಎಸ್ ಎಸ್ ಸಕ್ರಿಯ ಸದಸ್ಯರಾಗಿದ್ದ ಕುತ್ತಾರುಗುತ್ತು ಸಮೀಪದ ನಿವಾಸಿ ಮಾಧವ ಆಚಾರ್ಯ ಕುಟುಂಬ ಇಂದು ಆರ್ಥಿಕ ಸ್ಥಿತಿ ಹಾಗೂ ಸಹೋದರನ ಆರೋಗ್ಯ ಸ್ಥಿತಿಯಿಂದ ಕಂಗಾಲಾಗಿದ್ದು, ಮಾಜಿ ಶಾಸಕ ಜಯರಾಮ ಶೆಟ್ಟಿ ಸೇರಿದಂತೆ ಕುತ್ತಾರು ಬಿಜೆಪಿ ಮುಖಂಡರು ಮನೆಗೆ ಭೇಟಿ ನೀಡಿ ರೂ.2 ಲಕ್ಷದ ಚೆಕ್ ಅನ್ನು ಸಹಾಯಹಸ್ತವಾಗಿ ವಿತರಿಸಿದ್ದಾರೆ.



ಮಾಧವ ಆಚಾರ್ಯ

ಮಾಜಿ ಶಾಸಕ ಜಯರಾಮ ಶೆಟ್ಟಿ ಅವರು ಮಾತನಾಡಿ, ಸಂಘ, ಬಿಜೆಪಿ, ಜನಸಂಘಕ್ಕೆ ಕೆಲಸ ಮಾಡಿದವರು ಮಾಧವ ಆಚಾರ್ಯರು. ತೊಕ್ಕೊಟ್ಟು ಜ್ಯುವೆಲ್ಲರಿಯನ್ನು ನಡೆಸುತ್ತಾ ಕುಟುಂಬದ ಜೀವನಾಧಾರವಾಗಿದ್ದರು. ಆದರೆ 20 ವರ್ಷಗಳ ಹಿಂದಿನ ಅವರ ಸಾವು ಇಡೀ ಕುಟುಂಬಕ್ಕೆ ಜೀವನಾಧಾರವನ್ನೇ ಕಸಿದಿತ್ತು. ಅವರ ಸಾವಿನ ನಂತರ ಇಬ್ಬರು ಸಹೋದರರೂ ಸಾವನ್ನಪ್ಪಿ, ಸಹೋದರಿಗೂ ವಿವಾಹ ನಡೆಸಲು ಅಸಾಧ್ಯವಾಗಿತ್ತು. ಮರದ ಕೆಲಸ ನಿರ್ವಹಿಸುತ್ತಾ ಸಹೋದರ ಲಕ್ಷ್ಮಣ್ ಆಚಾರ್ಯ ಸಹೋದರಿಯರು, ಅವರ ಪುತ್ರಿಯರ ಜವಾಬ್ದಾರಿಯನ್ನು ನಿಭಾಯಿಸುತ್ತಾ ಬಂದರೂ ವಿಧಿ ಲೀಲೆಗೆ ಅವರು ಕೂಡ ಅನಾರೋಗ್ಯಕ್ಕೀಡಾಗಿ, ಇಂದು ಕಿಡ್ನಿ ಸಂಬಂಧಿತ ಕಾಯಿಲೆಯಿಂದ ದುಡಿಯಲು ಸಾಧ್ಯವಾಗದೇ ಮನೆಯಲ್ಲೇ ಉಳಿಯುವಂತಾಗಿದೆ. ಅವರ ಚಿಕಿತ್ಸೆಗೆ ಹಾಗೂ ಸಹೋದರಿಯರ ಸಲಹಲು ಆರ್ಥಿಕ ಅಡಚಣೆಯಿರುವುದರಿಂದ ಕುತ್ತಾರು ಪರಿಸರದ ಬಿಜೆಪಿ ಪಕ್ಷದ ಹಿರಿಯ ಮುಖಂಡರು, ಕುತ್ತಾರು ಗುತ್ತಿನವರು ಸೇರಿಕೊಂಡು ರೂ. 2 ಲಕ್ಷದ ಚೆಕ್ ವಿತರಿಸಲಾಗಿದೆ. ಈಗಾಗಲೇ ಸ್ಥಳೀಯ ಕುತ್ತಾರು ದೇವಸ್ಥಾನ ಹಾಗೂ ಪರಿಚಿತರು ಸಣ್ಣ ಆರ್ಥಿಕ ಸಹಾಯವನ್ನು ಮಾಡುತ್ತಾ ಬಂದರೂ ಅದರಿಂದ ಜೀವನ ಸಾಲದು ಅನ್ನುವ ಉದ್ದೇಶದಿಂದ ಎಲ್ಲರೂ ಮನಸ್ಸು ಮಾಡಿ ಮನುಷ್ಯತ್ವದ ಕಾರ್ಯವನ್ನು ಮಾಡಲಾಗಿದೆ. ಸ್ಥಳೀಯ ದೈವ ದೇವರು ಇಡೀ ಕುಟುಂಬವನ್ನು ಚೇತರಿಸುವಂತೆ ಮಾಡಲಿ ಎಂದು ಹಾರೈಸಿದರು.



ಹಿರಿಯ ಸಂಘದ ನಾಯಕ ಪ್ರಭಾಕರ್ ಶೆಟ್ಟಿ ಕುತ್ತಾರುಗುತ್ತು ಮಾತನಾಡಿ, ಉಳ್ಳಾಲ 1972 ರ ಜನಸಂಘದ ಸದಸ್ಯತ್ವ ನಡೆಸಿ, ಸ್ಥಾನೀಯ ಸಮಿತಿಯನ್ನು ರಚಿಸುತ್ತಾ ಕುತ್ತಾರು ಭಾಗದಲ್ಲಿ ಸಂಘದ ಸಂಪರ್ಕ ಸಾಧಿಸಿದವರು. ಅಂದಿನ ದಿನದಲ್ಲಿ ಶಾಲಾ ವಿದ್ಯಾರ್ಥಿಯಾಗಿ ಮಾಧವ ಆಚಾರ್ಯ ನಿತ್ಯ ಶಾಖೆಯನ್ನು ನಡೆಸುತ್ತಿದ್ದವರು, ಅಲ್ಲದೆ ಸಂಘದ ಶಾಖೆಯಲ್ಲಿ ಸಕ್ರಿಯರಾಗಿದ್ದರು. ಕಾಲೇಜು ಮುಗಿಸಿ ಕೆಲಸ ಹುಡುಕಿ, ಕೆಲಸ ಸಿಗದೇ ಇದ್ದಾಗ ಸಹೋದರನ ಸಹಾಯದೊಂದಿಗೆ ಜ್ಯುವೆಲ್ಲರಿ ಅಂಗಡಿಯನ್ನು ತೊಕ್ಕೊಟ್ಟಿನಲ್ಲಿ ಸ್ಥಾಪಿಸಿದರು. ಕೆಲಸದ ಜೊತೆಗೆ ಸಂಘದ ಚಟುವಟಿಕೆಯಲ್ಲಿ ಸಕ್ರಿಯರಾಗಿದ್ದರು. ಆದರೆ ತನ್ನ 30 ರ ಹರೆಯದಲ್ಲಿ ಬೈಠಕ್ ಹೋಗಿ ವಾಪಸ್ಸಾಗುವಾಗ ಏಕಾಏಕಿ ಅಸೌಖ್ಯಕ್ಕೀಡಾಗಿ ಆಸ್ಪತ್ರೆಗಳಲ್ಲಿ ದಾಖಲಾದರೂ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದರು. ತದನಂತರ ಇಬ್ಬರು ಸಹೋದರರು ತೀರಿ ಹೋದರು. ಕುಟುಂಬದ ಆಧಾರಸ್ತಂಭವೇ ಕಳಚಿದ್ದರಿಂದಾಗಿ ಮನೆಮಂದಿ ಕಂಗಾಲಾಗಿದ್ದರು, ಸಹೋದರ ತೀರಿಹೋದ ಬೇಸರದಲ್ಲಿದ್ದ ಜವಾಬ್ದಾರಿ ನಿರ್ವಹಿಸಬೇಕಾದ ಲಕ್ಷ್ಮಣ್ ಆಚಾರ್ಯರೂ ತೀವ್ರ ಅಸೌಖ್ಯಕ್ಕೀಡಾಗಿ ಹಾಸಿಗೆ ಹಿಡಿದು, ಇಂದು ಕಿಡ್ನಿ ಸಂಬಂಧಿ ಕಾಯಿಲೆಗೆ ತುತ್ತಾಗುವಂತೆ ಆಗಿದೆ. ಏನೂ ಮಾಡಲಾಗದ ಸ್ಥಿತಿಯಲ್ಲಿದ್ದರು. ಈ ಕಾರಣದಿಂದ ಎಲ್ಲರೂ ಜೊತೆಗೂಡಿ ಹೊರಗಿನಿಂದ ಯಾರಿಂದಲೂ ಹಣ ಪಡೆಯದೇ ಸ್ಥಳೀಯರೇ ರೂ.5,000, 10,000 ಸಂಗ್ರಹಿಸಿ ರೂ. 2ಲಕ್ಷದ ಮೊತ್ತವನ್ನು ಹಸ್ತಾಂತರಿಸಿದ್ದೇವೆ. ಮುಂದೆಯೂ ದಾನಿಗಳ ಸಹಕಾರವಿದ್ದಲ್ಲಿ ಆರ್ ಎಸ್ ಎಸ್ ನಾಯಕನ ನೊಂದ ಕುಟುಂಬ ಇನ್ನಷ್ಟು ಚೇತರಿಸಿಕೊಳ್ಳುವ ವಿಶ್ವಾಸವಿದೆ ಎಂದರು.

ಸೇವಾ ಚಟುವಟಿಕೆ, ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ನಾಯಕನ ಕುಟುಂಬ ಕಳೆದ 20 ವರ್ಷಗಳಿಂದ ಸಂಕಷ್ಟದಲ್ಲಿದೆ. ಈಗಾಗಲೇ ತಮ್ಮ ಕೈಯಿಂದ ಆದಷ್ಟು ಸಹಾಯಧನವನ್ನು ವಿತರಿಸಲಾಗಿದೆ. ಮುಂದೆ ದಾನಿಗಳು ಸಹಕರಿಸಿದಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಲಕ್ಷ್ಮಣ್ ಆಚಾರ್ಯ ಸಂಸಾರದ ನೌಕೆಯನ್ನು ನಿಭಾಯಿಸಲು ಸಾಧ್ಯ ಎಂದು ವಿ.ಹಿಂ.ಪ ಮುಖಂಡ ಪ್ರವೀಣ್ ರಾಜ್ ಕುತ್ತಾರ್ ಹೇಳಿದರು. ಈ ಸಂದರ್ಭ ರೈಲ್ವೇ ಸಲಹಾ ಸಮಿತಿ ಮಾಜಿ ಸದಸ್ಯರು ಚಂದ್ರಹಾಸ್ ಅಡ್ಯಂತಾಯ ಕುತ್ತಾರುಗುತ್ತು, ಮುನ್ನೂರು ಗ್ರಾ.ಪಂಚಾಯತ್ ಮಾಜಿ ಅಧ್ಯಕ್ಷ ಬಾಬು ಶೆಟ್ಟಿ, ಕೆ.ಗಂಗಾಧರ ಆಳ್ವ ಕುತ್ತಾರಗುತ್ತು, ಸುರೇಶ್ ಚೌಟ ಕುತ್ತಾರಗುತ್ತು, ಸಂದೀಪ್ ಶೆಟ್ಟಿ , ಕೃಷ್ಣ ಶೆಟ್ಟಿ ಕುತ್ತಾರುಗುತ್ತು, ನಮಸ್ತೇ ಕೆ. ಶಶಿಕಾಂತ್ ಆಚಾರ್ಯ, ಬಾಲಕೃಷ್ಣ ಅಡಪ, ಉಮೇಶ್ ಚೌಟ ಕುತ್ತಾರುಗುತ್ತು ಮುಂತಾದವರು ಉಪಸ್ಥಿತರಿದ್ದರು.

**ಆರ್‌ಎಸ್‌ಎಸ್ ನಾಯಕನ ಮನೆಮಂದಿಗೆ ಸಹಕರಿಸಲು ಇಚ್ಛಿಸುವವರು:** LAXMAN ACHARYA , **250101000006109,** IOBA0002501, INDIAN OVERSEAS BANK , KUTHAR , MUNNUR

# ತೊಕ್ಕೊಟ್ಟು ವಿನಮ್ರ ಸಭಾಂಗಣದಲ್ಲಿ ಡಾ.ಎನ್ ವಿನಯ್ ಹೆಗ್ಡೆಯವರಿಗೆ ಶ್ರದ್ಧಾಂಜಲಿ ಸಭೆ, ನುಡಿನಮನ

**ತೊಕ್ಕೊಟ್ಟು:** ಉಳ್ಳಾಲ ತಾಲೂಕಿನಲ್ಲಿ ಆರೋಗ್ಯ ಮತ್ತು ಶೈಕ್ಷಣಿಕ ಕ್ರಾಂತಿಯನ್ನು ನಡೆಸಿರುವ ಸೇವಾ ಮಾಣಿಕ್ಯ ನಿಟ್ಟೆ ಸಮೂಹ ಸಂಸ್ಥೆಯ ಅಧ್ಯಕ್ಷರು ಡಾ.ಎನ್ ವಿನಯ ಹೆಗ್ಡೆಯವರಿಗೆ ಶ್ರದ್ಧಾಂಜಲಿ ಸಭೆ ಮತ್ತು ನುಡಿನಮನವನ್ನು ಭಾರತೀಯ ಜನತಾ ಪಾರ್ಟಿ ಮಂಗಳೂರು ವಿಧಾನಸಭಾ ಕ್ಷೇತ್ರದ ವತಿಯಿಂದ ತೊಕ್ಕೊಟು ವಿನಂಬ್ರಾ ಸಭಾಂಗಣದಲ್ಲಿ ನಡೆಯಿತು. ಸರಳ, ಸಜ್ಜನಿಕೆಯ ನಿಸ್ವಾರ್ಥ ಗುಣದ ಡಾ.ವಿನಯ



ಹೆಗ್ಡೆ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗಣ್ಯರು ಗೌರವದ ನಮನ ಸಲ್ಲಿಸಿದ್ದಾರೆ.

ಸಹಕಾರಿ ಪ್ರಕೊಷ್ಠ ಜಿಲ್ಲಾ ಸಂಚಾಲಕರಾದ ಟಿ ರಾಜಾರಾಮ್ ಭಟ್ ಅವರು ಮಾತನಾಡಿ, ಹುಟ್ಟು ಮತ್ತು ಸಾವುಗಳ ನಡುವಿನ ಸಾಧನೆ ಆದರ್ಶಮಯ ಅನ್ನುವ ಮಾತಿದೆ. ಇದಕ್ಕೆ ಶಿಕ್ಷಣದಲ್ಲಿ ಕ್ರಾಂತಿಯನ್ನು ಮಾಡಿದ ಡಾ.ವಿನಯ ಹೆಗ್ಡೆ ಅವರ ಬದುಕು ಸಾಕ್ಷಿಯಾಗತ್ತೆ. ಡಾ.ವಿನಯ ಹೆಗ್ಡೆಯವರ ಜೀವನ ಮುಂದಿನ ಪೀಳಿಗೆಗೆ ದಾರಿ ದೀಪವಾಗಲಿ ಎಂದು ಹಾರೈಸಿದರು.



ಈ ವೇಳೆ ಅರೆಅಲೆಮಾರಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷರಾದ ರವೀಂದ್ರ ಶೆಟ್ಟಿ ಉಳಿದೊಟ್ಟು ಮಾತನಾಡಿ, ವಿನಯ ಹೆಗ್ಡೆ ಅವರು ದೇರಳಕಟ್ಟೆಯನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸುವಲ್ಲಿ ಪ್ರಮುಖ ಕಾರಣಕರ್ತರು. ನಿಟ್ಟೆ ಹೆಸರನ್ನು ದೇಶದಾದ್ಯಂತ ಪಸರಿಸುವಲ್ಲಿ ಶ್ರಮಿಸಿದವರು ವಿನಯ ಹೆಗ್ಡೆ. ದೊಡ್ಡ ಮಟ್ಟದಲ್ಲಿ ಬೆಳೆದಿದ್ದರೂ ಸರಳ ಜೀವನವನ್ನೇ ಸದಾ ಅನುಸರಿಸುತ್ತಾ ಹಲವರಿಗೆ ನಿದರ್ಶನವಾಗಿದ್ದಾರೆ. ಇಂದು ಡಾ.ವಿನಯ ಹೆಗ್ಡೆಯವರು ನಮ್ಮ ಜೊತೆ ಇಲ್ಲದಿದ್ದರೂ ಅವರ ಕೊಡುಗೆಯನ್ನು ಮುಂದಿನ ಪೀಳಿಗೆಗೆ ಕೊಟ್ಟು ಹೋಗಿದ್ದಾರೆ ಎಂದರು.

ಬಿ.ಜೆ.ಪಿ ಮಂಗಳೂರು ವಿಧಾನಸಭಾ ಕ್ಷೇತ್ರದ ಅಧ್ಯಕ್ಷರಾದ ಜಗದೀಶ ಕುವೈತ್ತಬೈಲ್ ಮಾತನಾಡಿ, ದೇರಳಕಟ್ಟೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಸಂಸ್ಥೆಯನ್ನು ಸ್ಥಾಪಿಸುವುದು ಸುಲಭವಲ್ಲ. ಅಂತಹ ಸಾಹಸಕ್ಕೆ ಕೈ ಹಾಕಿ ಯಶಸ್ವಿಯಾದವರು ವಿನಯ ಹೆಗ್ಡೆ. ಅಂ–ದು 500 ರೂ ಖರೀದಿಸಿದ ಪ್ರದೇಶ ಇಂದು 20,30 ಲಕ್ಷ ಬೆಲೆಬಾಳುವಂತೆ ಮಾಡಿದವರು ಇದೇ ಹೆಗ್ಡೆಯವರು. ಬಡವರ ಸಂಕಷ್ಟಕ್ಕೆ ಸ್ಪಂದಿಸುವ ಕರುಣಾಯಿ ಆಗಿದ್ದರು. ಪಕ್ಷದ ತತ್ವಗಳನ್ನು ಆಳವಡಿಸಿಕೊಂಡು, ಯಾವುದೇ ಹುದ್ದೆಗೆ ಹಾತೊರೆಯದೇ ಉತ್ತಮ ವ್ಯಕ್ತಿಯಾಗಿ ಬದುಕಿ ಬಾಳಿದವರು ಎಂದು ಡಾ.ವಿನಯ ಹೆಗ್ಡೆಯವರ ಸರಳತೆಯ ಬಗ್ಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಕೆ.ಜಯರಾಮ್ ಶೆಟ್ಟಿ, ನಿಕಟಪೂರ್ವ ಮಂಡಲ ಅಧ್ಯಕ್ಷರಾದ ಚಂದ್ರಹಾಸ್ ಉಚ್ಚಿಲ್,ಚಂದ್ರಹಾಸ್ ಉಳ್ಳಾಲ್ ರವರು ಶ್ರದ್ಧಾಂಜಲಿ ಅರ್ಪಿಸಿ ನುಡಿ ನಮನ ಸಲ್ಲಿಸಿದರು.

ಇನ್ನು ಈ ಶ್ರದ್ಧಾಂಜಲಿ ಸಭೆಯಲ್ಲಿ ಹಿರಿಯರಾದ ಸಂಜೀವ ಶೆಟ್ಟಿ ಅಂಬ್ಲಮೊಗರು, ಭಾಸ್ಕರ ಶೆಟ್ಟಿ, ಫಲಾನುಭವಿಗಳ ಪ್ರಕೋಷ್ಠ ರಾಜ್ಯ ಸದಸ್ಯರಾದ ಧನಲಕ್ಷ್ಮಿ ಗಟ್ಟಿ, ಮಂಡಲ ಉಪಾಧ್ಯಕ್ಷರಾದ ಯಶವಂತ ದೇರಾಜೆ, ಶೈಲೇಶ್ ಶೆಟ್ಟಿ ದೇವಿಪುರ, ಕೋಟೆಕಾರ್ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ದಿವ್ಯಾ ಸತೀಶ್ ಶೆಟ್ಟಿ, ಮಂಡಲ ಕಾರ್ಯಾಲಯ ಕಾರ್ಯದರ್ಶಿ ಸುಜಾತ ಶೆಟ್ಟಿ ನಡಾರ್, ಮಂಡಲ ಕೋಶಾಧಿಕಾರಿ ಸುಮಲತಾ ಕೊಣಾಜೆ, ಹಿರಿಯ ನಾಗರಿಕ ಪ್ರಕೊಷ್ಠ ಜಿಲ್ಲಾ ಸಂಚಾಲಕ ರಾದ ದೇವದಾಸ್ ಕೊಲ್ಯ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಮೋಹನ್ ರಾಜ್ ಕೆ. ಆರ್. ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಮಡ್ಯಾರು ಪರಾಶಕ್ತಿ ಕ್ಷೇತ್ರದಲ್ಲಿ ನರೇಂದ್ರನಾಥ ಯೋಗೇಶ್ವರೇಶ್ವರ ಮಹಾಸ್ವಾಮಿಗಳ ಮಹಾ ಆರಾಧನೆ



**ಮಡ್ಯಾರು:** ಮಡ್ಯಾರು ಪರಾಶಕ್ತಿ ಕ್ಷೇತ್ರದಲ್ಲಿ ನರೇಂದ್ರನಾಥ ಯೋಗೇಶ್ವರೇಶ್ವರ ಮಹಾಸ್ವಾಮಿಗಳ ಮಹಾ ಆರಾಧನೆ

ಮರಕಡ ಶ್ರೀ ಗುರುಪರಾಶಕ್ತಿ ಮಠದ ಸಂಸ್ಥಾಪಕ ನರೇಂದ್ರನಾಥ ಯೋಗೇಶ್ವರೇಶ್ವರ ಮಹಾಸ್ವಾಮಿಯವರ ಮಹಾ ಆರಾಧನೆಯು ಮಡ್ಯಾರು ಪರಾಶಕ್ತಿ ಕ್ಷೇತ್ರದಲ್ಲಿ ನಡೆಯಿತು.

ಸ್ವಾಮಿಯವರ ಚಿಂತನ ಬರೇ ಸಾಮಾನ್ಯ ಚಿಂತನ ಅಲ್ಲ. ಇಂತಹ ಭವ್ಯ ಚಿಂತನ ಬರೇ ಮನುಜ ಮಾತ್ರನಿಂದ ಸಾಧ್ಯವಿಲ್ಲ. ಅವರೇ ಅಂದಂತೆ, ಮಾಯಾತೀತನೋರ್ವ ಮಾಯೆಯೊಳಗೆ ಬಂದು ಉದ್ಧರಿಸುವ ಚಿಂತನ. ಹೇಳುವವನೋರ್ವ ಜೀವಜಾಲಗಳ ಹೊರಗೆ ನಿಂತು ಹೇಳಿದ.ಕೇಳುಗನಿಗೆ ಅದು ಅರ್ಥವೇ ಆಗಲಿಲ್ಲ. ಆದರೆ ಮುಂದೆ ಜನಾಂಗ ವೊಂದು ಬರಲಿದೆ.ಬರಿಸುವೆ ನಾ. ಅವರು ಅರ್ಥೈಸಿಕೊಳ್ಳುವರು ಎಂದು. ಪೂಜ್ಯರು ನೀಡಿದ ನುಡಿಗಳು ಅದು ದೇವ ನುಡಿಗಳು. ಅದನ್ನು ಅರ್ಥವಿಸಿಕೊಳ್ಳುವುದು ಸುಲಭ ಅಲ್ಲ. ಒಂದೊಂದು ಶಬ್ದಗಳು ಒಂದೊಂದು ತತ್ವ.ಇಲ್ಲಿ ಭಕ್ತರು ಎಂದಿಲ್ಲ. ಎಲ್ಲರೂ ಬಂಧುಗಳು. ಒಂದು ಕೈ ಸೋತಾಗ ತಮ್ಮ ಕೈ ಜೋಡಿಸಿ ಮೇಲೆತ್ತುವವರು. ಜಾತಿ ಭೇದಗಳ ಮೀರಿದ ಚಿಂತನ. ಯಾರು ಆರ್ತತೆಯೊಳಗೆ ಬಂದು ಕೇಳಿದರೋ,ಯಾರು ಕಣ್ಣೀರು ಕೊಟ್ಟು ಕೇಳಿದರೋ, ಯಾರು ತಾಯಿ ಎಂದು ಶರಣಾಗತರಾದರೋ ಅವರಿಗೆ ತಕ್ಷಣ ಪರಿಹಾರ ಕೊಟ್ಟವರು ಸ್ವಾಮಿ.ಇಂದು ಅವರು ಹೆಜ್ಜೆ ಇಡಿಸಿದಂತೆ ನಾವು ಹೆಜ್ಜೆ ಇಡುತ್ತಿದ್ದೇವೆ. ಅವರ ಸಂಕಲ್ಪಗಳೆಲ್ಲವೂ ಮುಂದಿನ ದಿನಗಳಲ್ಲಿ ಪರಿಪೂರ್ಣತೆಗೆ ಬರಲಿದೆ ಎಂದು ಪೂಜನೀಯ ಮಾತೆ ಶಕುಂತಲಾ ಅಮ್ಮನವರು ಹೇಳಿದರು.

ಶ್ರೀ ಗುರು ಪರಾಶಕ್ತಿ ಮಠದ ಸಂಸ್ಥಾಪಕರಾದ ನರೇಂದ್ರನಾಥ ಯೋಗೇಶ್ವರೇಶ್ವರ ಮಹಾಸ್ವಾಮಿಯವರ ಮಹಾ ಆರಾಧನೆಯ ಸಂದರ್ಭದಲ್ಲಿ ದೀಪಪ್ರಜ್ವಲನಗೈದು, ಪುಷ್ಪನಮನದೊಂದಿಗೆ ನುಡಿನಮನ ಸಲ್ಲಿಸಿ ಮಾತನಾಡಿದರು.

ಮಹಾಸ್ವಾಮಿಯವರ ದಿವ್ಯ ಸಾನ್ನಿಧ್ಯದಲ್ಲಿ ಮಹಾ ಆರಾಧನೆ ನೆರವೇರಿಸಿ ಮಾತನಾಡಿದ ಶ್ರೀ ಗುರುಪರಾಶಕ್ತಿ ಮಠದ ನಿತಿನ್ ನರೇಂದ್ರನಾಥ ಯೋಗೇಶ್ವರೇಶ್ವರ ಸ್ವಾಮಿಯವರು, ಮಾಯಾತೀತತೆಯ ಸೊಬಗನ್ನು ಈ ವಸುಂಧರೆಗೆ ತಂದ ಅಸೀಮತೆಯ ಭಾವ ಪಡ–ಕೊಂಡು ಮಾಯೆಯ ವಿಸ್ಮಯತೆಯ ಅನಾವರಣಗೊಳಿಸಿದ ಪರಮಪೂಜ್ಯರಿಗೆ ನಮನಗಳನ್ನು ಅರ್ಪಿಸೋಣ.ಸ್ವಾಮಿ ಎಂಬ ಪದದ ವಿಸ್ತಾರತೆಯ ಇಂದಿನ ಮಹಾ ಆರಾಧನೆಯಲ್ಲಿ ಕಂಡೆವು ನಾವು.ಒಳಗೊಳಗೇ ನಿಂತವನೋರ್ವ, ಒಳಗೊಳಗೇ ನಿನಾದವ ಕೊಡುವವನೋರ್ವ, ನಮ್ಮೊಳಗೇ ನಿಂತು ನಮ್ಮ ಅಸ್ತಿತ್ವವ ನಮಗೆ ಕೊಡುವವ ಸ್ವಾಮಿ.ಒಳಗೆ ನಿಂತು ನಮ್ಮ ಆತ್ಮ ಶುದ್ಧಗೊಳಿಸಿದ ಆತ್ಮಸಖ. ಅವರವರ ಭಾವಗಳಲಿ ಸ್ಪಂದಿಸಿ, ಅವರವರ ಜೈತ್ರ ಯಾತ್ರೆಯಲಿ ತಾನೂ ಯಾತ್ರಿಕನಾಗಿ, ಪಯಣದಲಿ ಭಾಗಿಯಾಗಿ,ನೋವು ನಲಿವುಗಳಿಗೆ ಎಲ್ಲದಕ್ಕೂ ಅಹುದೆಂದವ 'ಸ್ವಾಮಿ' ಎಂದರು.

ಮುಂದುವರಿದು ನಿತ್ಯ ನಿರಂತರನಾಗಿ ನಮ್ಮೊಳಗೇ ಇರುವ ಅಚಿಂತ್ಯನೀತ.ಸೃಷ್ಟಿಯ ಪರಮಾಚಾರ್ಯ ಆತ. ಪ್ರತಿಯೋರ್ವನೊಳಗು ಇರುವ ಆತ್ಮನ ರಚನಾ ಕರ್ತೃ ಆತ. ಅಮೂರ್ತತೆಯೊಳಗೆ ಇದ್ದರೂ ಇಲ್ಲದವನೋರ್ವ, ಸಕಲ ಭಾವಗಳ ಒಳಗೆ ದೇವಭಾವ ತುಂಬಿದವನೋರ್ವನಿಗೆ ನಮೋ ಎನ್ನೋಣ.ಕ್ಷೇತ್ರೇಶನ ಪರಿಚಯವೇ ಕ್ಷೇತ್ರದ ಪರಿಚಯ. ದೇವಭಾವದ ಸಾಕಾರತೆಯೊಳಗೆ ನಾವು ಕಂಡರೂ ಆಕಾರ ನಿರಾಕಾರಗಳಲ್ಲಿ ಇಲ್ಲದವನ ಚಿಂತನದ ಸಾಕಾರತೆ–ಯೇ ಮಹಾ ಆರಾಧನೆ ಎಂದು ನುಡಿ ಸಂದೇಶ ನೀಡಿದರು.

ಮಾಣಿಲ ಶ್ರೀಧಾಮದ ಮೋಹನದಾಸ ಪರಮಹಂಸ ಸ್ವಾಮೀಜಿ ಮಾತನಾಡಿ, ಮರಕಡ ಶ್ರೀಗಳ ಆದರಣೀಯತೆ, ಮನುಷ್ಯ ಪ್ರೀತಿ ನಿಜಕ್ಕೂ ಅನುಕರಣೀಯ.ಸದಾ ನಮ್ಮ ಹೃದಯದಲ್ಲಿ ಅವರು ನೆಲೆ ನಿಂತಿದ್ದಾರೆ. ವಿಶ್ವ ಶಾಂತಿಯೊಂದಿಗೆ ಲೋಕಹಿತವನ್ನು ಸದಾ ಬಯಸಿದ ಮಹನೀಯರು ಅವರು ಎಂದರು.

ವಿಧಾನ ಸಭಾಧ್ಯಕ್ಷರಾದ ಯು ಟಿ ಖಾದರ್, ದ ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ ನುಡಿನಮನಗಳನ್ನು ಸಲ್ಲಿಸಿದರು.ರಾಮಕ್ಷತ್ರಿಯ ಸಮಾಜದ ಕುಲ ಪುರೋಹಿತರಾದ ವಿದ್ವಾನ್ ಸತ್ಯಕೃಷ್ಣ ಭಟ್, ಮಾಜಿ ಸಚಿವ ಜೆ. ಕೃಷ್ಣ ಪಾಲೇಮಾರ್,ಮಾಜಿ ಮೇಯರ್ ಶಶಿಧರ್ ಹೆಗ್ಡೆ, ಪುತ್ತಿಲ ಪ್ರತಿಷ್ಠಾನದ ಅಧ್ಯಕ್ಷ ಅರುಣ್ ಕುಮಾರ್ ಪುತ್ತಿಲ ಉಪಸ್ಥಿತರಿದ್ದರು.

ಈ ಸಂದರ್ಭ ಪೂಜ್ಯ ಮಹಾಸ್ವಾಮಿಯವರ ಪುತ್ರಿಯರಾದ ಶೀತಲ್ ಕೋಟೆಕಾರ್, ಕಾವ್ಯ ಕೋ–ಟೆಕಾರ್, ಅಳಿಯಂದಿರಾದ ವಿಶಾಲ್ ರಾವ್, ಸನತ್ ಕೋಟೆ, ಮೊಮ್ಮಕ್ಕಳಾದ ಪ್ರಣವ್ ಕೋಟೆಕಾರ್, ಪ್ರಕೃತಿ ಕೋ–ಟೆಕಾರ್, ಗಗನ್ ದೀಪ್ ಚಿತ್ತಾರಿ,ದೇವರ ಅರಮನೆ ಕುಟುಂಬಸ್ಥರಾದ ಮನಮೋಹನ್ ರಾವ್, ಭವಾನಿ ಶಂಕರ್ ರಾವ್,ರಘುರಾಮ್ ರಾವ್, ರಂಜನ್ ಕೋಟೆಕಾರ್,ಕಡೆಕಾರು ಕುಟುಂಬದ ಹಿರಿಯರಾದ ರಾಧಾಕೃಷ್ಣ ಜೆಪ್ಪು, ಜೆ. ಕೃಷ್ಣಾನಂದ ರಾವ್, ಕಡೆಕಾರು ಗುರುವನ ಶ್ರೀ ದುರ್ಗಾ ಕ್ಷೇತ್ರದ ಅಧ್ಯಕ್ಷರಾದ ಯೋಗೇಶ್ ಕುಮಾರ್ ಜೆಪ್ಪು, ವೆಂಕಟೇಶ್ ಜೆಪ್ಪು, ಹರಿಪ್ರಸಾದ್ ಜೆ, ಶಾಂತರಾಮ ಶೆಟ್ಟಿ ಅಡ್ಯಾರ್, ಪ್ರಥಮ್ ಹೆಗ್ಡೆ, ವಿಜಯಚಂದ್ರ ಮಡಂತ್ಯಾರು,ಯೋಗೀಶ್ ಕುಮಾರ್ ಅತ್ತಾವರ,ಜ್ಯೋತಿಷಿ ಗಂಗಾಧರ್ ಪಣಿಕ್ಕರ್ ಮುಂತಾದವರು ಪುಷ್ಪನಮನ ಸಲ್ಲಿಸಿದರು. ಕಲ್ಪನಾ ವೆಂಕಟೇಶ್ ಜೆಪ್ಪು, ದುರ್ಗಾದಾಸ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.

# ಕಣಚೂರು ವೈದ್ಯಕೀಯ ಕಾಲೇಜಿನ ವಾರ್ಷಿಕೋತ್ಸವ, ಪ್ರಶಸ್ತಿ ಪ್ರದಾನ ಸಮಾರಂಭ



**ಕಣಚೂರು;** ಶಿಕ್ಷಣ ಕ್ಷೇತ್ರದಲ್ಲಿ ತನ್ನದೇ ಕ್ರಾಂತಿಯನ್ನು ಸೃಷ್ಟಿಸುತ್ತಾ ಬಂದಿರುವ ಕಣಚೂರು ವೈದ್ಯಕೀಯ ಕಾಲೇಜು ದಶಮ ಸಂಭ್ರಮದಲ್ಲಿದೆ. ಇದರ ಅಂಗವಾಗಿ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ವಾರ್ಷಿಕೊತ್ಸವ ನಡೆದಿದೆ.

ಕಾರ್ಯಕ್ರಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮುಖ್ಯ ಕಾರ್ಯದರ್ಶಿಗಳು ಮೊಹಮ್ಮದ್ ಮೊಹ್ಸಿನ್ ಐಎಎಸ್ ಅವರು ಮಾತನಾಡಿ, ವೈದ್ಯರು ಕೇವಲ ಬಿಳಿ ಕೋಟ್ ಧರಿಸಿದ ವೃತ್ತಿಪರರು ಮಾತ್ರವಲ್ಲ. ಅವರು ನಿಜ ಜೀವನದ ಹೀರೋಗಳು. ಜೀವ ರಕ್ಷಿಸುವ ಅವರ ಸೇವೆ ಅತ್ಯಂತ ಸಮರ್ಪಣೆಯ ಫಲವಾಗಿದೆ. ಅಂತಹ ವೈದ್ಯರನ್ನು ಬೆಳೆಸುವ ಕಣಚೂರು ಸಂಸ್ಥೆಯ ಸ್ಥಾಪಕರು ಸ್ವಂತ ಊರು ಮತ್ತು ನಗರದ ಅಭಿವೃದ್ಧಿಗಾಗಿ ಕೆಲಸ ಮಾಡುವುದು ನಿಜಕ್ಕೂ ಶ್ಲಾಘನೀಯ ಕಾರ್ಯ ಎಂದ್ರು.

ಸಮಾರಂಭದಲ್ಲಿ ಕಣಚೂರು ಸಂಸ್ಥೆಯ ಹತ್ತು ವರ್ಷಗಳ ಯಶಸ್ವಿ ಪಯಣದ ಬಗ್ಗೆಗಿನ ವಿಡಿಯೋಂದನ್ನು ಪ್ರದರ್ಶಿಸಲಾಯಿತು.

ಬಳಿಕ ಅಲೈಡ್ ಹೆಲ್ತ್ ಕೇರ್ ಕೌನ್ಸಿಲ್‌ನ ಅಧ್ಯಕ್ಷರಾದ ಪ್ರೊ. ಯು.ಟಿ. ಇಫ್ತಿಕಾರ್ ಆಲಿ ಫರೀದ್ ಮಾತನಾಡಿ, ಆರೋಗ್ಯ ಸೇವಾ ಕ್ಷೇತ್ರದಲ್ಲಿ ದೇಹಭಾಷೆ ಮತ್ತು ವೃತ್ತಿಪರ ಮನೋಭಾವ ಅತ್ಯಂತ ಮುಖ್ಯ. ಮಾತು ಮಾತ್ರವಲ್ಲ, ನಮ್ಮ ನಡೆ–ನುಡಿ, ರೋಗಿಯೊಂದಿಗೆ ನಡೆಸುವ ವರ್ತನೆ ಅವರ ವಿಶ್ವಾಸವನ್ನು ಗೆಲ್ಲುತ್ತದೆ. ವೈದ್ಯಕೀಯ ವೃತ್ತಿಯಲ್ಲಿ ಗೌರವವು ಪದವಿ ಅಥವಾ ಹುದ್ದೆಯಿಂದ ಅಲ್ಲ, ನಮ್ಮ ಕಾರ್ಯಕ್ಷಮತೆ ಮತ್ತು ಸೇವೆಯಿಂದಲೇ ದೊರೆಯುತ್ತದೆ ಎಂದರು.

ಅಧ್ಯಕ್ಷತೆಯನ್ನು ಕಣಚೂರು ಇಸ್ಲಾಮಿಕ್ ಎಜ್ಯುಕೇಷನ್ ಟ್ರಸ್ಟ್ನ ಚೇರ್‌ಮೆನ್ ಯು.ಕಣಚೂರು ಮೋನು ಅಧ್ಯಕ್ಷತೆ ವಹಿಸಿದ್ದರು.

ಕಣಚೂರು ಸಂಸ್ಥೆಯ ಗೌರವ ಸಲಹೆಗಾರರಾದ ಡಾ.ಮೊಹಮ್ಮದ್ ಇಸ್ಮಾಯಿಲ್ ಹೆಜಮಾಡಿ, ಡಾ.ಎಂ. ವೆಂಕಟ್ರಾಯ ಪ್ರಭು, ವೈದ್ಯಕೀಯ ಅಧೀಕ್ಷಕ ಡಾ.ಅಂಜನ್, ಆಡಳಿತಾಧಿಕಾರಿ ಡಾ.ರೋಹನ್ ಮೋನಿಸ್, ಕಣಚೂರು ಆರೋಗ್ಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಅಬ್ದುಲ್ ರೆಹಮಾನ್, ವೈದ್ಯಕೀಯ ಕಾಲೇಜು ಡೀನ್ ಡಾ. ಶಹನವಾಝ್ ಮಾಣಿಪ್ಪಾಡಿ, ಡಾ ದೀಪಿಕಾ ಕಾಮತ್ ಉಪಸ್ಥಿತರಿದ್ದರು.

### ಬಿಜೆಪಿ ಮುಖಂಡ ರವೀಂದ್ರ ಶೆಟ್ಟಿ ಉಳಿದೊಟ್ಟು ಮುಂದಾಳತ್ವ

# ನಿಗದಿತ ಸಮಯದೊಳಗೆ ನಡೆದ ಕೋಳಿ ಅಂಕ



**ಉಳ್ಳಾಲ:** ಉಳ್ಳಾಲ ತಾಲೂಕಿನ ಹರೇಕಳ ಕುತ್ತಿಮುಗೇರು ಜಾತ್ರೆ ಪ್ರಯುಕ್ತ ಅನಾದಿಕಾಲದಿಂದಲೂ ಸಾಂಪ್ರಾದಾಯಿಕ ಶೈಲಿಯಲ್ಲಿ ಕೋಳಿ ಅಂಕ ನಡೆದು–ಕೊಂಡು ಬಂದಿದೆ. ಆದರೆ ಈ ಬಾರಿ ಕಾನೂನು ನಿಬಂಧನೆಗಳ ನಡುವೆಯು ಪೊಲೀಸ್ ಆಯುಕ್ತರು ನೀಡಿದ ನಿಗದಿತ ಸಮಯದೊಳಗೆ ಯಾವುದೇ ಜೂಜು ಇಲ್ಲದೆ ಕೋಳಿ ಅಂಕವು ಬಿಜೆಪಿ ಮುಖಂಡರಾದ ರವೀಂದ್ರ ಶೆಟ್ಟಿ ಉಳಿದೊಟ್ಟು ಅವರ ಮುಂದಾಳತ್ವದಲ್ಲಿ ಸರಾಗವಾಗಿ ಯಶಸ್ವಿಗೊಂಡಿದೆ. ಕರಾವಳಿಗರ ಕೋಳಿ ಅಂಕವನ್ನು ಸಾಂಪ್ರಾದಾಯಿಕ ಹಿನ್ನಲೆಯಲ್ಲಿ ನೋಡುತ್ತಾರೆ. ತುಳುನಾಡಿನಲ್ಲಿ ಆರಾಧಿಸಲಾಗುವ ಪ್ರತಿಯೊಂದು ದೈವಕ್ಕೆ ಸಂಬಂಧಪಟ್ಟ ದೈವಸ್ಥಾನದಲ್ಲೂ ಕೋಳಿ ಅಂಕ ಮಾಡೋದು ಕಡ್ಡಾಯ ಎನ್ನುವ ಅಲಿಖಿತ ನಂಬಿಕೆ ಇದೆ. ಆದ–ರೆ ರಾಜ್ಯಸರಕಾದ ಕಾನೂನಿಂದ ಸಾಂಪ್ರಾದಾಯಕ್ಕೆ ಕುತ್ತು ಬಂದಿದೆ. ಇದರಿಂದ ಆಕ್ರೋಶ ವ್ಯಕ್ತವಾದ ಹಿನ್ನಲೆ ಕೇವಲ ಗಂಟೆಗಳ ಸಮಯದಲ್ಲಿ ಸಾಂಪ್ರಾದಾಯಿಕ ಕೋಳಿ ಅಂಕಕ್ಕೆ ಮಾತ್ರ ಅವಕಾಶವನ್ನು ನೀಡಲಾಗುತ್ತಿದೆ. ಅಂತೆಯೇ ನಿಗದಿತ ಸಮಯದಲ್ಲಿ ಕುತ್ತಿಮುಗೇರು ಜಾತ್ರೆಯ ಹಿನ್ನಲೆ ಕೋಳಿ ಅಂಕ ನಡೆಯಿತು. ಪೊಲೀಸ್ ಆಯುಕ್ತರು ನೀಡಿದ ಗಡುವಿನೊಳಗೆ ಕೋಳಿ ಅಂಕ ಮುಗಿಸುವುದರ ಹಿಂದೆ ಬೆಂಬಲವಾಗಿ ಕೆ.ರವೀಂದ್ರ ಶೆಟ್ಟಿ ಉಳಿದೊಟ್ಟು ನಿಂತಿದ್ದರು. ಅರೆಅಲೆಮಾರಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷರಾದ ರವೀಂದ್ರ ಶೆಟ್ಟಿ ಉಳಿದೊಟ್ಟು ಅವರು ಈ ಹಿಂದೆ ಕರಾವಳಿಗರ ಅಸ್ಮಿತೆಗೆ ಧ–ಕ್ಕೆ ಬಂದಾಗ ಅವರ ಬೆಂಬಲಕ್ಕೆ ಸದಾ ಮುಂಚೂಣಿಯಲ್ಲಿದ್ದವರು. ಅದಲ್ಲದೇ ದೇರಳಕಟ್ಟೆಯ ವಿದ್ಯಾರತ್ನ ಆಂಗ್ಲಮಾಧ್ಯಮ ಶಾಲೆಯ ಸಂಚಾಲಕರಾಗಿರುವ ಇವರು ಗ್ರಾಮೀಣ ಪ್ರದೇಶದ ಬಡಮಕ್ಕಳಿಗೆ ರಿಯಾಯಿತಿ ಶುಲ್ಕದಲ್ಲಿ ಶಿಕ್ಷಣ ನೀಡುವುದು ಜೊತೆಗೆ ಅಶಕ್ತರಿಗೆ ಉಚಿತ ಶಿಕ್ಷಣವನ್ನೂ ನೀಡುತ್ತಿದ್ದಾ–ರೆ. ಸ್ಥಳೀಯ ಸಮಸ್ಯೆಗಳನ್ನು ಆಲಿಸಿ, ಅದನ್ನು ಅವರ ಚೌಕಟ್ಟಿನೊಳಗೆ ಪರಿಹರಿಸುವ ಮೂಲಕ ಜನರ ಪ್ರೀತಿಯನ್ನು ಗಳಿಸಿಕೊಂಡಿದ್ದಾರೆ. ಇದೀಗ ಇತಿಹಾಸ ಪ್ರಸಿದ್ಧ ಮಂಗಳೂರು ಉಳ್ಳಾಲ ಹರೇಕಳ ಕುತ್ತಿಮುಗೇರು ಜಾತ್ರೆ ಪ್ರಯುಕ್ತ ಅನಾದಿ ಕಾಲದಿಂದ ನಡೆದು ಬಂದ ಸಾಂಪ್ರದಾಯಿಕ ಕೋಳಿ ಅಂಕ ಯಾವುದೇ ಜೂಜು ಇಲ್ಲದೆ ನಿಗದಿತ ಸಮಯದೊಳಗೆ ಅಂಕ ನಡೆಯವ ನಿಟ್ಟಿನಲ್ಲಿ ಸ್ಥಳದಲ್ಲೇ ರವೀಂದ್ರ ಶೆಟಿ ಉಳಿದೊಟ್ಟು ಇದ್ದುಕೊಂಡು ಯಶಸ್ವಿಯಾಗಲು ಸಹಕರಿಸಿದ್ದಾರೆ.

# ಭಕ್ತಿ ಪ್ರಧಾನ 'ಹೇ ಸಾಯಿನಾಥ' ಅಲ್ಬಮ್ ಸಾಂಗ್ ರಿಲೀಸ್...!



**ಮಾಡೂರು;** ಮಾಡೂರು ಶಿರ್ಡಿ ಸಾಯಿ ಬಾಬಾ ಮಂದಿರದಲ್ಲಿ "ಹೇ ಸಾಯಿನಾಥ" ಎಂಬ ಕನ್ನಡ ಭಕ್ತಿಪ್ರಧಾನ ಗೀತೆ ಬಿಡುಗಡೆಗೊಂಡಿದೆ. ತೃಪ್ತಿ ಉಚ್ಚಿಲ ಅವರ ಕಂಠಸಿರಿಯಲ್ಲಿ ಹಾಡು ಮೂಡಿ ಬಂದಿದ್ದು, ಸತ್ಯನಾರಾಯಣ್ ಐಲ್ ಸಂಗೀತ ಸಂಯೋಜನೆ ಮಾಡಿದ್ದಾರೆ. ನವೀನ್ ಬೆಲ್ಚಡ ಅಡ್ಕ ಅವರ ಸಾಹಿತ್ಯವಿದ್ದು, ಬತು ಕುಳಾಲ್ ಅವರ ಕೈಚಳಕದಲ್ಲಿ ಸುಮಧುರ ಗೀತೆ ನಿರ್ಮಾಣಗೊಂಡಿದೆ. ಮಂದಿರದ ಅರ್ಚಕರಾದ ಎನ್ ವಿಶ್ವನಾಥ ಶಾಂತಿ ಭಟ್ ಅವರು ಭಕ್ತಿಗೀತೆ ರಚನೆಯ ಬಗ್ಗೆ ಮತನಾಡಿದ್ದಾರೆ. ಇದೇ ವೇಳೆ ಕೆ ಟಿ ಸುವರ್ಣ ಅವರು ಮಾತನಾಡಿ, ಒಂದೊಳ್ಳೆಯ ಸಾಹಿತ್ಯ, ಸಂಗೀತದ ಜೊತೆ ಸಾಯಿನಾಥರ ಭಕ್ತಿಗೀತೆ ಚೆನ್ನಾಗಿ ಮೂಡಿಬಂದಿದೆ. ಇಂತಹ ಹಲವು ಹಾಡುಗಳನ್ನು ರಚಿಸುವಂತಾಗಲಿ ಎಂದು ಹಾರೈಸಿದ್ರು. ಇನ್ನು ಈ ಭಕ್ತಿಗೀತೆ ತೃಪ್ತಿ ಉಚ್ಚಿಲ್ ಯೂಟ್ಯುಬ್ ಚಾನಲ್‌ನಲ್ಲಿ ಲಭ್ಯವಿದೆ. ಇದೇ ಸಂದರ್ಭ ಗಾಯಕಿ ತೃಪ್ತಿ ಉಚ್ಚಿಲ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭ ಮಂದಿರದ ಸಮಿತಿ ಪದಾಧಿಕಾರಿಗಳು, ಸದಸ್ಯರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಶ್ರೀ ಶ್ರೀ ನಿತಿನ್ ನರೇಂದ್ರನಾಥ ಯೋಗೇಶ್ವರೇಶ್ವರ ಸ್ವಾಮಿ ಮಠಾಧಿಪತಿಗಳು, ಶ್ರೀ ಗುರುಪರಾಶಕ್ತಿ ಮಠ ಮರಕಡ

↗ 1ನೇ ಪುಟದಿಂದ

ದ'ೀವ'ಚ'ೖತ'ನ'್ಯಗ'ಳ'ು ಪ್ರಕಟಗೊಂಡು ಪ್ರಕ್ರಿಯೆಗಳ ಮೂಲಕ ನೀಡಿದ ದೇವನುಡಿ,ಪರಮಪೂಜ್ಯಮಹಾಸ್ವಾಮಿಯವರು ತನ್ನ ವ್ಯಕ್ತಿ ವಿಶೇಷಿತ ಕ್ರಿಯೆಯ ಮೂಲಕ ತನ್ನೊಳಗೆ ಅಂತರ್ಗತವಾಗಿದ್ದ ಚೈತನ್ಯವನ್ನು ಶಕ್ತಿಪಾತದ ಮೂಲಕ ಪ್ರವಹಿಸಿದ ಚಿಂತನ, ಅಷ್ಟಮಂಗಲ ಪ್ರಶ್ನಾಚಿಂತನಗಳಲ್ಲಿ ಸೂಚಿತವಾದ ದೇವ ನಿರ್ದೇಶನಗಳಿಂದ ಪರಂಪರಾಗತ ಉತ್ತರಾಧಿಕಾರತ್ವ ಪೂರ್ವ ನಿರ್ಧರಿತವಾಗಿತ್ತು.

2004ರಲ್ಲಿ ದೇವಪ್ರಕ್ರಿಯೆಯ ಚಿಂತನದಲ್ಲಿ ಗೋರಕ್ಷನಾಥ, ಚೌರಂಗಿನಾಥ, ವೈಷ್ಣವೀ ಶಕ್ತಿಗಳು ನಡೆಯಲ್ಲಿ ಬಂದು ಶ್ರೀ ನಿತಿನ್ ಕೋಟೆಕಾರ್ ಅವರಿಗೆ ಪಟ್ಟಾಭಿಷೇಕ ಮಾಡಿದ್ದು, 2021 ಡಿಸೆಂಬರ್ 6ರಿಂದ 2022 ಜನವರಿ 24ರ ವರೆಗೆ ಪರಮಪೂಜ್ಯ ಮಹಾಸ್ವಾಮಿಯವರು ನಿರಂತರ ತೀರ್ಥಸ್ಥಾನ ಮುಖೇನ ಶಕ್ತಿಪಾತ ಆಗಿಸಿ 'ನೀನು ಮುಂದೆ ನಿಂತು ಕೊಂಡೊಯ್ಯಬೇಕು' ಎಂದು ಸೂಚಿಸಿದ್ದು. ವಿವಿಧ ಅಷ್ಟಮಂಗಲ ಪ್ರಶ್ನಾ ಚಿಂತನಗಳಲ್ಲಿ ಅನಾದಿಕಾಲದಿಂದ ಸೃಷ್ಟಿಸಲ್ಪಟ್ಟು ಒಂದು ಹಂತದಲ್ಲಿ ಗುಪ್ತಗಾಮಿನಿಯಂತೆ ಮರೆಯಾಗಿ ಪ್ರಸ್ತುತ ಪರಮಪೂಜ್ಯರಿಂದ ಮತ್ತೆ ಉದಯಿಸಿ, ಮುಂದೆ ಪರಂಪರಾಗತ ಪುತ್ರ ಪೌತ್ರ... ಹೀಗೆ ಮುಂದುವರೆಯಲಿದೆ. ಸಂಸಾರಿಯಾಗಿ ರಾಜರ್ಷಿಯಂತೆ ಮುಂದೊತ್ತುವ ಕಾರ್ಯ ಇಲ್ಲಿನ ಮೂಲ ಸಂಪ್ರದಾಯ ಅದನ್ನು ಪಾಲಿಸಿಕೊಂಡು ಬರಬೇಕು ಎಂದು ಹೇಳಿರುವುದು. ಇವೆಲ್ಲ ನಿರ್ದೇಶನಗಳ ಪರಿಣಾಮ ತನ್ನ ಘನವೃತ್ತಿಯನ್ನು ತೊರೆದು ದೇವಕೈಂಕರ್ಯದಲ್ಲಿ ಶ್ರೀ ನಿತಿನ್ ಕೋ–ಟೆಕಾರ್ ಅವರು ಮುಂದುವರೆಯಬೇಕಾಗಿ ಬಂತು.

ಮಹಾಸ್ವಾಮಿಯವರ ಮಹಾಸಂಕಲ್ಪದಂತೆ ಪೂಜನೀಯ ಮಾತೆ ಶ್ರೀಮತಿ ಶಕುಂತಲಾ ಅಮ್ಮನವರು 6–4–2022 ರಂದು ನೂತನ ಮಠಾಧಿಪತಿಗಳಿಗೆ 'ಶ್ರೀ ಶ್ರೀ ನಿತಿನ್ ನರೇಂದ್ರನಾಥ ಯೋಗೇಶ್ವರೇಶ್ವರ ಸ್ವಾಮಿ' ಎಂಬ ಸುನಾಮಧೇಯವನ್ನು ಘೋಷಿಸಿ ಪಟ್ಟಾಭಿಷೇಕ ಮಾಡಿದರು. ಅಂದಿನಿಂದ ಶ್ರೀ ಮಠದ ಬಹು ಕಾರ್ಯಭಾರತ್ವವನ್ನು ತನ್ನ ಹೆಗಲಿಗೇರಿಸಿಕೊಂಡು ವಿಸ್ತೃತ ಕೇಂದ್ರಗಳಾದ ಮಡ್ಯಾರು ಶ್ರೀ ಪರಾಶಕ್ತಿ ಕ್ಷೇತ್ರ,ದೇವರ ಅರಮನೆ ಕೋಟೆಕಾರ್ ಅಲ್ಲದೆ ನಾಡಿನಾದ್ಯಂತ ಇರುವ ಅಪಾರ ಭಕ್ತ ಸಂದೋಹವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಪೂಜ್ಯರು ನಿರ್ವಹಿಸುತ್ತಿದ್ದಾರೆ.

ತಮ್ಮಪೂರ್ವಾಶ್ರಮದಲ್ಲಿಕಂಪ್ಯೂಟರ್ ಇಂಜಿನಿಯರ್ ಪದವೀಧರರಾಗಿದ್ದು, ಮುಂದೆ ದೇಶದ ಅತ್ಯುನ್ನತ ವೈಜ್ಞಾನಿಕ ಸಂಸ್ಥೆಯಾದ ಬೆಂಗಳೂರಿನ ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್‌ನಲ್ಲಿ, ತಂತ್ರಾಂಶ ರಕ್ಷಣಾವಲಯದಲ್ಲಿ ಸೈಬರ್ ಸೆಕ್ಯೂರಿಟಿ ಹಾಗೂ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ವಿಭಾಗದಲ್ಲಿ ಪರಿಣಿತರಾಗಿ, ಎರಡು ದಶಕಗಳ ಕಾರ್ಯಾವಧಿಯಲ್ಲಿ ಜಗದ್‌ವಿಖ್ಯಾತ ಬಹುರಾಷ್ಟ್ರೀಯ ಸಂಸ್ಥೆಗಳಾದ Qualcomm Intel, ಮುಂತಾದ ಸಂಸ್ಥೆಗಳಲ್ಲಿ ತಂತ್ರಾಂಶ ರಕ್ಷಣಾವಲಯದಲ್ಲಿ ಉನ್ನತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದವರು.

ತನ್ನ ಧರ್ಮಪತ್ನಿ ಪೂಜನೀಯ ದೀಪಶ್ರೀ ಅಮ್ಮನವರೊಂದಿಗೆ ಪೂಜನೀಯ ಮಾತೆಯವರ ಮಾರ್ಗದರ್ಶನದಲ್ಲಿ ಶ್ರೀ ಮಠವನ್ನು ಮುನ್ನಡೆಸುತ್ತಿದ್ದಾರೆ.ಸಹೋದರಿಯರಾದ ಶ್ರೀಮತಿ ಶೀತಲ್ ಕೋ–ಟೆಕಾರ್, ಪತಿ ವಿಶಾಲ್ ರಾವ್, ಶ್ರೀಮತಿ ಕಾವ್ಯಶ್ರೀ ಕೋಟೆಕಾರ್, ಪತಿ ಸನತ್ ಕೋಟೆ, ಪುತ್ರ ಪ್ರಣವ್ ಕೋಟೆಕಾರ್,ಪುತ್ರಿ ಪ್ರಕೃತಿ ಕೋಟೆಕಾರ್, ಅಳಿಯ ಗಗನ್ ದೀಪ್ ಚಿತ್ತಾರಿ ಪೂಜ್ಯರ ಕೈಂಕರ್ಯದೊಳಗೆ ತಮ್ಮನ್ನು ಅಹರ್ನಿಶಿ ಸಮರ್ಪಿಸಿಕೊಂಡಿದ್ದಾರೆ.

ಪರಮಪೂಜ್ಯ ಮಹಾಸ್ವಾಮಿಯವರ ಆಶಯಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ, ಕಳೆದ ನಾಲ್ಕು ವರುಷಗಳಿಂದ ಪೂಜ್ಯ ಶ್ರೀ ಶ್ರೀ ನಿತಿನ್ ನರೇಂದ್ರನಾಥ ಯೋಗೇಶ್ವರೇಶ್ವರ ಸ್ವಾಮಿಯವರು ನಿರಂತರ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.ವೈಜ್ಞಾನಿಕ, ತಾಂತ್ರಿಕ, ಮಾನವಿಕ ಹೀಗೆ ಎಲ್ಲಾ ವಿಭಾಗಗಳಲ್ಲಿ ಆಗ ತಾನೇ ಹೆಜ್ಜೆಯಿರಿಸಿದ ಯುವ ಸಮೂಹವನ್ನು ತನ್ನೊಂದಿಗೆ ಸೇರಿಸಿ, ಸತತ ಮಾರ್ಗದರ್ಶನವನ್ನು ನೀಡಿ ಅವರನ್ನು ಆಯಾಯ ಕ್ಷೇತ್ರಗಳಲ್ಲಿ ಕುಶಲ ಕರ್ಮಿಗಳನ್ನಾಗಿಸಿ, ಪರಿಪೂರ್ಣ ಕಾಯಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡಿದ್ದಾರೆ.ವೈದ್ಯರು, ಇಂಜಿನಿಯರ್ ಗಳು,ಕಲಾ ಕುಶಲಿಗಳು ಆಡಳಿತಾತ್ಮಕ ಕಾರ್ಯಭಾರ ಉಳ್ಳವರು, ವ್ಯವಹಾರ ನಿಪುಣರು,ಕಲೆ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳ ಪ್ರತಿಭಾವಂತರು ಹೀಗೆ ಹತ್ತು ಹಲವು ಯುವ ಮುಖಗಳ ಅರ್ಪಣಾ ಮನೋಭಾವದ ಸೇವೆಯ ಪ್ರತಿಫಲನವನ್ನು ನಾವಿಲ್ಲಿ ಕಾಣಬಹುದಾಗಿದೆ.

ಪರಮಪೂಜ್ಯ ಮಹಾಸ್ವಾಮಿಯವರು ತಮ್ಮ ಜೀವಿತಾವಧಿಯಲ್ಲಿ ತಾವು ಕೈಗೆತ್ತಿಗೊಂಡಿದ್ದ ಬಹುತೇಕ ಕಾರ್ಯಯೋಜನೆಗಳನ್ನು ಸಾಕಾರಗೊಳಿಸಿದ್ದರೂ ಇನ್ನು ಅನೇಕ ಮಹತ್ತರವಾದ ಕಾರ್ಯಗಳ ಪೂರೈಕೆಯನ್ನು ತನ್ನ ಪರಂಪರೆಗೆ ಬಿಟ್ಟು ಹೋಗಿದ್ದಾರೆ.ದೇಹಭಾವದೊಳಗೆ ನಾನಿಲ್ಲದಿದ್ದರೂ ಆತ್ಮಭಾವದೊಳಗೆ ನಿಂತುಪರಂಪರೆಯ ಮೂಲಕವೇ ಈ ಕಾರ್ಯವನ್ನು ಮಾಡುವೆ ಎಂಬ ನುಡಿ ಸಂದೇಶವನ್ನೂ ನೀಡಿದ್ದರು.ಇಂದು ಪೂಜನೀಯ ಮಾತೆಯವರ ಮಾರ್ಗದರ್ಶನದಲ್ಲಿ ಪೂಜ್ಯ ಶ್ರೀ ಶ್ರೀ ನಿತಿನ್ ನರೇಂದ್ರನಾಥ ಯೋಗೇಶ್ವರೇಶ್ವರ ಸ್ವಾಮಿಯವರು ಅದನ್ನು ಹಂತಹಂತವಾಗಿ ಪೂರ್ಣತೆಯತ್ತ ತರುವ ಕೆಲಸ ಮಾಡುತ್ತಿದ್ದಾರೆ.

ಪರಮಪೂಜ್ಯ ಮಹಾಸ್ವಾಮಿಯವರ ಮಹಾಸಾನ್ನಿಧ್ಯ ನೆಲೆನಿಂತ ತಾಣವಾದ ಮಡ್ಯಾರಿನಲ್ಲಿ ಶ್ರೀ ಮಹಾಸಾಮ್ರಾಜ್ಞಿ ಅರಮನೆ ರಮ್ಯಯುತವೂ ಚಿತ್ರಯುತವೂ ಆಗಿ ಕಂಗೊಳಿಸುತ್ತಿದೆ.ಪೂಜ್ಯ ಸ್ವಾಮಿಯವರ ಕರ್ತೃತ್ವ ಶಕ್ತಿಯ ದರ್ಶನ ನಮಗಿಲ್ಲಿ ಆಗುತ್ತಿದೆ.ಪೂಜನೀಯ ಮಾತೆಯವರು ಮತ್ತು ಪೂಜ್ಯ ಸ್ವಾಮಿಯವರು 2025 ಎಪ್ರಿಲ್ 30ರಂದು ಅರಮನೆಯ ಪ್ರವೇಶೋತ್ಸವವನ್ನು ಸಕಲ ರಾಜಸಂಪ್ರದಾಯಗಳೊಂದಿಗೆ ನೆರವೇರಿಸಿದರು.

ಪೂಜ್ಯರ ಮನೋಪರಿಕಲ್ಪನೆಯಂತೆ ಅತ್ಯಪೂರ್ವವಾಗಿ ನಿರ್ಮಾಣ ಗೊಂಡಿರುವ ಇಲ್ಲಿನ ತೀರ್ಥಬಾವಿ ಅಮೃತಶಿಲೆಯ ವಿಶಿಷ್ಟ ಕಲಾಕೃತಿಗಳಿಂದ ಶೋಭಿತವಾಗಿದೆ. ಬಾವಿಯ ಒಳ ಆವರಣ ಕರ್ನಾಟಕದಲ್ಲೇ ಪ್ರಪ್ರಥಮ ಎನಿಸಿದ ಆವೆಮಣ್ಣಿನ ವೃತ್ತದಿಂದ ರಚನೆಗೊಂಡಿದೆ. ತೀರ್ಥಜಲವನ್ನು ಪಡೆಕೊಳ್ಳಲೆಂದು ನಿರ್ಮಾಣ ಮಾಡಿದ ಅಮೃತಮಯ ಶಿಲಾಸ್ತಂಭ "ಧರ್ಮಧ್ವಜದ" ಸಂಕೇತವಾಗಿದ್ದು, ಪೂಜ್ಯರು ತೀರ್ಥಬಾವಿಗೆ "ಪಾವನಗಂಗಾ" ಎಂಬ ಅಭಿಧಾನವನ್ನು ನೀಡಿದ್ದಾರೆ.

ಭಾವುಕ ಜನಸಮೂಹದ ಕಂಗಳಿಗೆ ಆನಂದವನ್ನು ನೀಡುವ, ಹೃದಯಗಳಿಗೆ ತಂಪನೆರೆಯುವ ಅಮೃತಶಿಲೆಯ ಚಿತ್ರಚಿತ್ತಾರದ ಸ್ಪರ್ಶದೊಂದಿಗೆ ಅಮೃತಕಿರಣದ ಹೊನಲ ಸೂಸುವಂತೆ ಶ್ರೀ ಮಹಾಸಾಮ್ರಾಜ್ಞಿ ಅರಮನೆಯನ್ನು ಪೂಜ್ಯರು ಪರಿಪೂರ್ಣಗೊಳಿಸಿದ್ದಾರೆ.ತಾಯಿ ಪೀಠಸ್ಥಳಾಗುವ ಶ್ರೀ ಶ್ವೇತಭದ್ರಾಸನ, ಒಡ್ಡೋಲಗ ಮಂಟಪದಲ್ಲಿ ಶ್ರೀ ಮಹಾಸಾಮ್ರಾಟ ಆಸನಸ್ಥನಾಗುವ ರಾಜಪೀಠ ಇವೆಲ್ಲವೂ ಅತ್ಯದ್ಭುತ ಕಲಾಕೃತಿಗಳಾಗಿ ರಾಜ ಗಾಂಭೀರ್ಯವನ್ನು ಪಡಕೊಂಡಿದೆ.

ಶ್ರೀ ಪರಾಶಕ್ತಿ ಕ್ಷೇತ್ರಕ್ಕೆ ನವರೂಪವನ್ನು ಕೊಡುವಂತಹ ಕಾರ್ಯವನ್ನು ಪೂಜ್ಯರು ಮುಂದುವರಿಸಿದ್ದಾರೆ. ಕಾಲಮಾನದ ದುರಿತಗಳನ್ನು ಕಳಚಿ ಚೈತನ್ಯಗಳನ್ನು ಶುದ್ಧೀಕರಿಸುವ ನಿರಂತರ ಕ್ರಿಯೆಯನ್ನು ಅವರು ಮಾಡುತ್ತಿದ್ದಾರೆ. ಪರಮಪೂಜ್ಯ ಮಹಾಸ್ವಾಮಿಯವರು ಪೂರ್ಣತೆಗೆ ತಂದ ಶ್ರೀ ಆದಿನಾರಾಯಣ ಸ್ವಾಮಿ ದೇಗುಲ,ಶ್ರೀ ಕ್ಷೇತ್ರ ಮರಕಡದ ದೇವಾಲಯ, ಕಡೆಕಾರು ಗುರುವನ ಶ್ರೀ ದುರ್ಗಾಕ್ಷೇತ್ರದ ಶ್ರೀ ರೇಣುಕಾತೀರ್ಥ ಎಲ್ಲವೂ ಪರಿಪೂರ್ಣತೆಗೆ ಬರುವ ಮಹತ್ಕಾರ್ಯ ಪೂಜ್ಯರಿಂದ ಆಗುತ್ತಿದೆ. ಪರಮಪೂಜ್ಯ ಮಹಾಸ್ವಾಮಿಯವರ ಮಹಾಸಾನ್ನಿಧ್ಯವೂ ಪೂಜ್ಯರ ಮನೋಪರಿಕಲ್ಪನೆಯಂತೆ ರೂಪ ಪಡಕೊಳ್ಳುವ ಕಾಲ ಸನ್ನಿಹಿತವಾಗಿದೆ.

ಶ್ರೀ ಕ್ಷೇತ್ರದ ಮಹತ್ತರ ಪರಿಕಲ್ಪನೆಯಾದ ವಿಶ್ವಮಾನವತೆಯೊಂದಿಗೆ ವಿಶ್ವ ಕುಟುಂಬಿಗಳಾಗಿ ಬದುಕುವ ತತ್ವ ಪೂಜ್ಯರಿಂದ ವಿಸ್ತಾರಗೊಳ್ಳುತ್ತಿದೆ.ಇಲ್ಲಿ ನಿತ್ಯಾನ್ನದಾನ ಸಹಭೋಜನದ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ.ರಕ್ತದಾನ,ವೈದ್ಯಕೀಯ ಸೇವೆ, ಮಾನಸಿಕ ನೆಮ್ಮದಿಗಾಗಿ ಆಧ್ಯಾತ್ಮಿಕ ಚಿಂತನ, ಪ್ರಕೃತಿ ಪ್ರೇಮ, ಗೋಸಂರಕ್ಷಣೆ,ಕಲೆ ಸಾಹಿತ್ಯ ಸಂಸ್ಕೃತಿಗಳಿಗೆ ಪ್ರೋತ್ಸಾಹ,ಪ್ರತಿಭಾಪುರಸ್ಕಾರ,ಉನ್ನತಶಿಕ್ಷಣದ ಸಾಧನೆಗೆ ಗೌರವ ಹೀಗೆ ಹತ್ತು ಹಲವು ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ನಿತ್ಯ ಚಟುವಟಿಕೆ ನಡೆಯುತ್ತಿದೆ. ಇಲ್ಲಿನ ಪ್ರತಿಯೊಂದು ಕೆಲಸ ಕಾರ್ಯಗಳಲ್ಲಿ ಅರ್ಹ ಮಾನವ ಸಂಪನ್ಮೂಲವನ್ನು ಬಳಸಿಕೊಂಡು ಅರ್ಪಣಾ ಮನೋಭಾವದ ಕುಶಲ ಕರ್ಮಿಗಳ ದಂಡೊಂದನ್ನು ಕಟ್ಟುವ ಕೆಲಸ ಪೂಜ್ಯರು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

ನವಮನ್ವಂತರದ ಆಶಯಕ್ಕನುಗುಣವಾಗಿ ಪರಿಶುದ್ಧ ಜನಮಾನಸವನ್ನು ಸಜ್ಜುಗೊಳಿಸುವುದು ಮಹತ್ತರವಾದ ಕಾರ್ಯ. ಪರಮಪೂಜ್ಯ ಮಹಾಸ್ವಾಮಿಯವರ ಮೂಲತತ್ವದ ನುಡಿಸಂದೇಶಗಳಿಗೆ ಹೊಸ ಭಾಷ್ಯವೊಂದನ್ನು ಕೊಡುವ ಕಾರ್ಯ ಪೂಜ್ಯರು ಮಾಡುತ್ತಿದ್ದಾರೆ. ಸರಳತೆಯೊಳಗೆ ನಿಜ ತತ್ವವನ್ನು ಅರ್ಥೈಸಿಕೊಂಡ ಸತ್ವಯುತ ಜನಾಂಗವೊಂದು ರೂಪುಗೊಂಡು ತನ್ಮೂಲಕ ವಿಶ್ವಮಾನವತೆಯತ್ತ ಸಾಗಬೇಕೆಂಬ ಮಹತ್ತರ ಕಾಣ್ಕೆ ಅವರದು.

ಇಂದು ಶ್ರೀ ಮಠದಲ್ಲಿ ಆಧ್ಯಾತ್ಮಿಕ, ಸಾಮಾಜಿಕ ಎರಡೂ ತತ್ವಗಳ ಪಾಲನೆ ಅಂತೆಯೇ ಮುಂದುವರಿಯುತ್ತಿದೆ.ಪ್ರಾರ್ಥನೆಯೇ ಇಲ್ಲಿನ ಜೀವಾಳ.ಸೇವೆಯೇ ಇಲ್ಲಿನ ಬದುಕು, ಹಸಿದವರಿಗೆ ಉಣಬಡಿಸುವುದೇ ಇಲ್ಲಿನ ಕರ್ತವ್ಯ. ಹಸಿರೇ ಇಲ್ಲಿನ ಉಸಿರು.ಪ್ರಾಮಾಣಿಕತೆಯೇ ಇಲ್ಲಿನ ಸತ್ಯ.ಪರಂಪರೆಯ ಉಳಿವೇ ಇಲ್ಲಿನ ಧರ್ಮ. ವಸುಧೈವ ಕುಟುಂಬಕಂ ಎಂಬುದೇ ಇಲ್ಲಿನ ನಿಜ ತತ್ವ.

# 34ನೇ ವಾರ್ಷಿಕ ಸ್ವಲಾತ್ ಅಂಗವಾಗಿ ಮಾದರಿ ಮದುವೆ, ನಶೆ ಮುಕ್ತ ಸಮಾಜ ಕಾರ್ಯಾಗಾರ

**ಮಂಗಳೂರು:** ಉಳ್ಳಾಲ ತಾಲೂಕಿನ ಮೊಂಟೆಪದವು ಬದ್ರಿಯಾ ಜುಮಾ ಮಸ್ಜಿದ್ ಇದರ 34ನೇ ವಾರ್ಷಿಕ ಸ್ವಲಾತ್ ಅಂಗವಾಗಿ ಮಾದರಿ ಮದುವೆ ಮತ್ತು ನಶೆ ಮುಕ್ತ ಸಮಾಜ ಕಾರ್ಯಾಗಾರ ನಡೆಯಿತು.

ಮೂರು ದಿನಗಳ ಕಾರ್ಯಕ್ರಮದಲ್ಲಿ ಮೊದಲನೇ ದಿನ ನಶೆ ಮುಕ್ತ ಸಮಾಜ ಎಂಬ ವಿಷಯದಲ್ಲಿ ವಿಶೇಷ ಕಾರ್ಯಾಗಾರವನ್ನು ಇಕ್ಬಾಲ್ ಬಾಳಿಲ ನಡೆಸಿಕೊಟ್ಟರು.

ಮಕ್ಕಳ ಬಗ್ಗೆ ತಂದೆ ತಾಯಿಗಳ ಜವಾಬ್ದಾರಿ ಮತ್ತು ಮಕ್ಕಳು ಸುಲಭವಾಗಿ ಪೆಡ್ಲರ್‌ಗಳಿಗೆ ಬಲಿಯಾಗುವುದರ ಬಗ್ಗೆ ವಿವರಿಸಿದರು. ಧಾರ್ಮಿಕ ಉಪನ್ಯಾಸ ವೇದಿಕೆಯಲ್ಲಿ ಕಾಲದ ಬೇಡಿಕೆಗೆ ಅನುಗುಣವಾಗಿ ಇಂತಹ ಕಾರ್ಯಕ್ರಮವನ್ನು ಸಂಘಟಿಸಿದ್ದಕ್ಕೆ ಇದೊಂದು ಮಾದರಿ ಹೆಜ್ಜೆ ಎಂದು ಜಮಾಅತ್ ಆಡಳಿತ ಸಮಿತಿಯನ್ನು



ಶ್ಲಾಘಿಸಿದರು. ಇನ್ನೋರ್ವ ಸಂಪನ್ಮೂಲ ವ್ಯಕ್ತಿ ಕೆ. ಎಂ. ಸಿದ್ದೀಕ್ ಮೊಂಟುಗೋಳಿ ಮಾತನಾಡಿ, ಮದುವೆ ಹೆಸರಲ್ಲಿ ನಡೆಯುವ ಅನಾಚಾರಗಳು ಇಸ್ಲಾಂ ಸಂಸ್ಕೃತಿ ವಿರೋಧವಾಗಿದೆ ಮತ್ತು ಸರಳ ವಿವಾಹ ಮುಂದಿನ ತಲೆಮಾರಿಗೆ ಮಾದರಿ ಮತ್ತು ಆರ್ಥಿಕ ನಿಯಂತ್ರಣ ಸಾಧಿಸಲಿದೆ ಎಂದು ತಿಳಿಸಿದರು.

- **ಮದುವೆ ಹೆಸರಲ್ಲಿ ನಡೆಯುವ ಅನಾಚಾರಗಳು ಇಸ್ಲಾಂ ಸಂಸ್ಕೃತಿ ವಿರೋಧ**
- **ಸರಳ ವಿವಾಹ ಮುಂದಿನ ತಲೆಮಾರಿಗೆ ಮಾದರಿ ಮತ್ತು ಆರ್ಥಿಕ ನಿಯಂತ್ರಣ ಸಾಧಿಸಲಿದೆ**

ಕಾರ್ಯಕ್ರಮದ ಎರಡನೇ ದಿನ ಮಂಜನಾಡಿ ಜಮಾಅತ್ ಖತೀಬ್ ಪಿ. ಎ. ಅಹ್ಮದ್ ಬಾಖವಿ ಉಚ್ಚಿಲ ಅವರು ನಶಿಸುತ್ತಿವ ಇಸ್ಲಾಮಿನ ಸಂಸ್ಕೃತಿಯನ್ನು ಕಾಪಾಡುವ ಜವಾಬ್ದಾರಿ ಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಕೊನೆಯ ದಿನ ಅಸಯ್ಯದ್ ಅಶ್ರಫ್ ತಂಙಳ್ ಅದೂರು ದುಆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮಸೀದಿ ಖತೀಬ್ ಬಹು ಸಿದ್ದೀಕ್ ಸಅದಿ ಮಿತ್ತೂರು, ಮಸೀದಿ ಅಧ್ಯಕ್ಷ ಕೆ. ಖಾದರ್ ಮಸೀದಿ ಮತ್ತು ಮದರಸದ ಎಲ್ಲಾ ಉಸ್ತಾದರುಗಳು, ಆಡಳಿತ ಮಂಡಳಿಯ ಸದಸ್ಯರು ಭಾಗವಹಿಸಿದ್ದರು.

# ಕಿನ್ಯದ ಒಲವಿನಹಳ್ಳಿಯಲ್ಲಿ ರಾಯಲ್ ಫೌಂಡೇಶನ್ ವತಿಯಿಂದ ನಮ್ಮವರ ಜೊತೆ ಒಂದು ದಿನ

**ಉಳ್ಳಾಲ:** ಕಿನ್ಯದ ಒಲವಿನಹಳ್ಳಿ ಪುನರ್ವಸತಿ ಹಾಗೂ ಸಮುದಾಯದ ಕೇಂದ್ರದಲ್ಲಿ ಉಳ್ಳಾಲ ಮುಕ್ಕಚ್ಚೇರಿಯ ರಾಯಲ್ ಫೌಂಡೇಶನ್ ವತಿಯಿಂದ ನಿರಾಶ್ರಿತರೊಂದಿಗೆ 'ನಮ್ಮವರ ಜೊತೆ ಒಂದು ದಿನ' ವಿಶೇಷ ಕಾರ್ಯಕ್ರಮವು ರವಿವಾರ ನಡೆಯಿತು.

ರಾಯಲ್ ಫೌಂಡೇಶನ್‌ನ ನೂತನ ಕಚೇರಿಯ ಉದ್ಘಾಟನೆಯ ಭಾಗವಾಗಿ ನಡೆದ ಈ ವಿಶೇಷ ಸಮಾಜ ಸೇವಾ ಮತ್ತು ಸಹವಾಸ ಕಾರ್ಯಕ್ರಮದಲ್ಲಿ ನೂರಕ್ಕೂ ಹೆಚ್ಚು ನಿರಾಶ್ರಿತ ವೃದ್ಧರು ಮತ್ತು ವಿಶೇಷಚೇತನರು ಪಾಲ್ಗೊಂಡಿದ್ದರು.

ಒಲವಿನಹಳ್ಳಿ ರಿಹ್ಯಾಬಿಲಿಟೇಶನ್ ಸೆಂಟರ್ ನಿರ್ವಾಹಕಿ ಸಿಸ್ಟರ್ ಐಲಿನ್ ಮಥಾಯಸ್ ಕಾರ್ಯಕ್ರಮ ಉದ್ಘಾಟಿಸಿದರು.

ಮಸೀದಿಯ ಇಮಾಮ್ ಕಬೀರ್ ಸಅದಿ ದುಆಗೈದರು. ಮುಖ್ಯ ಅತಿಥಿಯಾಗಿ ಉಳ್ಳಾಲ ನಗರಸಭೆಯ ಮಾಜಿ ಕೌನ್ಸಿಲರ್ ಇಬ್ರಾಹಿಂ ಖಲೀಲ್ ಭಾಗವಹಿಸಿದ್ದರು. ಫೌಂಡೇಶನ್ ಅಧ್ಯಕ್ಷ ತೌಸೀಫ್ ಅಲಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಿರಿಯ ನಾಗರಿಕರಿಗಾಗಿ



- **ಈ ವಿಶೇಷ ಸಮಾಜ ಸೇವಾ ಮತ್ತು ಸಹವಾಸ ಕಾರ್ಯಕ್ರಮದಲ್ಲಿ ನೂರಕ್ಕೂ ಹೆಚ್ಚು ನಿರಾಶ್ರಿತ ವೃದ್ಧರು ಮತ್ತು ವಿಶೇಷಚೇತನರು ಪಾಲ್ಗೊಂಡಿದ್ದರು**

ವಿಶೇಷ ಭೋಜನ ಮತ್ತು ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ಮನೋರಂಜನೆಗಾಗಿ ಆಟ–ಸ್ಪರ್ಧೆ, ಗಾಯನ ಮತ್ತು ಕುಣಿತಗಳನ್ನು ಏರ್ಪಡಿಸಲಾಗಿತ್ತು. ಸೆಂಟರ್ ನ ಹಿರಿಯ ಸಿಸ್ಟರ್ ಗಳು ಸಹ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

ಫೌಂಡೇಶನ್ನ ಪ್ರಧಾನ ಕಾರ್ಯದರ್ಶಿ ನವಾಝ್, ಉಪಾಧ್ಯಕ್ಷ ಮನ್ಸೂರ್ ಮುಕ್ಕಚ್ಚೇರಿ, ಕಾನೂನು ಸಲಹೆಗಾರ ಜಲಾಲುದ್ದೀನ್ ಉಪಸ್ಥಿತರಿದ್ದರು. ಮಂಗಳೂರ ರಿಯಾಝ್ ಕಾರ್ಯಕ್ರಮ ನಿರೂಪಿಸಿದರು. ಸಮಾರೋಪ ಕಾರ್ಯಕ್ರಮದಲ್ಲಿ ಸಾಮಾಜಿಕ ಕಾರ್ಯಕರ್ತ ಪ್ರಕಾಶ್ ಕುಂಪಲ, ಉಳ್ಳಾಲ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ದಿನೇಶ್ ರೈ ಮನ್ಸೂರ್ ಮಂಚಿಲ, ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಝಿಯಾದ್ ಮುಕ್ಕಚ್ಚೇರಿ ಪಾಲ್ಗೊಂಡಿದ್ದರು.

## ತೊಕ್ಕೊಟ್ಟು ರಸ್ತೆ ಅವ್ಯವಸ್ಥೆ ಸರಿಪಡಿಸಿರಿ

ನಾನು ದಕ್ಷಿಣ ಕನ್ನಡ ಜಿಲ್ಲೆಯ ತೊಕ್ಕೊಟ್ಟು ಪ್ರದೇಶದ ಓದುಗ ವಿದ್ಯಾರ್ಥಿನಿ. ನಿಮ್ಮ ಗೌರವಾನ್ವಿತ ಪತ್ರಿಕೆಯ ಮೂಲಕ ತೊಕ್ಕೊಟ್ಟಿನ ರಸ್ತೆ ಅವ್ಯವಸ್ಥೆಯ ಕುರಿತು ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆಯಲು ಬಯಸುತ್ತೇನೆ.

ತೊಕ್ಕೊಟ್ಟು ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾಗೂ ಎರಡೂ ಬದಿಯ ಸರ್ವಿಸ್ ರಸ್ತೆಗಳ ವ್ಯವಸ್ಥೆ ಸಂಪೂರ್ಣ ಗೊಂದಲಮಯವಾಗಿದೆ. ಯಾವುದು ಮುಖ್ಯ ರಸ್ತೆ, ಯಾವುದು ಸರ್ವಿಸ್ ರಸ್ತೆ ಎಂಬುದೇ ಸ್ಪಷ್ಟವಾಗದೆ ವಾಹನ ಚಾಲಕರು ಮತ್ತು ಪಾದಚಾರಿಗಳು ದಿನನಿತ್ಯ ತೀವ್ರ ತೊಂದರೆ ಅನುಭವಿಸುವಂತಾಗಿದೆ. ವಿಶೇಷವಾಗಿ ರಸ್ತೆ ದಾಟುವುದು ಅತ್ಯಂತ ಕಷ್ಟಕರವಾಗಿದ್ದು, ರಾಷ್ಟ್ರೀಯ ಹೆದ್ದಾರಿಯನ್ನು ದಾಟುವುದು ಪಾದಚಾರಿಗಳಿಗೆ ಅಸಾಧ್ಯ ಎನ್ನುವಂತಾಗಿದೆ.

ಓದುಗರ ಪತ್ರ

ವಿದ್ಯಾರ್ಥಿಗಳು, ವೃದ್ಧರು, ಮಹಿಳೆಯರು ಹಾಗೂ ಶಾಲಾ ಮಕ್ಕಳಿಗೆ ಇದು ಭಾರೀ ಅಪಾಯಕಾರಿಯಾಗಿದೆ. ಸೂಕ್ತ ಪಾದಚಾರಿ ಮಾರ್ಗಗಳು, ಜೀಬ್ರಾ ಕ್ರಾಸಿಂಗ್, ಸಿಗ್ನಲ್ ವ್ಯವಸ್ಥೆ ಅಥವಾ ಫುಟ್‌ಓವರ್ ಬ್ರಿಡ್ಜ್ ಇಲ್ಲದ ಕಾರಣ ಅಪಘಾತಗಳ ಭೀತಿ ಹೆಚ್ಚಾಗಿದೆ. ದಿನನಿತ್ಯ ಶಿಕ್ಷಣಕ್ಕಾಗಿ, ಕೆಲಸಕ್ಕಾಗಿ ರಸ್ತೆ ದಾಟುವ ನಮಗೆ ಇದು ನಿರಂತರ ಆತಂಕದ ವಿಷಯವಾಗಿದೆ.

ಆದ್ದರಿಂದ ಸಂಬಂಧಪಟ್ಟ ಇಲಾಖೆ ಹಾಗೂ ಆಡಳಿತ ಮಂಡಳಿ ತಕ್ಷಣವೇ ತೊಕ್ಕೊಟ್ಟು ರಸ್ತೆ ಅವ್ಯವಸ್ಥೆಯನ್ನು ಸರಿಪಡಿಸಿ, ಪಾದಚಾರಿಗಳಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಬೇಕೆಂದು ವಿನಂತಿಸುತ್ತೇನೆ. ಸಾರ್ವಜನಿಕರ, ವಿಶೇಷವಾಗಿ ವಿದ್ಯಾರ್ಥಿಗಳ ಜೀವ ರಕ್ಷಣೆಗೆ ಇದು ಅತ್ಯಗತ್ಯವಾಗಿದೆ. ಈ ವಿಷಯವನ್ನು ನಿಮ್ಮ ಪತ್ರಿಕೆಯ ಮೂಲಕ ಬೆಳಕಿಗೆ ತಂದು, ಅಧಿಕಾರಿಗಳಿಂದ ಶೀಘ್ರ ಕ್ರಮಕ್ಕೆ ನೆರವಾಗುವಂತೆ ಕೋರುತ್ತೇನೆ.

■ ಅವನಿಕಾ, ತೊಕ್ಕೊಟ್ಟು

### ಸಂಶೋಧನಾ ಹಾಗೂ ಸಾಂಸ್ಕೃತಿಕ ಸಹಯೋಗ ಮತ್ತಷ್ಟು ಬಲಪಡಿಸುವ ಉದ್ದೇಶದೊಂದಿಗೆ

# ಮಂಗಳೂರು ವಿ.ವಿ, ಬ್ಯಾರೀಸ್ ನಡುವೆ ಶೈಕ್ಷಣಿಕ ಒಪ್ಪಂದ

**ಮಂಗಳೂರು:** ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ಬ್ಯಾರೀಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (BIT) ನಡುವಿನ ಶೈಕ್ಷಣಿಕ, ಸಂಶೋಧನಾ ಹಾಗೂ ಸಾಂಸ್ಕೃತಿಕ ಸಹಯೋಗವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಶೈಕ್ಷಣಿಕ ಒಪ್ಪಂದಕ್ಕೆ (MoU) ಸಹಿ ಹಾಕಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆಯಡಿಯಲ್ಲಿ ಸ್ಥಾಪಿತವಾಗಿರುವ ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಮಂಗಳೂರಿನ ಇನೋಳಿ ಪ್ರದೇಶದಲ್ಲಿರುವ ಬ್ಯಾರೀಸ್ ನಾಲೆಡ್ಜ್ ಕ್ಯಾಂಪಸ್‌ನಲ್ಲಿ, ಬ್ಯಾರೀಸ್ ಅಕಾಡೆಮಿ ಆಫ್ ಲರ್ನಿಂಗ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬ್ಯಾರೀಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಈ ಒಪ್ಪಂದದಡಿ ಹಲವು ಶೈಕ್ಷಣಿಕ ಹಾಗೂ ವೃತ್ತಿಪರ ಉಪಕ್ರಮಗಳನ್ನು ಜಂಟಿಯಾಗಿ ಅನುಷ್ಠಾನಗೊಳಿಸಲಿವೆ. ಈ ಒಪ್ಪಂದವು ಜಾಗತಿಕ ಶೈಕ್ಷಣಿಕ ಉಪಕ್ರಮಗಳಿಗೆ ಹೊಂದಿಕೆಯಾಗಿದ್ದು, ಕರ್ನಾಟಕ ವೇಲ್ಸ್ ವಿಶ್ವವಿದ್ಯಾಲಯಗಳ ಪಾಲುದಾರಿಕೆ ಕಾರ್ಯಕ್ರಮದ ಅಡಿಯಲ್ಲಿ ಕಾರ್ಯನಿರ್ವಹಿಸುವ ಗ್ಲೋಬಲ್ ವೇಲ್ಸ್ ಪ್ರೋಗ್ರಾಂ ಸೇರಿದಂತೆ, ಕರ್ನಾಟಕ ಮತ್ತು ವೇಲ್ಸ್ ವಿಶ್ವವಿದ್ಯಾಲಯಗಳು ಹಾಗೂ ಸಂಸ್ಥೆಗಳ ನಡುವಿನ ಅಂತರರಾಷ್ಟ್ರೀಯ



ಶೈಕ್ಷಣಿಕ ಸಹಯೋಗವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಈ ಒಪ್ಪಂದದಡಿ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳು, ವೃತ್ತಿಪರ ಮತ್ತು ವಿದ್ಯಾರ್ಥಿ ವಿನಿಮಯ ಉಪಕ್ರಮಗಳು, ಜಂಟಿ ಸಂಶೋಧನಾ ಚಟುವಟಿಕೆಗಳು, ವಿಚಾರ ಸಂಕಿರಣಗಳು, ಸಮ್ಮೇಳನಗಳು, ಕಾರ್ಯಾಗಾರಗಳು ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ ಸೇರಿದಂತೆ ವ್ಯಾಪಕ ಶ್ರೇಣಿಯ ಸಹಯೋಗದ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ. ಈ ಸಹಯೋಗದ ಪ್ರಮುಖ ಅಂಶವಾಗಿ ಜವಾಬ್ದಾರಿಯುತ ಕೃತಕ ಬುದ್ಧಿಮತ್ತೆ (AI) ಕುರಿತ ಸಂಶೋಧನಾ ಕ್ಲಸ್ಟರ್ ಸ್ಥಾಪನೆಗೂ ಒಪ್ಪಂದದಲ್ಲಿ ಒತ್ತು ನೀಡಲಾಗಿದೆ. ಬೌದ್ಧಿಕ ಆಸ್ತಿ ಕಾನೂನು (intellectual property laws) ಅನ್ವಯವಾಗುವಂತೆ ಶೈಕ್ಷಣಿಕ ಸಾಮಗ್ರಿಗಳು, ಸಂಶೋಧನಾ ಪ್ರಕಟಣೆಗಳು ಹಾಗೂ ಶೈಕ್ಷಣಿಕ ಸಂಪನ್ಮೂಲಗಳ ವಿನಿಮಯಕ್ಕೂ ಈ ಒಪ್ಪಂದ ಅವಕಾಶ ಕಲ್ಪಿಸುತ್ತದೆ. ವಿದ್ಯಾರ್ಥಿಗಳಿಗಾಗಿ ಅಲ್ಪಾವಧಿಯ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದೂ ಒಪ್ಪಂದದ ಭಾಗವಾಗಿದೆ. ಈ ಸಂದರ್ಭದಲ್ಲಿ ಮಾತನಾಡಿದ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಧರ್ಮ, ಈ ಒಪ್ಪಂದದಿಂದ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಗೆ ದೀರ್ಘಕಾಲೀನ ಪ್ರಯೋಜನ ಸಿಗಲಿದೆ ಎಂದು ಹೇಳಿದರು. ಅಂತರರಾಷ್ಟ್ರೀಯ ಮಾನ್ಯತೆ, ಜಂಟಿ ಸಂಶೋಧನೆ ಹಾಗೂ ಶೈಕ್ಷಣಿಕ ಶ್ರೇಷ್ಠತೆಯತ್ತ ಹೊಸ ಅವಕಾಶಗಳು ಈ ಒಪ್ಪಂದದಿಂದ ಸೃಷ್ಟಿಯಾಗಲಿವೆ ಎಂದು ಅವರು ಅಭಿಪ್ರಾಯಪಟ್ಟರು. ಬ್ಯಾರೀಸ್ ನಾಲೆಡ್ಜ್ ಕ್ಯಾಂಪಸ್‌ನ ನಿರ್ದೇಶಕ ಡಾ. ಎಸ್. ಐ. ಮಂಜುರ್ ಬಾಷಾ, ಗುಣಮಟ್ಟದ ಶಿಕ್ಷಣ, ಸಂಶೋಧನೆ ಹಾಗೂ ಕೈಗಾರಿಕಾ–ಆಧಾರಿತ ಕಲಿಕೆಯನ್ನು ಉತ್ತೇಜಿಸುವಲ್ಲಿ ಬ್ಯಾರೀಸ್ ಸಂಸ್ಥೆಗಳ ಸಮೂಹ ನೀಡುತ್ತಿರುವ

- **ವಿದ್ಯಾರ್ಥಿಗಳಿಗಾಗಿ ಅಲ್ಪಾವಧಿಯ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದೂ ಒಪ್ಪಂದದ ಭಾಗವಾಗಿದೆ.**
- **ಅಂತರರಾಷ್ಟ್ರೀಯ ಮಾನ್ಯತೆ, ಜಂಟಿ ಸಂಶೋಧನೆ ಹಾಗೂ ಶೈಕ್ಷಣಿಕ ಶ್ರೇಷ್ಠತೆಯತ್ತ ಹೊಸ ಅವಕಾಶಗಳು ಈ ಒಪ್ಪಂದದಿಂದ ಸೃಷ್ಟಿಯಾಗಲಿವೆ**

ಕೊಡುಗೆಗಳನ್ನು ವಿವರಿಸಿದರು. ಬ್ಯಾರೀಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಂಶುಪಾಲ ಡಾ. ಕಮಲಕಣ್ಣನ್ ಸಿ, ಒಪ್ಪಂದ(MoU)ದ ಸಂಶೋಧನಾ ಅಂಶಗಳನ್ನು ವಿವರಿಸಿ, ಅಂತರಶಿಸ್ತೀಯ ಸಂಶೋಧನೆ, ನಾವೀನ್ಯತೆ ಹಾಗೂ ಸುಸ್ಥಿರ ತಾಂತ್ರಿಕ ಅಭಿವೃದ್ಧಿಯ ಅಗತ್ಯವನ್ನು ಒತ್ತಿ ಹೇಳಿದರು. ಬಿಐಟಿಯ ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಅಬ್ದುಲ್ಲಾ ಗುಬ್ಬಿ,

ಕಾರ್ಯಕ್ರಮದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್, ಕಂಪ್ಯೂಟರ್ ವಿಜ್ಞಾನ ವಿಭಾಗದ ಡೀನ್, ಎಂಬಿಎ ವಿಭಾಗದ ಡೀನ್ ಸೇರಿದಂತೆ ಎರಡೂ ಸಂಸ್ಥೆಗಳ ಹಿರಿಯ ಅಧ್ಯಾಪಕರು ಉಪಸ್ಥಿತರಿದ್ದರು."

## ಕಾರು–ಸ್ಕೂಟರ್ ಅಪಘಾತ: ಬಟ್ಟಪ್ಪಾಡಿ ನಿವಾಸಿ ಸಾವು

**ಉಳ್ಳಾಲ:** ಕಾರಿಗೆ ಸ್ಕೂಟರ್ ಢಿಕ್ಕಿ ಹೊಡೆದ ಪರಿಣಾಮ ಗಂಭೀರಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಸವಾರ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟ ಘಟನೆ ಶುಕ್ರವಾರ ತಡರಾತ್ರಿ ನಡೆದಿದೆ.

ಮೃತ ವ್ಯಕ್ತಿಯನ್ನು ಮುಹಮ್ಮದ್ ಮಹಾಝ್ ಬಟ್ಟಪ್ಪಾಡಿ (24) ಎಂದು ಗುರುತಿಸಲಾಗಿದೆ.

**ಘಟನೆ ವಿವರ:** ಜ.5 ರಂದು ರಾತ್ರಿ ಮಂಗಳೂರಿನಲ್ಲಿ ಕ್ಯಾಟರಿಂಗ್ ಕೆಲಸ ಮುಗಿಸಿ ಸ್ಕೂಟರ್‌ನಲ್ಲಿ ಊರಿಗೆ ಮರಳುತ್ತಿದ್ದು, ಈ ವೇಳೆ ಬೀರಿ ಬಳಿ ಸ್ಕೂಟರ್ ತಲಪಾಡಿ ಕಡೆ ಹೋಗುತ್ತಿದ್ದ ಕಾರಿಗೆ ಢಿಕ್ಕಿ ಆಗಿದೆ. ಇದರಿಂದ ಅವರು ರಸ್ತೆಗೆಸೆಯಲ್ಪಟ್ಟು ಗಂಭೀರ ಗಾಯಗೊಂಡಿದ್ದು, ಅವರನ್ನು ದೇರಳಕಟ್ಟೆ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ ಹೆಚ್ಚುವರಿ ಚಿಕಿತ್ಸೆಗಾಗಿ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ತಡರಾತ್ರಿ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಈ ಬಗ್ಗೆ ಮಂಗಳೂರು ದಕ್ಷಿಣ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜ.15–25ರವರೆಗೆ ಉಚ್ಚಿಲ ಉರೂಸ್

**ಉಳ್ಳಾಲ:** 407 ಜುಮಾ ಮಸೀದಿ ಸೋಮೇಶ್ವರ ಉಚ್ಚಿಲ ಇಲ್ಲಿ ಅಂತ್ಯ ವಿಶ್ರಮಿಸುತ್ತಿರುವ ಅಸಯ್ಯಿದ್ ಶರೀಫುಲ್ ಅರಬಿ ವಲಿಯುಲ್ಲಾಹಿ (ಖ.ಸಿ.) ಹೆಸರಿನಲ್ಲಿ ಪ್ರತಿ ಮೂರು ವರ್ಷಗಳಿಗೊಮ್ಮೆ ನಡೆಸಿ ಕೊಂಡು ಬರುವ ಉರೂಸ್ ಕಾರ್ಯಕ್ರಮ ಜ.15 ರಿಂದ ಜ.25ರ ವರೆಗೆ ನಡೆಯಲಿದೆ ಎಂದು ಉರೂಸ್ ಸಮಿತಿ ಕಾರ್ಯದರ್ಶಿ ಸಲಾಮ್ ಉಚ್ಚಿಲ ಹೇಳಿದರು.ಅವರು ತೊಕ್ಕೊಟ್ಟು ಪ್ರೆಸ್ ಕ್ಲಬ್ ನಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜ.15ರಂದು ಗುರುವಾರ ಅಸರ್ ನಮಾಝ್ ಬಳಿಕ ಸ್ಥಳೀಯ ಮುದರ್ರಿಸ್ ಅಲ್‌ಹಾಜ್ ಎಂ.ಪಿ.ಇಬ್ರಾಹೀಮ್ ಫೈಝಿ ಉದ್ಯಾವರರವರ ನೇತೃತ್ವದಲ್ಲಿ ಮಖಾಂ ಝಿಯಾರತ್ ನಡೆಯಲಿದೆ. ಸಂಜೆ ಏಳು ಗಂಟೆಗೆ ಉದ್ಘಾಟನೆ ಸಮಾರಂಭ ನಡೆಯಲಿದ್ದು, ಸಯ್ಯಿದುಲ್ ಉಲಮಾ ಅಸಯ್ಯಿದ್ ಜಿಫ್ರಿ ಮುತ್ತುಕೋಯ ತಂಙಳ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅಸಯ್ಯಿದ್ ಅತ್ತಾವುಲ್ಲ ತಂಙಳ್ ಉದ್ಯಾವರ ದುಆ ನೆರವೇರಿಸಲಿದ್ದಾರೆ.ಮಸೀದಿ ಅಧ್ಯಕ್ಷ ಇಸ್ಮಾಯಿಲ್ ಹಾಜಿ ಕೊಪ್ಪಳ ಅಧ್ಯಕ್ಷತೆ ವಹಿಸಲಿದ್ದಾರೆ. ಅನ್ವರ್ ಅಲಿ ಮದನಿ ಮಲಪ್ಪುರಂ ಧಾರ್ಮಿಕ ಉಪನ್ಯಾಸ





ನೀಡಲಿದ್ದಾರೆ ಸ್ಪೀಕರ್ ಯುಟಿ ಖಾದರ್ ಸಹಿತ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಜ.16ರಿಂದ ಜ.23 ವರೆಗೆ ಪ್ರತಿದಿನ ಸಂಜೆ ಏಳು ಗಂಟೆಗೆ ಧಾರ್ಮಿಕ ಉಪನ್ಯಾಸ ನಡೆಯಲಿದ್ದು ಹಲವು ಧಾರ್ಮಿಕ ಪಂಡಿತರು ಆಗಮಿಸಿ ಧಾರ್ಮಿಕ ಉಪನ್ಯಾಸ ನೀಡಲಿದ್ದಾರೆ. ಜ.21 ಬುಧವಾರ ಬೆಳಿಗ್ಗೆ 9 ಗಂಟೆಗೆ ಉಲಮಾ ಉಮರಾ ಕಾನ್ಫರೆನ್ಸ್ ನಡೆಯಲಿದ್ದು ಅನಸ್ ಅಮಾನಿ ಪುಷ್ಪಗಿರಿ ಮತ್ತು ಶಾಜಿಹು ಶಮೀಸ್ ಅಲ್ ಅಝ್ ಅರಿ ಮಲಪ್ಪುರಂ ತರಬೇತಿ ನೀಡಲಿದ್ದಾರೆ.ಸಯ್ಯಿದ್ ಅಶ್ರಫ್ ತಂಙಳ್ ಆದೂರು ಉದ್ಘಾಟಿಸಲಿದ್ದು, ಅಬ್ದುಲ್ ರಹ್ಮಾನ್ ಸಾದಾತ್ ತಂಙಳ್ ದುಆ ನೆರವೇರಿಸಲಿದ್ದಾರೆ ಎಂದರು. ಜ.24 ರಂದು ಸಂಜೆ ಏಳು ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು ಸುಲ್ತಾನುಲ್ ಉಲಮಾ ಎ.ಪಿ. ಅಬೂಬಕರ್ ಮುಸ್ಲಿಯಾರ್ ಉದ್ಘಾಟಿಸಲಿದ್ದು, ಅಬ್ದುಲ್ ಹಕೀಮ್ ಅಝ್ ಅರಿ, ಹಂಝ ಮಿಸ್ಬಾಹಿ ಓಟಪಡವು ಸಮಾರೋಪ ಉಪನ್ಯಾಸ ನೀಡಲಿದ್ದಾರೆ. ಸ್ಪೀಕರ್ ಯುಟಿ ಖಾದರ್, ವಸತಿ ಸಚಿವ ಝಮೀರ್ ಅಹ್ಮದ್, ಮಂಜೇಶ್ವರ ಶಾಸಕ ಅಶ್ರಫ್ ಸಹಿತ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದರು. ಜ.25 ರಂದು ಬೆಳಿಗ್ಗೆ 9 ಗಂಟೆಗೆ ಸಯ್ಯಿದ್ ಆಟಕೋಯ ತಂಙಳ್ ಕುಂಬೋಳ್ ರವರ ನೇತೃತ್ವದಲ್ಲಿ ಮೌಲಿದ್ ಪಾರಾಯಣ, ಬೆಳಿಗ್ಗೆ 10 ಗಂಟೆ ಯಿಂದ ಸಂಜೆ ನಾಲ್ಕು ಗಂಟೆ ವರೆಗೆ ಅನ್ನದಾನ ವಿತರಣೆ ನಡೆಯಲಿದೆ ಎಂದರು. ಸುದ್ದಿ ಗೋಷ್ಠಿಯಲ್ಲಿ ಉಚ್ಚಿಲ ಮಸೀದಿ ಅಧ್ಯಕ್ಷ ಇಸ್ಮಾಯಿಲ್ ಹಾಜಿ ಕೊಪ್ಪಳ, ಉಪಾಧ್ಯಕ್ಷ ಅಬ್ಬಾಸ್ ಹಾಜಿ ಪೆರಿಬೈಲ್, ಕೋಶಾಧಿಕಾರಿ ಹಸೈನಾರ್ ಹಾಜಿ, ಇಸಾಕ್ ಅಲಿ, ಸದಸ್ಯ ಅಹ್ಮದ್ ಪೆರಿ ಬೈಲ್ ಉಪಸ್ಥಿತರಿದ್ದರು.

# ಮೇಲ್ತೆನೆ ಇ–ಮ್ಯಾಗಝಿನ್ ಬಿಡುಗಡೆ ಕಾರ್ಯಕ್ರಮ



**ದೇರಳಕಟ್ಟೆ:** ಮೇಲ್ತೆನೆ (ಬ್ಯಾರಿ ಎಲ್ತ್‌ಕಾರ್ ಕಲಾವಿದಮಾರೊ ಕೂಟ) ವತಿಯಿಂದ ಹೊರತಂದ ಮೇಲ್ತೆನೆ ಇ–ಮ್ಯಾಗಝಿನ್ ಬಿಡುಗಡೆ ಕಾರ್ಯಕ್ರಮವು ನಾಟೆಕಲ್ ವಿಜಯನಗರದಲ್ಲಿರುವ ಇಲ್ಯೈಟ್ ಟ್ಯೂಶನ್ ಸೆಂಟರ್‌ನಲ್ಲಿ ನಡೆಯಿತು.ಈ ಸಂದರ್ಭದಲ್ಲಿ ಮೇಲ್ತೆನೆಯ ಗೌರವಾಧ್ಯಕ್ಷ ಆಲಿಕುಂಞಟಿಜಜಜಿಟಿಜಜ ಪಾರೆ, ಅಧ್ಯಕ್ಷ ಮಂಗಳೂರು ರಿಯಾಝ್, ಪ್ರಧಾನ ಕಾರ್ಯದರ್ಶಿ ಹಂಝ ಮಲಾರ್, ಕೋಶಾಧಿಕಾರಿ ವಿ. ಇಬ್ರಾಹಿಂ ನಡುಪದವು, ಉಪಾಧ್ಯಕ್ಷ ಇಬ್ರಾಹಿಂ ರಫೀಕ್ ಮುದುಂಗಾರುಕಟ್ಟೆ, ಜೊತೆ ಕಾರ್ಯದರ್ಶಿ ಸಿ.ಎಂ. ಶರೀಫ್ ಪಟ್ಟೋರಿ ಉಪಸ್ಥಿತರಿದ್ದರು. ಇದಲ್ಲದೆ ಸದಸ್ಯರಾದ ಇಸ್ಮಾಯಿಲ್ ಮಾಸ್ಟರ್, ಬಶೀರ್ ಅಹ್ಮದ್ ಕಿನ್ಯ, ಮುಹಮ್ಮದ್ ಬಾಷಾ ನಾಟೆಕಲ್, ಬಶೀರ್ ಕಲ್ಕಟ್ಟ, ಯೂಸುಫ್ ವಕ್ತಾರ್, ಅಬೂಬಕ್ಕರ್ ಹೂಹಾಕುವಕಲ್ಲು ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಎಐಯು ದಕ್ಷಿಣ–ಪೂರ್ವ ವಲಯ ಅಂತರ್ ವಿವಿ ಫುಟ್ಬಾಲ್ ಟೂರ್ನಮೆಂಟ್: ಯೆನೆಪೋಯ ವಿವಿ ಚಾಂಪಿಯನ್

**ಮಂಗಳೂರು:** ವಾಕ್ಸೆನ್ ವಿಶ್ವವಿದ್ಯಾನಿಲಯ ಹೈದರಾಬಾದ್ ಆಶ್ರಯದಲ್ಲಿ ಜ.10ರಂದು ಹೈದರಾಬಾದ್ ನಲ್ಲಿ ನಡೆದ ಎಐಯು ದಕ್ಷಿಣ–ಪೂರ್ವ ವಲಯ ಅಂತರ್ ವಿವಿ ಫುಟ್ಬಾಲ್ ಟೂರ್ನಮೆಂಟ್‌ನಲ್ಲಿ ಮಂಗಳೂರಿನ ಯೆನೆಪೋಯ ವಿಶ್ವವಿದ್ಯಾನಿಲಯವು ಚಾಂಪಿಯನ್ ಆಗಿ ಹೊರಹೊಮ್ಮಿದೆ.ಈ ಗೆಲುವಿನೊಂದಿಗೆ ಯೆನೆಪೋಯ ವಿಶ್ವವಿದ್ಯಾಲಯವು ಜ.30ರಿಂದ ಫೆ.8, ರವರೆಗೆ ಕೊಲ್ಕತ್ತಾ, ಪಶ್ಚಿಮ ಬಂಗಾಳದಲ್ಲಿ ನಡೆಯಲಿರುವ ಅಖಿಲ ಭಾರತ ಅಂತರ್ ವಿಶ್ವವಿದ್ಯಾಲಯ ಫುಟ್ಬಾಲ್ ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆದಿದೆ.

2022–23ರಿಂದ ಎಐಯು ಫುಟ್ಬಾಲ್ ಸ್ಪರ್ಧೆಯನ್ನು ನಾಲ್ಕು ವಲಯಗಳಿಂದ ಎಂಟು ವಲಯಗಳಾಗಿ ವಿಸ್ತರಿಸಿದ ನಂತರ



ಯೆನೆಪೋಯ ವಿಶ್ವವಿದ್ಯಾಲಯವು ನಿರಂತರವಾಗಿ ವಲಯ ಚಾಂಪಿಯನ್ ಆಗಿ ಅಖಿಲ ಭಾರತ ಮಟ್ಟಕ್ಕೆ ಅರ್ಹತೆ ಪಡೆಯುತ್ತಿದೆ. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಯೆನೆಪೋಯ ವಿಶ್ವವಿದ್ಯಾಲಯವು ಬೆಂಗಳೂರಿನ ಸೈಂಟ್ ಜೋಸೆಫ್ ವಿಶ್ವವಿದ್ಯಾಲಯ ತಂಡವನ್ನು 3–0 ಗೋಲುಗಳಿಂದ ಮಣಿಸಿ ಲೀಗ್ ಹಂತಕ್ಕೆ ಪ್ರವೇಶಿಸಿತು. ಲೀಗ್ ಪಂದ್ಯಗಳಲ್ಲಿ ಯೆನೆಪೋಯ ವಿಶ್ವವಿದ್ಯಾಲಯವು ಭರ್ಜರಿ ಪ್ರದರ್ಶನ ನೀಡಿತು: ತಹೇಮಚಂದ್ ಯಾದವ್ ವಿಶ್ವವಿದ್ಯಾನಿಲಯ ಎರಡನೇ ಸ್ಥಾನವನ್ನು , ಒಸ್ಮಾನಿಯಾ ವಿಶ್ವವಿದ್ಯಾನಿಲಯ ಮೂರನೇ ಸ್ಥಾನ ಮತ್ತು ಪಂ. ರವಿಶಂಕರ್ ಶುಕ್ಲ ವಿಶ್ವವಿದ್ಯಾನಿಲಯ ನಾಲ್ಕನೇ ಸ್ಥಾನ ಗಳಿಸಿದೆ. ಎಲ್ಲ ನಾಲ್ಕು ತಂಡಗಳು ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯ ಫುಟ್ಬಾಲ್ ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆದಿವೆ.ಯೆನೆಪೋಯ ವಿಶ್ವ ವಿದ್ಯಾನಿಲಯದ ತಂಡಕ್ಕೆ ಮುಖ್ಯ ಕೋಚ್ ಬಿ.ಬಿ ಥಾಮಸ್ ಮತ್ತು ಫಿಸಿಯೋಥೆರಪಿಸ್ಟ್ ನಿತಿನ್ ಮಾರ್ಗದರ್ಶನ ನೀಡಿದ್ದರು. ಯೆನೆಪೋಯ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ನಿರ್ದೇಶಕ ಹಾಗೂ ವಿಭಾಗಾಧ್ಯಕ್ಷ ಸುಜಿತ್ ಕೆ.ವಿ. ಅವರು ತಂಡದ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿದರು. ಏಳು ದಿನಗಳ ಕಾಲ ನಡೆದ ಈ ಚಾಂಪಿಯನ್‌ಶಿಪ್ 2026ರ ಜನವರಿ 10ರಂದು ಹೈದರಾಬಾದ್‌ನ ಯಶಸ್ವಿಯಾಗಿ ಮುಕ್ತಾಯಗೊಂಡಿತು

### ಮಂಗಳೂರು ವಿವಿಯಲ್ಲಿ ರಾಷ್ಟ್ರೀಯ ಯುವ ದಿನಾಚರಣೆ

# ವಿವೇಕಾನಂದರು ಸ್ವಾತಂತ್ರ್ಯ ಹೋರಾಟದ ಆತ್ಮಶಕ್ತಿಯಾಗಿದ್ದರು: ಜಿತಕಾಮಾನಂದ ಜೀ

**ಕೊಣಾಜೆ:** ವಿದೇಶದಲ್ಲಿ ಭಾರತದ ಶಕ್ತಿಯನ್ನೂ, ಭಾರತದಲ್ಲಿ ಸಾಮಾಜಿಕ ಒಳವಿಮರ್ಶೆಯನ್ನು ನಡೆಸಿದ ಸಂತ ವಿವೇಕಾನಂದರು. ಅನಕ್ಷರತೆ ಬಡತನ, ಬ್ರಿಟಿಷರು ಸೃಷ್ಟಿಸಿದ ಭ್ರಮೆಯ ನಡುವೆ ನಿಶ್ಶಕ್ತರಾಗಿದ್ದ ಭಾರತೀಯರನ್ನು ಜಾಗೃತಗೊಳಿಸಿದವರು. ಅವರು ಭಾರತದ ಸ್ವಾತಂತ್ರ್ಯ ಹೋರಾಟದ ಆತ್ಮಶಕ್ತಿಯಾಗಿದ್ದರು ಎಂದು ನೆಹರು ಅವರು ನೆನಪಿಸಿಕೊಂಡಿದ್ದರು ಎಂದು ಮಂಗಳೂರಿನ ಶ್ರೀರಾಮಕೃಷ್ಣ ಮಠದ ಶ್ರೀ ಜಿತಕಾಮಾನಂದಜೀ ಹೇಳಿದರು ಮಂಗಳೂರು ವಿವಿಯ ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರ , ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ



ಇದರ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ದಿನೋತ್ಸವ " ರಾಷ್ಟ್ರೀಯ ಯುವ ದಿನಾಚರಣೆ " ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು. ಉತ್ತರಾಖಂಡ ಅದ್ವೈತ ಆಶ್ರಮದ ಪ್ರಭುದ್ಧ ಭಾರತ ಇದರ ಸಹಸಂಪಾದಕರಾದ ಸ್ವಾಮಿ ಜ್ಞಾನೀಶಾನಂದಜಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಯಶಸ್ಸು ಮಾಹಿತಿಯಿಂದ ಸಿಗುವುದಿಲ್ಲ.ಅದು ವ್ಯಕ್ತಿತ್ವ ಮತ್ತು ಬೌದ್ಧಿಕತೆಯಿಂದ ದೊರೆಯುವುದು. ಪ್ರೇರಣೆ ಎಲ್ಲ ಕಡೆಯಿಂದಲೂ ಬರಲಿ ಆದರೆ ವ್ಯಕ್ತಿತ್ವಕ್ಕೆ ಸ್ವಂತಿಕೆ ಇರಲಿ ಎಂದರು. ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ಅವರು ಅಧ್ಯಕ್ಷತೆಯನ್ನು ವಹಿಸಿ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ನ ಮಾಜಿ ಸದಸ್ಯರಾದ ಕ್ಯಾ. ಗಣೇಶ್ ಕಾರ್ಣಿಕ್, ಹಣಕಾಸು ಅಧಿಕಾರಿ ಪಂಚಲಿಂಗ ಸ್ವಾಮಿ , ಪರೀಕ್ಷಾಂಗ ಪ್ರೊ. ದೇವೇಂದ್ರಪ್ಪ ಮೊದಲಾದವರು ಉಪಸ್ಥಿತರಿದ್ದರು. ಡಾ.ಚಂದ್ರು ಹೆಗ್ಡೆ ಸ್ವಾಗತಿಸಿದರು.ವಿಪ್ರೊ.ಪ್ರಶಾಂತ್ ನಾಯ್ಕ್ ಅವರು ವಂದಿಸಿದರು.








Ullalavani, Printed & Published by DIGANTA MUDRANA LTD 5-184/185 NEAR INDUSTRIAL AREA YEYYADI MANGALARE, DAKSHINA KANNADA, KARNATAKA - 575008. News Editor: Mohan Kuthar. Editorial Office at : Appachi Complex, Kuthar, Munnur Post, Someshwar Village, Ullal Tq - 575 017, Call : 9972528110. RNI:KNKAN/26/A0422. Email: ullalavani@gmail.com